
ಸೆಪ್ಟೆಂಬರ್ 2010

ರೂ. 10/-

# ಯುಗರಶ್ಮಿ

ತ್ರೈಮಾಸಿಕ



- ಲಾಹೋರ್ ಅಕ್ರಮಣ
- ಧಾರ್ಮಿಕ ಭೀಕರ ಕೃತ್ಯಗಳು
- ಬಾಡಿ ಹೋಗದಿರಲಿ ಆ ಮಸಣದ ಹೂವು!
- ಅವರ ಮಾನವ ಹಕ್ಕುಗಳಿಗೆ ಬೆಲೆಯಿಲ್ಲವೆ?
- ಅಹ್ಮದಿಯಾ ಖಲೀಫರ ಆಧ್ಯಾತ್ಮಿಕ ಪಂಥಾಹ್ವಾನ
- 73 ಪಾರ್ಟಿಗಳು ಮತ್ತು ಸ್ವರ್ಗ

ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ - ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.

ಪವಿತ್ರ ಖುರ್‌ಆನ್ (2:184)

10-23-1008/1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ. 10/- ವಾರ್ಷಿಕ ಚಂದಾ : ರೂ. 40/- ಅಂಚೆ ಮೂಲಕ : ರೂ. 50/-

# ಯುಗರಶ್ಮಿ

ವಿಷಯ ಸೂಚಿಕೆ

ಪುಟ


☆ ರಮಝಾನ್ - ಅನುಗ್ರಹದ ಮಾಸ 1
☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
☆ ಸತ್ಯವಿಶ್ವಾಸಿಗಳ ಮೇಲೆ ದೌರ್ಜನ್ಯ 3
☆ ಲಾಹೋರ್ ಆಕ್ರಮಣ 4
☆ ಧಾರ್ಮಿಕ ಭೀಕರ ಕೃತ್ಯಗಳು 10
☆ ಬಾಡಿ ಹೋಗದಿರಲಿ ಆ ಮಸಣದ ಹೂವು! 22
☆ ಪಾಕಿಸ್ತಾನಿ ಭೀಕರವಾದಕ್ಕೆ ಧಾರ್ಮಿಕ ಪಂಗಡಗಳ ವಿರುದ್ಧ ಹೊಸ ಆಯಾಮ 23
☆ ಅವರ ಮಾನವ ಹಕ್ಕುಗಳಿಗೆ ಬೆಲೆಯಿಲ್ಲವೇ? 24
☆ ಭೀಕರ ತಾಂಡವದ ಮುಂದೆ ಅಹ್ಮದೀ ಯುವಕರ ಧೀರತೆ 25
☆ ಲಾಹೋರ್ ಮಸೀದಿಯಲ್ಲಿ ಘಟಿಸಿದ್ದು 26
☆ ಲಾಹೋರ್‌ನಲ್ಲಿ ಎರಡು ಭೀಕರ ಆಕ್ರಮಣಗಳು 27
☆ ಲಾಹೋರ್‌ನಲ್ಲಿ ಭೀಕರ ಆಕ್ರಮಣಗಳ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ತೀವ್ರ ಖಂಡನೆ 28
☆ ಅಹ್ಮದಿಯಾ ಖಲೀಫರ ಆಧ್ಯಾತ್ಮಿಕ ಪಂಥಾಹ್ವಾನ 29
☆ ಇಸ್ಲಾಮಿನ ಪ್ರಾಥಮಿಕ ಪಾಠಗಳು 31
☆ 73 ಪಾರ್ಟಿಗಳು ಮತ್ತು ಸ್ವರ್ಗ 33
☆ ನಕಲಿ ನೀತಿ ಕಥೆ 34
☆ ಯು. ಕೆ. ವಾರ್ಷಿಕ ಸಮ್ಮೇಳನ 35
☆ ಮೌದೂದಿಯ ಪುಸ್ತಕಗಳಿಗೆ ಬಾಂಗ್ಲಾದೇಶದಲ್ಲಿ ನಿಷೇಧ 35
☆ ಗುಪ್ತ ತೀವ್ರವಾದವನ್ನು ಗುರುತಿಸಬೇಕು - ಎಸ್.ಕೆ.ಎಸ್.ಎಸ್.ಎಫ್. 36
☆ ಜಮಾಅತೆ ಇಸ್ಲಾಮಿ ರಾಜಕೀಯಕ್ಕೆ ಬರುವುದು ಅಪಾಯ : ಪಿಣರಾಯಿ 36
☆ 17 ಉಗ್ರ ಸಂಘಟನೆ ವಿರುದ್ಧ ಕಠಿಣ ಕ್ರಮ 36
☆ ಬುರ್ಖಾ ನಿಷೇಧ ಇಲ್ಲ: ಬ್ರಿಟನ್ 37
☆ ನಾಯಿಕ್ ಬ್ರಿಟನ್ ಪ್ರವೇಶಕ್ಕೆ ನಿಷೇಧ 37
☆ ಮುಸ್ಲಿಮರ ದೊಡ್ಡ ಶತ್ರು ಬಿಕ್ಕಟ್ಟು : ಸೌದಿ ರಾಜ 37
☆ ಪಾಕ್ ಪ್ರವಾಹ: ನೆರವಿಗೆ ಬಾನ್ ಮನವಿ 37
☆ ನಿಧನ ವಾರ್ತೆಗಳು 38
☆ ಅಹ್ಮದಿಯರಿಗೆ ಸುತ್ತೋಲೆ 39
☆ ಮಹ್‌ದಿ ಇಮಾಮರ ಚಿಹ್ನೆ 40


ಮುಖಪುಟ ಚಿತ್ರ : ಮಸ್‌ಜಿದ್ ನಬ್‌ವಿ, ಮದೀನ

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್ ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್,
ಕರ್ನಾಟಕ.

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 27 | ಜುಲೈ–ಸೆಪ್ಟೆಂಬರ್ 2010 | ವಫಾ–ತಬೂಕ್ 1389 | ಸಂಚಿಕೆ : 2-3 |
|---|---|---|---|---|


## ರಮಝಾನ್ – ಅನುಗ್ರಹದ ಮಾಸ

'ರಮಝ್' ಎಂಬ ಪದದ ಅರ್ಥ ಸೂರ್ಯತಾಪ ಎಂದಾಗಿದೆ. ರಮಝಾನ್ ಮಾಸದಲ್ಲಿ ಒಂದು ಕಡೆ ಜನರು ಆಹಾರ ಪಾನೀಯಾದಿಗಳನ್ನೂ ಇತರೆಲ್ಲ ಶಾರೀರಿಕ ಸುಖಗಳನ್ನೂ ತ್ಯಜಿಸುತ್ತಾರೆ. ಮತ್ತೊಂದು ಕಡೆ ದೇವಾಜ್ಞೆಗಳನ್ನು ಅನುಸರಿಸುವುದರಲ್ಲಿ ಶ್ರದ್ಧೆ ಮತ್ತು ಉತ್ಸಾಹ ಬೆಳೆಸುತ್ತಾರೆ. ರಮಝಾನ್ ಆಧ್ಯಾತ್ಮಿಕ ಮತ್ತು ಭೌತಿಕವಾದ ಈ ಜ್ವಲನಗಳ ಸಂಗಮವಾಗಿದೆ. ವ್ರತಾನುಷ್ಠಾನ ಮೊದಲು ಒಂದು ಉಷ್ಣ ಮಾಸದಲ್ಲಿ ಆರಂಭಿಸಿದುದರಿಂದ ರಮಝಾನ್ ಎಂಬ ಹೆಸರು ಬಂತು ಎಂಬ ಕೆಲವು ನಿಘಂಟುಕಾರರ ಊಹೆ ಸರಿಯಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಅದು ಅರೇಬಿಯಾಕ್ಕೆ ಮಾತ್ರ ಸೀಮಿತವಾಗಿರುವ ಒಂದು ವಿಶಿಷ್ಟ ವಿಚಾರವಲ್ಲ. ಆಧ್ಯಾತ್ಮಿಕ ಅರ್ಥದಲ್ಲಿ ರಮಝ್ ಎಂದರೆ ಆಧ್ಯಾತ್ಮಿಕ ಉತ್ಸಾಹ ಮತ್ತು ಆತ್ಮಜ್ವಲನವಾಗಿದೆ. ಕಲ್ಲುಗಳನ್ನೂ ಇತರ ವಸ್ತುಗಳನ್ನೂ ಬಿಸಿಮಾಡುವ ಉಷ್ಣಕ್ಕೂ ರಮಝ್ ಎಂದು ಹೇಳುತ್ತಾರೆ.

ಪವಿತ್ರ ಖುರ್‌ಆನ್ ಅವತೀರ್ಣವಾದ ಮಾಸ ರಮಝಾನ್ ಆಗಿದೆ. ಆತ್ಮವನ್ನು ಪ್ರಕಾಶಮಾನವಾಗಿರಿಸುವ ಅತ್ಯುತ್ತಮವಾದ ಒಂದು ಮಾಸವಾಗಿ ಸೂಫಿವರ್ಯರು ರಮಝಾನನ್ನು ಕಾಣುತ್ತಾರೆ. ಈ ಮಾಸದಲ್ಲಿ ಹೆಚ್ಚು ಹೆಚ್ಚಾಗಿ ಆಧ್ಯಾತ್ಮಿಕ ದರ್ಶನಗಳ ಮೂಲಕ ಮನುಷ್ಯನು ಅನುಗ್ರಹಿಸಲ್ಪಡುತ್ತಾನೆ.

ನಮಾಝ್ ಮನುಷ್ಯನ ಹೃದಯವನ್ನು ದೋಷಬಾಧೆಗಳಿಂದ ಶುದ್ಧೀಕರಿಸುವಾಗ ಉಪವಾಸ ಮನುಷ್ಯನ ಆತ್ಮವನ್ನು ಪ್ರಭಾವಪೂರಿತವನ್ನಾಗಿ ಮಾಡುತ್ತದೆ. ಹೃದಯದ ಶುದ್ಧೀಕರಣವೆಂದರೆ ಅನಿಯಂತ್ರಿತ ದುಷ್ಪ್ರೇರಕ ಬಂಧನಗಳಿಂದ ವಿಮುಕ್ತಿಯಾಗಿದೆ. ಆತ್ಮ ಪ್ರಭಾಪೂರ್ಣವಾಗುವ ನಿಮಿತ್ತ ಒಬ್ಬ ಸತ್ಯವಿಶ್ವಾಸಿ ಆಧ್ಯಾತ್ಮಿಕ ದರ್ಶನಗಳಿಂದ ಅನುಗ್ರಹಿಸಲ್ಪಡುತ್ತಾನೆ. ಆ ಮೂಲಕ ಅವನಿಗೆ ಅಲ್ಲಾಹನನ್ನು ಪಡೆಯಲು ಸಾಧ್ಯವಾಗುತ್ತದೆ. "ಖುರ್‌ಆನ್ ಈ ಮಾಸದಲ್ಲಿ ಅವತೀರ್ಣವಾಗಿದೆ" ಎಂಬ ವಚನದಲ್ಲಿ ಈ ವಾಸ್ತವಾಂಶದ ಸೂಚನೆ ಇದೆ. ವ್ರತಾನುಷ್ಠಾನದ ಆಜ್ಞೆಯಲ್ಲಿ ಒಂದು ಮಹತ್ತರವಾದ ಅನುಗ್ರಹ ನಿಶ್ಚಯವಾಗಿಯೂ ಅಡಕವಾಗಿದೆ. ಇದಕ್ಕೆ ಸಂಬಂಧಿಸಿ ಅಲ್ಲಾಹನೇ ಹೀಗೆ ಹೇಳುತ್ತಾನೆ: ನೀವು ವ್ರತ ಅನುಷ್ಠಿಸುವಿರಾದರೆ ನಿಮಗೆ ಅದು ದೊಡ್ಡ ದೊಡ್ಡ ಅನುಗ್ರಹಗಳಿಗೆ ಕಾರಣವಾಗುವುದು. (ಮಲ್‌ಫೂಝಾತ್)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ರಾತ್ರಿಯಲ್ಲಿ ನಮಾಝ್ ಮಾಡಿದರೆ ಅವನ ಪೂರ್ವ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)
- ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ವ್ರತಾನುಷ್ಠಾನ ಮಾಡಿದರೆ ಅವನ ಪೂರ್ವ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)
- ರಮಝಾನಿನ ಹೊರತಿರುವ ಉಪವಾಸಗಳ ಪೈಕಿ ಅತ್ಯುತ್ತಮವಾದುದು ಮುಹರ್ರಂ ಮಾಸದ ಉಪವಾಸವಾಗಿದೆ. ಹಾಗೆಯೇ ಫರ್ಝ್ ನಮಾಝ್ ನಂತರ ನಮಾಝ್‌ಗಳ ಪೈಕಿ ಅತ್ಯುತ್ತಮವಾದುದು ರಾತ್ರಿಯ ಸುನ್ನತ್ ನಮಾಝ್ ಆಗಿದೆ. (ಮುಸ್ಲಿಂ)
- ರಾತ್ರಿಯಲ್ಲಿ ಎದ್ದು ನಮಾಝ್ ಮಾಡಿದವನನ್ನೂ ಪತ್ನಿಯನ್ನು ಕರೆದು ಎಬ್ಬಿಸಿ, ಅವಳು ಏಳದಿದ್ದಾಗ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸುವವನನ್ನೂ ಅಲ್ಲಾಹು ಅನುಗ್ರಹಿಸಲಿ. ಅದೇ ಪ್ರಕಾರವೇ ರಾತ್ರಿ ಎದ್ದು ನಮಾಝ್ ಮಾಡಿ, ಪತಿಯನ್ನು ಕರೆದು ಎಬ್ಬಿಸಿ, ಅವನು ಏಳದಿದ್ದಾಗ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸುವವಳನ್ನೂ ಅಲ್ಲಾಹು ಅನುಗ್ರಹಿಸಲಿ. (ಅಬೂದಾವೂದ್)
- ನಿಮ್ಮಲ್ಲಿ ಯಾರಾದರೂ ರಾತ್ರಿ ಎದ್ದು ನಮಾಝ್ ಮಾಡುವಾಗ ಖುರ್‌ಆನ್ ಓದಲು ನಾಲಗೆಯಲ್ಲಿ ಪ್ರಯಾಸವಾಗುವುದಾದರೆ ಮತ್ತು ಹೇಳುವುದನ್ನು ಗ್ರಹಿಸಲು ಅಸಾಧ್ಯವಾಗುವುದಾದರೆ ನಿದ್ರೆ ಮಾಡಿರಿ. (ಮುಸ್ಲಿಂ)
- ಉಪವಾಸ ಗುರಾಣಿಯಾಗಿದೆ. ನಿಮ್ಮಲ್ಲಿ ಯಾರಾದರೂ ಉಪವಾಸಿಗನಾಗಿದ್ದರೆ ಆತನು ಅನಾವಶ್ಯ ಮಾತನಾಡಬಾರದು, ಜಗಳ ಮಾಡಬಾರದು, ಬೈಯ್ಯಬಾರದು. ಯಾರಾದರೂ ಜಗಳಕ್ಕೆ ಬಂದರೆ ನಾನು ಉಪವಾಸಿಗ ಎಂದು ಹೇಳಲಿ. (ಬುಖಾರಿ)
- ಯಾರು ಸುಳ್ಳು ಹೇಳುವುದರಿಂದ ಮತ್ತು ಅದಕ್ಕನುಗುಣವಾಗಿ ವರ್ತಿಸುವುದರಿಂದ ಬಿಟ್ಟು ನಿಲ್ಲುವುದಿಲ್ಲವೋ ಅವನು ಹಸಿವೆ ಮತ್ತು ದಾಹ ಸಹಿಸುವುದರಿಂದ ಏನೂ ಪ್ರಯೋಜನವಿಲ್ಲ. (ಬುಖಾರಿ)
- ರಮಝಾನ್ ಮಾಸ ಆಗಮಿಸಿದರೆ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುವುವು; ನರಕದ ಬಾಗಿಲುಗಳು ಮುಚ್ಚಲ್ಪಡುವುವು; ಶೈತಾನ್ ಬಂಧಿಸಲ್ಪಡುವನು. (ಬುಖಾರಿ)
- ನೀವು ಸಹರಿ ಉಂಡು ಉಪವಾಸ ಮಾಡಿರಿ; ಸಹರಿಯಲ್ಲಿ ಅನುಗ್ರಹವಿದೆ. (ಬುಖಾರಿ)
- ಇಫ್ತಾರ್ ಮಾಡಲು ಜನರು ಅವಸರಪಡುವ ಕಾಲ ತನಕ ಒಳಿತು ಮತ್ತು ಅನುಗ್ರಹ ಪ್ರಾಪ್ತವಾಗುವುದು. (ಬುಖಾರಿ)

"ಇನ್‌ಸಾನಿಯತ್ ಝಿಂದಾಬಾದ್"

"ಮಾನವೀಯತೆ ಚಿರಕಾಲ ಬಾಳಲಿ"

# ಸತ್ಯವಿಶ್ವಾಸಿಗಳ ಮೇಲೆ ದೌರ್ಜನ್ಯ

**"ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ಪ್ರಾರ್ಥನೆಯಿಂದ ನೀವು (ಅಲ್ಲಾಹನ) ಸಹಾಯವನ್ನು ಯಾಚಿಸಿರಿ. ಖಂಡಿತವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ. ದೇವಮಾರ್ಗದಲ್ಲಿ ಹತ್ಯೆಗೀಡಾದವರ ಕುರಿತು ಅವರು ಮೃತಪಟ್ಟವರೆಂದು ಹೇಳಬೇಡಿರಿ. ಅವರು ಮೃತರಲ್ಲ; ಜೀವಂತರು. ಆದರೆ ನೀವು ಅದನ್ನು ಗ್ರಹಿಸುವುದಿಲ್ಲ. ನಿಶ್ಚಯವಾಗಿಯೂ ನಿಮ್ಮನ್ನು ನಾವು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನನಷ್ಟ, ಪ್ರಾಣಹಾನಿ ಮತ್ತು ಫಲನಷ್ಟಗಳಿಂದಲೂ ಪರೀಕ್ಷಿಸುವೆವು. (ಓ ಪ್ರವಾದಿ,) ನೀನು ಸಹನಶೀಲರಿಗೆ ಶುಭವಾರ್ತೆಯನ್ನು ತಿಳಿಸು - ಯಾರು ತಮಗೆ ಏನಾದರೂ ವಿಪತ್ತು ಬಂದೆರಗಿದರೆ, ಅವರು (ಗಾಬರಿಗೊಳ್ಳುವುದಿಲ್ಲ, ಬದಲು) ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ ಎಂದು ಹೇಳುತ್ತಾರೋ - ಅವರ ಮೇಲೆ ತಮ್ಮ ಒಡೆಯನ ಅನುಗ್ರಹಗಳಿವೆ; (ಹಾಗೆಯೇ) ಕರುಣೆ ಸಹ. ಅವರೇ ಸತ್ಪಥದಲ್ಲಿ ನಡೆಸಲ್ಪಡುವವರು." (ಪವಿತ್ರ ಖುರ್‌ಆನ್ - ಅಧ್ಯಾಯ 2 ವಚನಗಳು 154-158)**

ಕಳೆದ ಮೇ 28ರಂದು ಲಾಹೋರಿನ ಮಾಡೆಲ್ ಟೌನಿನ ಬೈತುನ್ನೂರ್ ಮತ್ತು ಗರ್‌ಹಿ ಶಾಹುವಿನ ದಾರುದಿಕ್ರ್ ಎಂಬೀ ಎರಡು ಅಹ್ಮದಿಯಾ ಮಸೀದಿಗಳಲ್ಲಿ ಸಾವಿರಾರು ಮಂದಿ ಶುಕ್ರವಾರ ಜುಮುಅ ಪ್ರಾರ್ಥನೆಗೆ ಸೇರಿದ್ದ ಸಂದರ್ಭದಲ್ಲಿ ಉಗ್ರರು ಧಾಳಿ ನಡೆಸಿ 86 ಮಂದಿಯನ್ನು ಹುತಾತ್ಮರನ್ನಾಗಿ ಮಾಡಿದರು. ಸುಮಾರು 150 ಮಂದಿ ಗಾಯಗೊಂಡರು.

1953ರಲ್ಲಿ ಮತಾಂಧ, ಉಗ್ರಗಾಮಿ ಮುಲ್ಲಾ ಅಬುಲ್ ಆಲಾ ಮೌದೂದಿಯ ಕುಮ್ಮಕ್ಕಿನಿಂದ ಪಾಕಿಸ್ಥಾನದಲ್ಲಿ ಆರಂಭವಾದ ಅಹ್ಮದಿಯಾ ವಿರುದ್ಧ ನರಬೇಟೆ 1974ರಲ್ಲಿ ಮತ್ತು 1984ರಲ್ಲಿ ಇನ್ನೂ ಶಕ್ತಿ ಪಡೆಯಿತು. 1984ರಲ್ಲಿ ಪಾಕ್ ಅಧ್ಯಕ್ಷ ಝಿಯಾ ಹೊರಡಿಸಿದ ಅಧ್ಯಾದೇಶ ಮೂಲಕ ಅಹ್ಮದಿಯರಿಂದ ಎಲ್ಲ ವಿಧ ಧರ್ಮ ಸ್ವಾತಂತ್ರ್ಯ ಹಕ್ಕು ಮತ್ತು ಮಾನವ ಮೂಲಭೂತ ಹಕ್ಕುಗಳನ್ನು ಕಸಿಯಲಾಯಿತು. ಅಲ್ಲಿ ಅಹ್ಮದಿಯರ ಮೇಲೆ ಏನೇ ದೌರ್ಜನ್ಯ ನಡೆದರೂ ಪೋಲೀಸ್ ಇಲಾಖೆಯಿಂದಾಗಲೀ ನ್ಯಾಯಪೀಠದಿಂದಾಗಲೀ ನ್ಯಾಯ ಸಿಗುವುದಿಲ್ಲ. ಈ ಅಗ್ನಿಪರೀಕ್ಷೆಯನ್ನು ಪಾಕಿಸ್ಥಾನದ ಅಹ್ಮದಿಯರು ಮೂಕವಿಸ್ಮಿತರಾಗಿ ಸಹಿಸುತ್ತಿದ್ದಾರೆ.

ಲಾಹೋರಿನ ಮಸೀದಿಗಳಲ್ಲಿ ನಡೆದ ಹತ್ಯಾಕಾಂಡಗಳು ಅರೇಬಿಯಾದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳ ಮೇಲೆ ಮತ್ತು ರೋಮ್‌ನಲ್ಲಿ ಹಝ್ರತ್ ಈಸಾ ಮಸೀಹರ(ಅ) ಅನುಯಾಯಿಗಳ ಮೇಲೆ ನಡೆದ ಹತ್ಯಾಕಾಂಡಗಳನ್ನು ನೆನಪಿಗೆ ತರುತ್ತವೆ.

ಇಂತಹ ಘೋರ ಕೊಲೆಪಾತಕ ಘಟಿಸಿದರೂ ಅಹ್ಮದಿಯರು ರೊಚ್ಚಿಗೇಳಲಿಲ್ಲ. ತಾಳ್ಮೆಯ ಅತ್ಯುತ್ತಮ ಮಾದರಿಯನ್ನು ಅವರು ತೋರಿಸಿದರು. ಅಲ್ಲಾಹನು ಖುರ್‌ಆನಿನಲ್ಲಿ ನುಡಿದಂತೆ ಮತ್ತು ಅಹ್ಮದಿಯಾ ಖಲೀಫರ ಆದೇಶದಂತೆ ಅವರು ಸಹನೆ ಮತ್ತು ಪ್ರಾರ್ಥನೆಗಳಿಂದ ಅಲ್ಲಾಹನ ಸಹಾಯವನ್ನು ಯಾಚಿಸಿದರು. ಅವರು ತಮ್ಮೆಲ್ಲ ಭರವಸೆಗಳನ್ನು ಅಲ್ಲಾಹನ ಮೇಲಿಟ್ಟರು. ಅವರಿಗೆ ಪಾಕ್ ಸರಕಾರದ ಮೇಲೆ ಏನೂ ಭರವಸೆ ಇಲ್ಲ.

ತಾನು ಬಿತ್ತಿದ ಬೆಳೆಯನ್ನು ಪಾಕಿಸ್ಥಾನ ಖಂಡಿತವಾಗಿಯೂ ಪಡೆಯುವುದು. ದೌರ್ಜನ್ಯಕ್ಕೆ ಗುರಿಯಾದ ಸತ್ಯವಿಶ್ವಾಸಿಗಳ ನೆರವಿಗೆ ಅಲ್ಲಾಹನು ಖಂಡಿತವಾಗಿಯೂ ಬರುವನು. ನಿಸ್ಸಂಶಯವಾಗಿಯೂ ಅಲ್ಲಾಹನ ಕ್ರೋಧಕ್ಕೆ ಪಾಕಿಸ್ಥಾನ ಗುರಿಯಾಗುವುದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**"ದೌರ್ಜನ್ಯಗಾರರ ಕೃತ್ಯಗಳನ್ನು ಅಲ್ಲಾಹನು ಗಮನಿಸುವುದಿಲ್ಲವೆಂದು ನೀನು ಎಂದಿಗೂ ಭಾವಿಸಬೇಡ. ಎವೆಯಿಕ್ಕದ ಕಣ್ಣುಗಳಿಂದ ಅವರು ನೋಡುವಂತಹ ದಿನ ಬರುವ ತನಕ ಅವನು ಕಾಲಾವಕಾಶ ನೀಡಿದ್ದಾನೆ. (14:43)**

*- ಸಂಪಾದಕ*

# ಲಾಹೋರ್ ಆಕ್ರಮಣ



**ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 4-6-2010ರಂದು ಲಂಡನಿನ ಬೈತುಲ್ ಫುತೂಹ್ ಮಸೀದಿಯಲ್ಲಿ ಮಾಡಿದ ಜುಮುಅ ಖುತುಬ**

"ಯಾರು 'ಅಲ್ಲಾಹನು ನಮ್ಮ ಪ್ರಭು' ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬರುತ್ತಾರೆ. (ಅವರು ಹೇಳುವರು:) 'ನೀವು ಭಯಪಡಬೇಡಿರಿ; ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ. ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರರಾಗಿದ್ದೇವೆ. ನಿಮ್ಮ ಮನಸ್ಸು ಬಯಸುವುದೆಲ್ಲ ನಿಮಗೆ ಅಲ್ಲಿ ದೊರಕುವುದು. ನೀವು ಅವಶ್ಯಪಡುವುದೆಲ್ಲ ನಿಮಗೆ ಅಲ್ಲಿ ಲಭಿಸುವುದು. ಅದು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆದವನಿಂದ ಒಂದು ಸತ್ಕಾರವಾಗಿದೆ."

(ಪವಿತ್ರ ಖುರ್‌ಆನ್: ಅಧ್ಯಾಯ 41, ವಚನಗಳು 31-33)

ಪ್ರತಿ ವಾರದಲ್ಲೂ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಾವಿರಗಟ್ಟಲೆ ಪತ್ರಗಳು ನನಗೆ ಬರುತ್ತವೆ. ಅವುಗಳ ಪೈಕಿ, ರೋಗ ಶಮನಕ್ಕೆ ಪ್ರಾರ್ಥಿಸಲು ಅಪೇಕ್ಷಿಸುವವು ಇರಬಹುದು. ತಮ್ಮ ನಿಕಟ ಸಂಬಂಧಿಕರ ಕುರಿತು ಪತ್ರಗಳಿರಬಹುದು. ಕೆಲವರು ಮದುವೆಯ ಸಂತೋಷದಲ್ಲಿ ನನ್ನನ್ನೂ ಸೇರಿಸಿಕೊಳ್ಳುವ ಪತ್ರಗಳಿರಬಹುದು. ವಿವಾಹ ಸಂಬಂಧಗಳು ಕುದುರುವ ಪ್ರಯಾಸಗಳು ಅಡಕವಾಗಿರುವ ಪತ್ರಗಳಿರಬಹುದು. ತಮ್ಮ ಉದ್ಯೋಗ ಅಥವಾ ವ್ಯಾಪಾರ ಅನುಗ್ರಹೀತವಾಗಲಿ ಕ್ಕೋಸ್ಕರ ಪ್ರಾರ್ಥಿಸಲಿಕ್ಕೆ ಕೋರುವ ಪತ್ರಗಳಿರಬಹುದು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಕ್ಕಾಗಿ ಪ್ರಾರ್ಥಿಸಲಿಕ್ಕೆ ಮಕ್ಕಳೂ ಅವರ ಮಾತಾಪಿತರೂ ಬರೆಯುತ್ತಾರೆ. ಸಂಕ್ಷಿಪ್ತದಲ್ಲಿ ಇಂತಹ ಮತ್ತು ವ್ಯತ್ಯಸ್ತ ರೀತಿಯ ಪತ್ರಗಳು ನನಗೆ ಬರುತ್ತಿರುತ್ತವೆ. ಆದರೆ ಕಳೆದ ವಾರ ನನಗೆ ತಲುಪಿದ ಸಾವಿರಾರು ಪತ್ರಗಳು ಸಾಮಾನ್ಯವಾಗಿ ದೊರಕುವ ಪತ್ರಗಳಿಂದ ಭಿನ್ನ ರೀತಿಯವುಗಳಾಗಿವೆ. ಆ ಎಲ್ಲ ಪತ್ರಗಳ ಕೇಂದ್ರ ಬಿಂದು ಲಾಹೋರಿನ ಹುತಾತ್ಮರ ಮಹತ್ತರ ಶಹಾದತಿನ ಕುರಿತು ತಂತಮ್ಮ ಮನೋಭಾವಗಳ ಅಭಿವ್ಯಕ್ತಗಳಾಗಿದ್ದವು. ದುಃಖ ಮತ್ತು ಸಂಕಟ ಅವುಗಳಲ್ಲಿ ಪ್ರಕಟವಾಗಿದ್ದವು. ಕ್ರೋಧದ ಪ್ರಕಟನೆ ಇದ್ದರೂ ನಂತರದ ಸಾಲುಗಳಲ್ಲೇ ಆ ಕ್ರೋಧವೆಲ್ಲ ಸಹನೆ ಮತ್ತು ಪ್ರಾರ್ಥನೆಯಲ್ಲಿ ನಿಯಂತ್ರಿತವಾಗಿದ್ದವು. ಎಲ್ಲರೂ ತಮ್ಮ ಸ್ವಂತ ಸಮಸ್ಯೆಗಳನ್ನು ಮರೆತುಬಿಟ್ಟಿದ್ದರು.

ಈ ಪತ್ರಗಳು ಪಾಕಿಸ್ತಾನ, ಅರಬ್ ದೇಶಗಳು, ಭಾರತ, ಆಸ್ಟ್ರೇಲಿಯಾ, ವಿವಿಧ ದ್ವೀಪಗಳು, ಯುರೋಪು, ಅಮೇರಿಕಾ, ಆಫ್ರಿಕಾ ಮೊದಲಾದ ಕಡೆಗಳಿಂದ ಬರುತ್ತಿವೆ. ಈ ಪತ್ರಗಳಲ್ಲಿ ಪಾಕಿಸ್ತಾನಿಗಳು ಅವರ ದೇಶದವರ ವಿರುದ್ಧ ಮಾಡಿದ ಅತಿಕರ್ಮದ ಅಭಿವ್ಯಕ್ತವಲ್ಲ ಕಂಡದ್ದು. ಮುಹಮ್ಮದೀ ಮಸೀಹರ ಕೈಗಳಲ್ಲಿ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಲು ಸೌಭಾಗ್ಯ ಲಭಿಸಿದ ಪ್ರತಿಯೊಂದು ದೇಶದ ಪ್ರಜೆಯೂ ತಮ್ಮ ನಿಕಟ ಬಂಧುಗಳು ಆಕ್ರಮಿಸಲ್ಪಟ್ಟ ರೀತಿಯ ಭಾವೋದ್ವಿಗ್ನತೆಯನ್ನು ಯಥಾರ್ಥದಲ್ಲಿ ತೋರ್ಪಡಿಸಿದ್ದಾರೆ. ಅದರೊಂದಿಗೆ ಹುತಾತ್ಮರಾದವರ ಬಂಧುಗಳ ಪತ್ರಗಳು ಸಹ ಇವೆ. ಆ ಪತ್ರಗಳಲ್ಲಿ ಅವರು ನನ್ನನ್ನು ಸಾಂತ್ವನಪಡಿಸುತ್ತಿದ್ದರು. ತನ್ನ ನಿಕಟ ಬಂಧುಗಳ, ತನ್ನ ಮಕ್ಕಳ, ತನ್ನ ಪಿತನ, ತನ್ನ ಸಹೋದರನ, ತನ್ನ ಪತಿಯ ಹುತಾತ್ಮತೆಯಲ್ಲಿ ಅಲ್ಲಾಹನ ಮುಂದೆ ಅವರು ಪ್ರಕಟಿಸಿದ ಕ್ಷಮೆ ಮತ್ತು ಸಹನೆಯ ಒಂದು ಮಹತ್ ವೃತ್ತಾಂತವೇ ರಚಿಸಲ್ಪಟ್ಟಿದೆ.

ನನಗೆ ನೀಡಲಾದ ವಿವರದ ಆಧಾರದಲ್ಲಿ ಪ್ರತಿಯೊಂದು ಮನೆಗೂ ನಾನು ನೇರವಾಗಿ ಫೋನ್ ಮೂಲಕ ಸಂಪರ್ಕಿಸಿ ಅವರಿಗೆ ಸಂತಾಪ ಸೂಚಿಸಲು ಪ್ರಯತ್ನಿಸಿದೆನು. ಯಾರ ಮನೆಯಾದರೂ ಬಿಟ್ಟು ಹೋಗಿದ್ದರೆ ನನಗೆ ತಿಳಿಸಲು ಕೇಳಿಕೊಳ್ಳುತ್ತೇನೆ. ನಾನು ಪ್ರತಿಯೊಂದು ಮನೆಗೂ ಫೋನ್ ಮಾಡಿದಾಗ ಮಕ್ಕಳನ್ನೂ ಪತ್ನಿಯರನ್ನೂ ಮಾತಾಪಿತರನ್ನೂ ಅಲ್ಲಾಹನ ಇಚ್ಛೆಯಲ್ಲಿ ಸಂತೃಪ್ತರಾಗಿ ಕಂಡೆನು. ಪತ್ರಗಳಲ್ಲಿ ತಮ್ಮ ಉದ್ವೇಗಗಳನ್ನು ಅಡಗಿಸಿಡಲಿಕ್ಕೆ ಸಾಧ್ಯವಿದೆ. ಆದರೆ ಫೋನಿನಲ್ಲಿ ಅವರ ಧೀರವಾದ ಸ್ವರಗಳು ನನಗೆ ಸ್ಪಷ್ಟವಾದ ಈ ಸಂದೇಶಗಳನ್ನು ನೀಡಿವೆ: ಅಲ್ಲಾಹನು ವಿಶ್ವಾಸಿಗಳ ಪ್ರತಿಕ್ರಿಯೆಯಾಗಿ ಹೇಳಿದ "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್" (ನಾವು ಅಲ್ಲಾಹನಿಗಾಗಿ ಇರುವವರಾಗಿದ್ದೇವೆ. ಅವನ ಕಡೆಗೆಯೇ ನಾವು ಮರಳುವವರು) ಎಂಬುದು ನಾವು ಹೃತ್ಪೂರ್ವಕವಾಗಿ ಪ್ರಕಟಿಸುತ್ತೇವೆ. ನಾವು ಪೂರ್ಣ ಪ್ರಜ್ಞೆಯಿಂದ ಅಲ್ಲಾಹನ ಪ್ರೀತಿ ಕಾಂಕ್ಷಿಸುತ್ತಾ ಅಲ್ಲಾಹನ ಸಂಪ್ರೀತಿಯಲ್ಲಿ ತೃಪ್ತರಾಗಿದ್ದೇವೆ. ಒಂದೋ ಎರಡೋ ತ್ಯಾಗಗಳೇನು, ನಾವು ಸರ್ವವನ್ನೂ ನಮ್ಮ ರಕ್ತದ ಪ್ರತಿಯೊಂದು ಹನಿಯನ್ನೂ ಮಸೀಹ್ ಮೌಊದ್ (ಅಲೈಹಿಸ್ಸಲಾಂ)ರವರ ಜಮಾಅತಿಗೋಸ್ಕರ ಬಲಿಕೊಡಲು ಸನ್ನದ್ಧರಾಗಿದ್ದೇವೆ. ಇದು ನಮ್ಮ ರಕ್ತ ಮತ್ತು ನಮ್ಮ ತ್ಯಾಗವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅತಿ ಶ್ರೇಷ್ಠ ಪ್ರವಾದಿ ಮತ್ತು ಖಾತಮುಲ್‌ಅಂಬಿಯಾ ಎಂಬ ಘೋಷಣೆಯನ್ನು ಲೋಕದಲ್ಲಿ ಮಾಡುವವರು ನಾವಾಗಿದ್ದೇವೆ. ಆದ್ಯ ಶತಮಾನಗಳಲ್ಲಿ ಮುಸ್ಲಿಮರು ಪ್ರದರ್ಶಿಸಿದ ಮಾದರಿಗಳನ್ನು ನಾವು ಪುನರುಜ್ಜೀವನಗೊಳಿಸುವವರಾಗಿದ್ದೇವೆ. ಹಝ್ರತ್ ಪೈಗಂಬರರ(ಸ) ಮಹಾನ್ ಶಿಷ್ಯರ ಮಹನೀಯ ಮಾದರಿಗಳು ನಮ್ಮ ಮುಂದಿವೆ.

ಹೀಗಿರುವ ಪತ್ರಗಳನ್ನೂ ಮನೋಭಾವಗಳನ್ನೂ ಓದಿಯೂ ಆಲಿಸಿಯೂ ನನ್ನ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ನಾನು ಅಶಕ್ತನಾಗಿದ್ದೇನೆ. ಆದರೆ ಹಝ್ರತ್ ಮಸೀಹ್ ಮೌಊದರ(ಅ) ಉನ್ನತ ಲಕ್ಷ್ಯವನ್ನು ಸಾಧಿಸಲಿಕ್ಕಾಗಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದರಿಗೆ ನೀಡಿದ ಪ್ರಿಯ ಜನರು ಇವರೆಂಬ ದೃಢಜ್ಞಾನ ಈ ಮೂಲಕ ಇನ್ನೂ ವೃದ್ಧಿಯಾಯಿತು. ಇವರೆಲ್ಲ ಸಹನೆ ಮತ್ತು ಸ್ಥಿರಚಿತ್ತತೆಯ ಉತ್ತಮ ಪ್ರತೀಕಗಳಾಗಿದ್ದಾರೆ. ಇವರಿಂದ ಅಗಲಿ ಹೋದವರು ಸಹ ವಿಶ್ವಾಸ ಸ್ಥೈರ್ಯ ತೋರ್ಪಡಿಸುತ್ತಾ ಬೀಳ್ಕೊಂಡರು. ಹಾಗೆ ಅವರು ಪವಿತ್ರ ಖುರ್‌ಆನಿನ ಈ ವಚನಕ್ಕೆ ಅರ್ಹರಾದರು.

ಅವರು ಲೋಕದ ಜನರೊಡನೆ ಹೇಳುವುದೇನೆಂದರೆ, ನೀವು ನಮ್ಮನ್ನು ಮೃತರೆಂದು ಹೇಳಬಾರದು. ನಾವು ಬದುಕಿರುವವರಾಗಿದ್ದೇವೆ. ನಿತ್ಯಜೀವಿತದಲ್ಲಿ ನಾವು ಅಲ್ಲಾಹನ ಪ್ರೀತಿಯನ್ನು ಗಳಿಸಿದುದರೊಂದಿಗೆ ಅಲ್ಲಾಹನ ಧರ್ಮದ ಅಭಿವೃದ್ಧಿಗೆ ಕಾರಣರಾಗಿದ್ದೇವೆ. ನಮ್ಮ ಪ್ರತಿಯೊಂದು ಬಿಂದು ರಕ್ತದಿಂದ ಸಾವಿರಗಟ್ಟಲೆ ಫಲವೃಕ್ಷಗಳು ಬೆಳೆದು ಹರಡುವುವು. ದೇವದೂತರು ತಮ್ಮ ಮಡಿಲಲ್ಲಿ ನಮ್ಮನ್ನು ಕುಳ್ಳಿರಿಸಿದ್ದಾರೆ. ನಮ್ಮ ಜೀವವನ್ನು ದಾನಮಾಡುವಾಗ ನಮಗೆ ಎಲ್ಲಿ ಎಷ್ಟು ಗುಂಡುಗಳು ತಗಲಿವೆ ಎಂದು ತಿಳಿಯಲಾಗಲಿಲ್ಲ. ಗ್ರೆನೇಡ್‌ನಿಂದ ಉಂಟಾದ ಗಾಯಗಳೂ ನಮಗೆ ತಿಳಿಯಲಾಗಲಿಲ್ಲ.

ಕ್ಷಮೆ ಮತ್ತು ಸಹನೆಯ ಮೂರ್ತ ರೂಪವಾದ ಇವರು ಅಲ್ಲಾಹನ

ಪ್ರೀತಿ ಗಳಿಸಲಿಕ್ಕಾಗಿ ಪ್ರತಿಜ್ಞಾಬದ್ಧರಾಗಿದ್ದರು. ಧರ್ಮಕ್ಕೋಸ್ಕರ ತಮ್ಮ ಜೀವವನ್ನು ಬಲಿಕೊಟ್ಟ ಇವರು ತಮ್ಮ ಗಾಯಗಳಿಂದ ಹರಿಯುತ್ತಿರುವ ರಕ್ತವನ್ನು ತಾಸುಗಟ್ಟಲೆ ಕಂಡಿದ್ದರು. ಆದರೆ ಏನೂ ವಿಲಪಿಸದೆ ಪ್ರಾರ್ಥನೆ ಮೂಲಕ ಮತ್ತು ಸಲಾತ್ ಹೇಳುತ್ತಾ ಅಲ್ಲಾಹನ ಪ್ರೀತಿಗಳಿಸಲಿಕ್ಕಾಗಿ ಆ ನಿಮಿಷಗಳನ್ನು ಉಪಯೋಗಿಸಿದರು. ನೋವನ್ನು ನುಂಗಿ ಕೊನೆಯ ಶ್ವಾಸ ತನಕ ಅವರು ಪೈಗಂಬರರ ಮೇಲೆ ಸಲಾತ್ ಹೇಳುತ್ತಿದ್ದರು. ಅವರು ಮುಹಮ್ಮದೀ ಮಸೀಹರೊಡನೆ ತಾವು ಮಾಡಿದ ಪ್ರತಿಜ್ಞೆ ತಾವಿದೋ ನೆರವೇರಿಸುತ್ತಿದ್ದೇವೆ ಎಂಬ ಭರವಸೆಯನ್ನು ಅಲ್ಲಾಹನಿಗೂ ಪೈಗಂಬರರಿಗೂ ನೀಡಿದರು. ಘಾಸಿಗೊಂಡ ಒಬ್ಬ ವ್ಯಕ್ತಿ ತನ್ನ ಮೊಬೈಲ್ ಫೋನಿನಲ್ಲಿ ರಿಕಾರ್ಡ್ ಮಾಡಿದ ಯಾತನಾಮಯವಾದ ಒಂದು ರಂಗವನ್ನು ನಾನು ಕಂಡಿದ್ದೇನೆ. ಅದನ್ನು ಕಂಡಾಗ ಹೃದಯದಲ್ಲಿ ವಿವರಿಸಲಾಗದ ಒಂದು ಸ್ಥಿತಿಯುಂಟಾಯಿತು.

ಇವರು ಅಲ್ಲಾಹನಿಗೋಸ್ಕರ ಜೀವತ್ಯಾಗ ಮಾಡಿದರು. ಅದರೊಂದಿಗೆ ದೇವದೂತರು ಇವರಿಗೆ ಸಮಾಧಾನ ಪ್ರದಾನ ಮಾಡಿದರು. ತಾಸುಗಟ್ಟಲೆ ಯಾವ ವಿಧ ಪ್ರಯಾಸವನ್ನೂ ಪ್ರಕಟಿಸದೆ ಕ್ಷಮೆ ಮತ್ತು ಸಹನೆಯ ಮಕುಟೋದಾಹರಣೆಗಳಾಗಿ ಇವರು ಮಾರ್ಪಟ್ಟರು. ಲಾಹೋರಿನಲ್ಲಿರುವ ಒಬ್ಬ ಬಾಲಕ ನನ್ನೊಡನೆ ಫೋನ್‌ನಲ್ಲಿ ಹೇಳಿದನು: 19 ವಯಸ್ಸಿನ ತನ್ನ ಸಹೋದರನಿಗೆ ನಾಲ್ಕೋ ಐದೋ ಗುಂಡು ತಾಗಿದ್ದವು. ಅವನು ತಾಸುಗಟ್ಟಲೆ ಅಲ್ಲೇ ಮಲಗಿದನು. ತನ್ನ ಸ್ಥಾನದಿಂದ ಅಲುಗಾಡಲಿಲ್ಲ. ಅವನು ಪ್ರಾರ್ಥಿಸುತ್ತಾ ಇದ್ದನು. ಪೊಲೀಸ್ ತಕ್ಕ ಸಮಯದಲ್ಲಿ ತಲುಪಿದ್ದರೆ ಎಷ್ಟೋ ಅಮೂಲ್ಯ ಜೀವಗಳನ್ನು ರಕ್ಷಿಸಬಹುದಾಗಿತ್ತು. ಅಲ್ಲಿ ಇರುವ ಪೊಲೀಸ್ ವ್ಯವಸ್ಥೆ ಎಲ್ಲವೂ ಅಸ್ತವ್ಯಸ್ತವಾಗಿದೆ. ಅವರಿಂದ ಒಳಿತೇನೂ ಪ್ರತೀಕ್ಷಿಸುವಂತಿಲ್ಲ.

ಒಬ್ಬ ಯುವಕ, ಶತ್ರು ಎಸೆದ ಗ್ರೆನೇಡನ್ನು ಕೈಯಿಂದ ತಡೆದು ನಿಲ್ಲಿಸಿ ತಿರುಗಿ ಅವನೆಡೆಗೆಯೇ ಎಸೆಯಲು ಪ್ರಯತ್ನಿಸುವಾಗ ಗ್ರೆನೇಡ್ ಸ್ಫೋಟಗೊಂಡಿತು. ಹಾಗೆ ಆ ಯುವಕ ತನ್ನ ಜೀವವನ್ನು ತ್ಯಾಗಮಾಡಿ ಇತರರ ಜೀವವನ್ನು ರಕ್ಷಿಸಿದನು.

ಓರ್ವ ವೃದ್ಧ ವ್ಯಕ್ತಿ ತನ್ನ ಜೀವವನ್ನು ಆಹುತಿ ನೀಡಿ ಯುವಕರನ್ನೂ ಮಕ್ಕಳನ್ನೂ ರಕ್ಷಿಸಿದರು. ದುಷ್ಕರ್ಮಿಯ ಮುಂದೆ ಅವರು ಓಡಿಹೋಗಿ ಅವನು ಹಾರಿಸಿದ ಗುಂಡುಗಳ ಮುಂದೆ ತನ್ನ ಎದೆಯೊಡ್ಡಿದರು. ಈ ದಿನ ಪೊಲೀಸ್ ಐ.ಜಿ. ಬಹಳ ಅಭಿಮಾನದಿಂದ ಹೇಳಿದ್ದು ಪೊಲೀಸ್ ಇಬ್ಬರು ಭಯೋತ್ಪಾದಕರನ್ನು ಸೆರೆಹಿಡಿದರೆಂದು. ಸತ್ಯ ಮತ್ತು ಅಸತ್ಯವನ್ನು ತೀರಾ ಬೇರ್ಪಡಿಸಿ ತಿಳಿಯಲು ಸಾಧ್ಯವಾಗದವರಾಗಿ ಮಾರ್ಪಟ್ಟರೆ ಹೀಗಿರುವ ಹೇಳಿಕೆಗಳೇ ಹೊರಡುವುವು. ಇಬ್ಬರು ಭಯೋತ್ಪಾದಕರನ್ನು ಹಿಡಿದದ್ದು ನಮ್ಮ ಯುವಕರಾಗಿದ್ದಾರೆ. ಹಿಡಿದವರ ಪೈಕಿ ಒಬ್ಬನು ಕೃಶ ಕಾಯನಾಗಿದ್ದನು. ಆದರೆ ವಿಶ್ವಾಸದಲ್ಲಿ ಅವನು ದೃಢತೆಯುಳ್ಳವನಾಗಿದ್ದನು. ಒಂದು ಕೈಯಿಂದ ದುಷ್ಕರ್ಮಿಯ ಕತ್ತನ್ನು ಅದುಮಿ ಹಿಡಿದು ಆ ಧೀರ ಯುವಕ ಇನ್ನೊಂದು ಕೈಯಿಂದ, ದುಷ್ಕರ್ಮಿ ಕಟ್ಟಿಕೊಂಡಿದ್ದ ಆತ್ಮಹತ್ಯಾ ಜ್ಯಾಕೇಟಿನ ಗ್ರೆನೇಡ್ ಪಿನ್ ಎಳೆದು ಸ್ಫೋಟಗೊಳಿಸಲು ಪ್ರಯತ್ನಿಸಿದಾಗ, ಅವನ ಕೈ ಬಟನಿಗೆ ತಲಪದಂತೆ ತಡೆದನು.

ಈ ಭಯೋತ್ಪಾದಕರು ಕಿರಿಯ ಪ್ರಾಯದವರಾಗಿದ್ದಾರೆ. ಅವರು 18 ಮತ್ತು 22 ವರ್ಷಗಳ ಮಧ್ಯೆ ಪ್ರಾಯದವರಾಗಿದ್ದಾರೆ. ಸಣ್ಣ ಪ್ರಾಯದಲ್ಲೇ ದಾರಿದ್ರ್ಯ ಕಾರಣ ಆಕ್ರಮಣದ ಸೂತ್ರಧಾರರ ವಶಕ್ಕೆ ಇವರು ಬರುತ್ತಾರೆ. ಧಾರ್ಮಿಕ ಅಧ್ಯಯನದ ಹೆಸರು ಹೇಳಿ ಅವರಿಗೆ ಭಯೋತ್ಪಾದನಾ ಚಟುವಟಿಕೆಗಳನ್ನು ಕಲಿಸುತ್ತಾರೆ. ಬ್ರೈನ್‌ವಾಶ್‌ಗೆ ಗುರಿಯಾದ ಇವರು ಆತ್ಮಹತ್ಯಾ ಸ್ಫೋಟನೆಗಳಲ್ಲಿ ಸತ್ತರೆ ಸ್ವರ್ಗ ಸಿಗುವುದೆಂದು ಭಾವಿಸುತ್ತಾರೆ. ಯಥಾರ್ಥದಲ್ಲಿ ಇದು ಅಲ್ಲಾಹನ ಕ್ರೋಧಕ್ಕೆ ಗುರಿಯಾಗುವ ಮರಣವಾಗಿದೆ. ಈ ಭಯೋತ್ಪಾದಕರ ನಾಯಕರು ಎಂದಿಗೂ ಮುಂದೆ ಬರುವುದಿಲ್ಲ. ಅವರು ತಮ್ಮ ಮಕ್ಕಳನ್ನು ಈ ಕಾರ್ಯಕ್ಕೆ ವಿನಿಯೋಗಿಸುವುದಿಲ್ಲ. ಹೀಗಿರುವ ಜೀವಾಹುತಿಗಳಿಗೆ ಅವರು ದರಿದ್ರರ ಮಕ್ಕಳನ್ನು ಬ್ರೈನ್‌ವಾಶ್ ಮಾಡಿ ಉಪಯೋಗಿಸುತ್ತಾರೆ.

ದೇವದೂತರು ಇಳಿದು ಬಂದು ಸಮಾಧಾನದ ಶುಭಾಶಯ ನೀಡುವರು ಎಂಬ ರಂಗ ಘಾಸಿಗೊಂಡವರಲ್ಲಿ ನಾವು ಕಂಡ ರೀತಿಯಲ್ಲೇ ಹುತಾತ್ಮರ ವಾರೀಸುದಾರರಲ್ಲೂ ಈ ಸಮಾಧಾನದ ಸ್ಥಿತಿಯನ್ನು ನಮಗೆ ಕಾಣಲು ಸಾಧ್ಯವಾಗುತ್ತದೆ. ಈ ಕಾಲದ ಇಮಾಮನ್ನು ನಂಬಿದ ಕಾರಣ ಅವರಿಗೆ ಲಭಿಸಿದ ವಿಶ್ವಾಸದ ಫಲ ಇದಾಗಿದೆ. ಇಲ್ಲಿ ಸಹ ಅಲ್ಲಾಹನು ದೇವದೂತರನ್ನು ಕಳುಹಿಸಿ 'ನನ್ನ ಭಕ್ತದಾಸರಿಗೆ ಸಮಾಧಾನವನ್ನು ನೀಡಿರಿ' ಎಂದು ಹೇಳಿದನು. ಪ್ರಾರ್ಥಿಸುವವರಿಗೆ ನೀವು ಸಮಾಧಾನ ಮತ್ತು ಮನಃಶಾಂತಿ ಪ್ರದಾನ ಮಾಡಿರಿ ಎಂದು ಸಹ ದೇವದೂತರಿಗೆ ಆದೇಶಿಸಿದನು.

ಎಲ್ಲ ಮನೆಗಳಲ್ಲೂ ನನಗೆ ಈ ದೃಶ್ಯವನ್ನು ಕಾಣಲು ಸಾಧ್ಯವಾಯಿತು. ಇವರ ಈ ಮಾದರಿಯನ್ನು ಕಾಣುವಾಗ ಹಝ್ರತ್ ಮಸೀಹ್ ಮೌಊದ್‌ರಿಗೆ ಯಾವೆಲ್ಲ ರೀತಿಯ ಜನರನ್ನು ಅಲ್ಲಾಹನು ನೀಡಿದ್ದಾನೆ ಎಂದು ನೆನಸಿ ಆಶ್ಚರ್ಯವಾಗುತ್ತದೆ. ಪ್ರತಿಯೊಬ್ಬರೂ 'ನನ್ನ ಮನೋವ್ಯಥೆ ಮತ್ತು ದುಃಖ ಎಲ್ಲವನ್ನೂ ನಾನು ಅಲ್ಲಾಹನ ಮುಂದೆ ಸಮರ್ಪಿಸುತ್ತೇನೆ' ಎಂಬ ಅವಸ್ಥೆಯಲ್ಲಿದ್ದರು. ಒಬ್ಬ ವಿಶ್ವಾಸಿಯನ್ನು ಇತರರಿಂದ ಬೇರ್ಪಡಿಸುವ ಚಿಹ್ನೆ ಸಹ ಇದಾಗಿದೆ. ದುಃಖ ಉಂಟಾಗುವಾಗ ಸಹನೆ ಕೈಗೊಳ್ಳಬೇಕೆಂದು ಅಲ್ಲಾಹನು ವಿಶ್ವಾಸಿಗಳಿಗೆ ಆಜ್ಞಾಪಿಸುತ್ತಾನೆ. ಅಲ್ಲಾಹನು ಹೇಳುತ್ತಾನೆ:

**"ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ಪ್ರಾರ್ಥನೆಯಿಂದ ನೀವು (ಅಲ್ಲಾಹನ) ಸಹಾಯವನ್ನು ಯಾಚಿಸಿರಿ. ಖಂಡಿತವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ." (2:154)**

ಅಲ್ಲಾಹನ ದಾಸನು ಅವನ ಮುಂದೆ ಎಲ್ಲವನ್ನೂ ಸಮರ್ಪಿಸುತ್ತಾನೆ. ಅಳುತ್ತಾ ಬೊಬ್ಬಿಡುವುದಕ್ಕೆ ಬದಲು, ಕೋಲಾಹಲ ಮತ್ತು ಪ್ರತಿಭಟನೆಯ ಪ್ರದರ್ಶನಕ್ಕೆ ಬದಲು, ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಬದಲು ಕ್ಷಮೆ, ಸಹನೆ, ಪ್ರಾರ್ಥನೆಗಳಿಂದ ತನ್ನ ಭಾವೋದ್ರೇಕವನ್ನು ನಿಯಂತ್ರಿಸುವಾಗ ಅವರು ಅಲ್ಲಾಹನ ಸುವಾರ್ತೆಗಳಿಗೆ ಅರ್ಹರಾಗುತ್ತಾರೆ. ಸತ್ವ ಪರೀಕ್ಷೆ ಉಂಟಾಗುವುದೆಂದು ವಿಶ್ವಾಸಿಗಳೊಡನೆ ಮೊದಲೇ ಹೇಳಲಾಗಿದೆ. ಖುರ್‌ಆನ್ ಹೀಗೆ ಹೇಳುತ್ತದೆ:

ಸಹನೆ ಕೈಗೊಂಡು ಪ್ರಾರ್ಥನಾ ನಿರತರಾಗುವವರಿಗೆ ಸಂತೋಷದ ಸುವಾರ್ತೆಯನ್ನು ಅಲ್ಲಾಹನು ನೀಡುತ್ತಾನೆ. ತನ್ನ ಪ್ರೀತಿಯ ಸ್ವರ್ಗದ ಕುರಿತು ಅವರಿಗೆ ತಿಳಿಸುತ್ತಾನೆ. ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾಗುವವರಿಗೆ ಸ್ವರ್ಗದ ಸುವಾರ್ತೆ ಇದೆ. ಅಲ್ಲಾಹನ ಪ್ರೀತಿಗನುಸಾರವಾಗಿ ಈ ಲೋಕದಲ್ಲಿ ಜೀವಿಸುವವರಿಗೂ ಸ್ವರ್ಗದ ಸುವಾರ್ತೆ ಇದೆ. ಅಲ್ಲಾಹನ ಪ್ರೀತಿ ಗಳಿಸುವುದು ಎಂಬುದು ಅವರ ಜೀವಿತದ ಗುರಿ.

ನಾನು ಮೊದಲು ಓದಿದ ಖುರ್‌ಆನ್ ವಚನಗಳಲ್ಲಿ ವಿಶ್ವಾಸಿಗಳಲ್ಲುಂಟಾಗುವ ಈ ರೀತಿಯ ಲಕ್ಷಣಗಳ ಕುರಿತು ಹೇಳಲಾಗಿದೆ. ಸತ್ವ ಪರೀಕ್ಷೆಯ ಘಟ್ಟಗಳಲ್ಲಿ ಸ್ಥಿರಚಿತ್ತತೆ ತೋರ್ಪಡಿಸುವವರಿಗೆ ದೇವದೂತರು ಇಳಿದು ಬಂದು ಮನಃಸಮಾಧಾನ ನೀಡುತ್ತಾರೆ. ವಿಶ್ವಾಸಿಗಳು ನಾನಾ ಭಾಗಗಳಿಂದ ಪರೀಕ್ಷಿಸಲ್ಪಡುವಾಗ, ಅವರ ಜೀವ ಸಹ ಅಪಾಯದಲ್ಲಿರುವಾಗ, ಅವರ ಸಂಪತ್ತು ನಷ್ಟ ಹೊಂದುವಾಗ ಅಥವಾ ಅದಕ್ಕೋಸ್ಕರ ಪ್ರಯತ್ನಿಸುವಾಗ, ಅವರ ಅಭಿಮಾನಕ್ಕೆ ಹಾನಿಯುಂಟಾಗುವಾಗ ಅಥವಾ ಅದಕ್ಕೋಸ್ಕರ ಪ್ರಯತ್ನಿಸುವಾಗ,

ಅಲ್ಲಾಹನ ಸಹಾಯ ನಾನಾ ಭಾಗಗಳಿಂದ ಪೂರ್ಣವಾಗಿ ತಡೆಯಲ್ಪಟ್ಟಿದೆಯೆಂದು ತೋರುವಾಗ, ಸಹನಶೀಲರಿಗೆ ಸುವಾರ್ತೆಗಳಿವೆ ಎಂದು ಮನವರಿಕೆ ಮಾಡಿ ಅಚಂಚಲವಾಗಿ ದೃಢಚಿತ್ತರಾಗಿ ನಿಲ್ಲುವಾಗ ಅವರು ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗುತ್ತಾರೆ. ಅವರು ಅಲ್ಲಾಹನ ಸಂರಕ್ಷಣೆಯಲ್ಲಿ ಇರುತ್ತಾರೆ. ಪಕ್ಕನೆ ವಿಜಯ, ಉನ್ನತಿ ಮತ್ತು ಸಹಾಯದ ಕವಾಟಗಳು ಅವರಿಗೋಸ್ಕರ ತೆರೆಯಲ್ಪಡುವುವು. ಹೀಗೆ ಒಂದು ವಿಜಯವನ್ನು ವಿಶ್ವಾಸಿಗಳು ಕೂಡ ಪ್ರತೀಕ್ಷಿಸಿರಲಿಕ್ಕಿಲ್ಲ. ಮನುಷ್ಯನು ಚಿಂತಿಸಲಿಕ್ಕೆ ಕೂಡ ಸಾಧ್ಯವಾಗದ ರೀತಿಯ ಅದ್ಭುತಗಳನ್ನು ಅಲ್ಲಾಹನು ಪ್ರತ್ಯಕ್ಷಗೊಳಿಸುತ್ತಾನೆ.

ಸಂಕ್ಷಿಪ್ತದಲ್ಲಿ, ಇಸ್ತಿಖಾಮತ್ (ಸ್ಥಿರಚಿತ್ತತೆ) ಅನಿವಾರ್ಯವಾಗಿದೆ. ಲಾಹೋರಿನ ಅಹ್ಮದಿಯರು ಈ ಅಚಂಚಲ ಮಾದರಿ ಪ್ರದರ್ಶಿಸಿದರು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

ಅಲ್ಲಾಹನು ತಮ್ಮ ಪ್ರಭುವೆಂದು ಹೇಳಿ ಮಿಥ್ಯ ದೈವಗಳಿಂದ ಅಗಲಿ, ಆ ಬಳಿಕ ಸ್ಥಿರಚಿತ್ತತೆ ತೋರ್ಪಡಿಸಿ ವಿವಿಧ ಕಷ್ಟಗಳನ್ನು ಎದುರಿಸುತ್ತಿರುವಾಗ ಸಹನೆ ಕೈಗೊಳ್ಳುವವರಿಗೆ, ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ, ವ್ಯಥೆಗೊಳ್ಳುವುದೂ ಬೇಡ. ಬದಲು, ನೀವು ಸಂತೋಷಪಡಿರಿ. ಹರ್ಷದಿಂದ ನಿಮ್ಮನ್ನು ತುಂಬಿಸಿಕೊಳ್ಳಿರಿ. ಏಕೆಂದರೆ, ನಿಮಗೆ ವಾಗ್ದಾನ ಮಾಡಲ್ಪಟ್ಟ ಸ್ವರ್ಗ ಸುಖದ ಹಕ್ಕುದಾರರಾಗಿ ನೀವು ಮಾರ್ಪಟ್ಟಿರುವಿರಿ. ಈ ಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಸಹಾಯಕರಾಗಿದ್ದೇವೆ. ಈ ವಚನಗಳ ಮೂಲಕ ಅಲ್ಲಾಹನು ಇಲ್ಲಿ ಪ್ರಕಟಿಸುವುದೇನೆಂದರೆ, ಸ್ಥಿರಚಿತ್ತರಾಗಿ ನಿಂತರೆ ಅಲ್ಲಾಹನ ಪ್ರೀತಿ ಗಳಿಸಲು ಸಾಧ್ಯ. ಸ್ಥಿರಚಿತ್ತತೆ ಎಂಬುದು ಅದ್ಭುತ ದೃಷ್ಟಾಂತಗಳಿಗಿಂತ ಮಿಗಿಲಾದುದು. ನಾನಾ ಭಾಗಗಳಿಂದ ಕಷ್ಟ ಕ್ಲೇಶಗಳು ಸುತ್ತುವರಿದು ಅಲ್ಲಾಹನ ಮಾರ್ಗದಲ್ಲಿ ಜೀವ, ಅಭಿಮಾನ, ಸಂಪತ್ತು ಅಪಾಯಕ್ಕೀಡಾಗಿ, ಎಷ್ಟರ ಮಟ್ಟಿಗೆಂದರೆ, ಸತ್ವ ಪರೀಕ್ಷೆ ಎಂಬ ರೀತಿಯಲ್ಲಿ ಮನಸ್ಸಿಗೆ ಸಮಾಧಾನ ನೀಡುವ ಜಾಗೃತ ದರ್ಶನಗಳೂ ಪ್ರಕಟನೆಗಳೂ ಸ್ವಪ್ನಗಳೂ ಎಲ್ಲವನ್ನೂ ಅಲ್ಲಾಹನು ಸ್ಥಗಿತಗೊಳಿಸಿ ಭಯವಿಹ್ವಲವಾದ ಒಂದು ಅವಸ್ಥೆಗೆ ಬಿಟ್ಟು ಬಿಟ್ಟರೂ ಎಂದಿಗೂ ಧೈರ್ಯಕ್ಷಯ ಪ್ರಕಟಿಸದಿರುವುದೇ ಯಥಾರ್ಥ ಸ್ಥಿರಚಿತ್ತತೆ. ಭೀರುಗಳಂತೆ ಹಿಂಜರಿಯಬಾರದು. ಪ್ರಾಮಾಣಿಕತೆಯಲ್ಲೂ ಸಹಭಾಗಿತ್ವದಲ್ಲೂ ತುಸುವಾದರೂ ವಿಘ್ನವಾಗಬಾರದು. ಸತ್ಯಸಂಧತೆ ಮತ್ತು ಸ್ಥಿರನಿಶ್ಚಯಕ್ಕೂ ಘಾಸಿಯಾಗಬಾರದು. ಕಿರಿಮೆಯಲ್ಲೂ ಅಪಮಾನ ಸ್ಥಿತಿಯಲ್ಲೂ ಹರ್ಷಗೊಳ್ಳಿರಿ. ಮರಣದಲ್ಲಿ ಸಂತೃಪ್ತರಾಗಿರಿ. ಸ್ವಂತ ಹೆಜ್ಜೆಯನ್ನು ಭದ್ರಗೊಳಿಸಲಿಕ್ಕಾಗಿ ಯಾವ ಸ್ನೇಹಿತನ ಸಹಾಯವನ್ನಾಗಲಿ ಪ್ರತೀಕ್ಷಿಸಬೇಡಿರಿ. ಆ ಸಮಯದಲ್ಲಿ ದೇವನ ಸುವಾರ್ತೆಗಳನ್ನು ಕೂಡ ಪ್ರತೀಕ್ಷಿಸದೆ ಬಲಹೀನತೆಯಲ್ಲೂ ನಿಸ್ಸಹಾಯಕತೆಯಲ್ಲೂ ಮನಚಾಂಚಲ್ಯ ತೋರಿಸದೆ, ಗೋಳಿಡದೆ ದೇವಾಭಿಷ್ಟದಲ್ಲಿ ಸಂತೃಪ್ತನಾಗಿ ಆತ್ಮತ್ಯಾಗಕ್ಕಿರುವ ಸನ್ನದ್ಧತೆಯೊಂದಿಗೆ ಮುನ್ನಡೆಯಿರಿ. ಹೀಗೆ ನಾನಾ ಮುಖವಾದ ಪರೀಕ್ಷಾ ಘಟ್ಟವನ್ನು ವಿಜಯಕರವಾಗಿ ನಿಭಾಯಿಸುವ ಸ್ಥಿರಭಕ್ತಿ ದೇವದರ್ಶನಕ್ಕೆ ಪರ್ಯಾಪ್ತವಾಗುತ್ತದೆ. ಈ ಮಹತ್ತಾದ ಸ್ಥಿರೋತ್ಸಾಹದ ಆತ್ಮಸೌರಭ ಪ್ರವಾದಿಗಳ ಮತ್ತು ಪುಣ್ಯಾತ್ಮರುಗಳ ಸಮಾಧಿಗಳಿಂದ ಈಗಲೂ ಬೀಸುತ್ತಿರುತ್ತದೆ.

ಇಂದು ನಮ್ಮ ಹುತಾತ್ಮರ ಸಮಾಧಿ ಮಣ್ಣಿನಿಂದಲೂ ಈ ಸೌರಭ ಬೀಸುತ್ತಲಿದೆ. ಅದು ನಮ್ಮ ಮಸ್ತಿಷ್ಕದಲ್ಲಿ ಪರಿಮಳವನ್ನು ಹರಡುತ್ತಿದೆ. ಅವರ ಸ್ಥಿರತೆ ನಮ್ಮೊಡನೆ ಕರೆದು ಹೇಳುವುದೇನೆಂದರೆ, ನೀವು ಕೈಗೊಂಡಿರುವ ಈ ಸ್ಥಿರಚಿತ್ತತೆಯನ್ನು ಎಂದಿಗೂ ಕೈಬಿಡಬಾರದು. ಅಲ್ಲಾಹನು ತನ್ನ ವಾಗ್ದಾನವನ್ನು ಖಂಡಿತವಾಗಿಯು ಈಡೇರಿಸುವನು. ಸತ್ವಪರೀಕ್ಷೆಗಳ ಅವಧಿ ದೀರ್ಘವಾಗುವ ಕಾರಣದಿಂದ ನಿಮ್ಮ ಕಾಲುಗಳನ್ನು ಕುಸಿಯಲು ಬಿಡಬಾರದು. ಕೃತಘ್ನತೆಯ ಒಂದು ಮಾತು ಕೂಡ ಎಂದಿಗೂ ನಿಮ್ಮ ನಾಲಗೆಯಿಂದ ಬಾರದಂತೆ ಜಾಗ್ರತೆವಹಿಸಿರಿ.

ಈ ಹುತಾತ್ಮರ ಬಗ್ಗೆ ಕೆಲವರು ಒಳ್ಳೆಯ ಸ್ವಪ್ನಗಳನ್ನು ಕಂಡಿದ್ದಾರೆ. ಅವರು ಸಂತೋಷದಿಂದ ಸ್ವರ್ಗದಲ್ಲಿ ಸಂಚರಿಸುತ್ತಿದ್ದಾರೆ. ಮಾತ್ರವಲ್ಲ, ಬಿರುದುಗಳನ್ನು ನೀಡಿ ಅವರನ್ನು ಗೌರವಿಸಲಾಗುತ್ತದೆ. ಲೌಕಿಕವಾದ ಬಿರುದುಗಳು ದೊಡ್ಡ ದೊಡ್ಡ ಸೇವೆಗಳನ್ನು ಸಲ್ಲಿಸಿದ ಬಳಿಕ ಲಭಿಸುತ್ತವೆ. ಇಲ್ಲಿ ಯುವಕರಿಗೆ ಯೌವನದಲ್ಲೇ ಬಿರುದುಗಳು ಲಭಿಸುತ್ತವೆ. ಆದುದರಿಂದ ನಮ್ಮ ಅಳು ಮತ್ತು ನಮ್ಮ ದುಃಖ ಅಲ್ಲಾಹನ ಮುಂದೆ ನಾವು ಸಮರ್ಪಿಸುತ್ತೇವೆ. ಅದರಲ್ಲಿ ನಾವು ಏನೂ ಕೊರತೆ ಮಾಡಬಾರದು.

ಲಾಹೋರ್‌ನಲ್ಲಿರುವವರ ಕುರಿತು ಹಝ್ರತ್ ಮಸೀಹ್ ಮೌಊದ್‌ರಿಗೆ ಹೀಗೆ ದೇವಸಂದೇಶ ಲಭಿಸಿತು: "ಲಾಹೋರ್‌ನಲ್ಲಿ ನಮ್ಮ ಪರಿಶುದ್ಧರಾದ ಸದಸ್ಯರಿದ್ದಾರೆ. ಲಾಹೋರ್‌ನಲ್ಲಿ ನಮ್ಮ ಪರಿಶುದ್ಧ ಪ್ರೇಮಿಗಳಿದ್ದಾರೆ." ಇದು ನಿಮಗಿರುವ ಸ್ಥಾನವಾಗಿದೆ. ಇದನ್ನು ನೆಲೆನಿಲ್ಲಿಸಲು ನೀವು ಪರಿಶ್ರಮಿಸಿರಿ. ನನ್ನ ವೀಕ್ಷಣೆಯಲ್ಲಿ, ಶತ್ರುಗಳು ಈ ಧಾಳಿ ನಡೆಸಿದ್ದು ಕೇವಲ ಜೀವಹಾನಿ ಮಾಡಲಿಕ್ಕೆ ಮಾತ್ರವಲ್ಲ. ಅದರ ಜೊತೆಗೆ ಬೇರೆ ಕೆಲವು ಉದ್ದೇಶಗಳು ಸಹ ಇದ್ದವು. ಒಂದು, ಜಮಾಅತಿನ ಸದಸ್ಯರ ಮಧ್ಯೆ ಭೀತಿ ಸೃಷ್ಟಿಸಿ ಬಲಹೀನರಾದ ಅಹ್ಮದಿಯರನ್ನು ಅಹ್ಮದಿಯತ್‌ನಿಂದ ಅಗಲಿಸುವುದು. ಯುವ ಜನರ ಮಧ್ಯೆ ಕಳವಳ ಉಂಟುಮಾಡುವುದು. ಆದರೆ ಇವರು ತಿಳಿಯದಿರುವ ಒಂದು ವಿಚಾರವಿದೆ. ಈ ಮಕ್ಕಳ ಮಾತೆಯಂದಿರ ರಕ್ತದಲ್ಲಿ, ಅವರ ಮೊಲೆಹಾಲಿನಲ್ಲಿ ತಮ್ಮ ಜೀವ, ಸೊತ್ತು, ಅಭಿಮಾನ, ಸಮಯ ಎಲ್ಲವನ್ನೂ ತ್ಯಾಗಮಾಡಲು ಸನ್ನದ್ಧರೆಂಬ ಪ್ರತಿಜ್ಞೆ ಸುತ್ತುತಿರುತ್ತದೆ. ಪ್ರತಿಜ್ಞಾ ಪಾಲನೆಯ ಆವೇಶ ಆ ಮಾತೆಯರಲ್ಲಿ ಅಲೆಯೇರುತ್ತಿದೆ.

ಅಹ್ಮದಿಯರಿಗೆ ಇಷ್ಟು ದೊಡ್ಡ ಆಘಾತವನ್ನು ಸಹಿಸಲು ತ್ರಾಣವಿರಲಿಕ್ಕಿಲ್ಲ; ಹಾಗೆ ಅವರು ರಸ್ತೆಗೆ ಇಳಿದು ಇದಕ್ಕೆ ವಿರುದ್ಧವಾಗಿ ಪ್ರತಿಭಟನೆ ನಡೆಸಿ ನಾಶ ನಷ್ಟ ಉಂಟುಮಾಡುವರು ಎಂದು ಶತ್ರುಗಳು ಭಾವಿಸಿದ್ದರು. ಹಾಗೆ ಸರಕಾರ ತಮಗೆ ಇಷ್ಟ ಬಂದಂತೆ ಅಹ್ಮದಿಯರನ್ನು ಸದೆಬಡಿಯಲು ಸಾಧ್ಯವಾಗಿ, ಲೋಕದ ಮುಂದೆ ಅಹ್ಮದಿಯರ ಈ ಸ್ಥಿತಿಯನ್ನು ತೋರಿಸಿ ಅವರ ಹೆಸರಿಗೆ ಮಸಿ ಬಳಿಯಬಹುದೆಂದು ಅವರು ಭಾವಿಸಿದ್ದರು. ಆದರೆ ಅಹ್ಮದಿಯರು ಅಲ್ಲಾಹನ ಆದೇಶದಂತೆ ಸಹನೆ ಮತ್ತು ಪ್ರಾರ್ಥನೆ ಮೂಲಕ ಅಲ್ಲಾಹನ ಸಹಾಯ ಯಾಚಿಸುವವರೂ ಅವನ ಸಂರಕ್ಷಣೆಯಲ್ಲಿ ಒಳಪಡುವವರೂ ಆಗಿದ್ದಾರೆ. ಅವರು ಖಿಲಾಫತಿನ ಪತಾಕೆಯ ಕೆಳಗೆ ಒಟ್ಟು ಸೇರುವವರಾಗಿದ್ದಾರೆ. ಆದ್ದರಿಂದ ಎಂದಿಗೂ ಇಂತಹ ಪ್ರತಿಕ್ರಿಯೆಗಳು ಅವರಿಂದ ಕಂಡು ಬರಲಿಲ್ಲ. ಅವರು ನಿರೀಕ್ಷಿಸಿದಂತಹ ಪ್ರತಿಕ್ರಿಯೆ ಅಹ್ಮದಿಯರಿಂದ ಪ್ರಕಟವಾಗದಿದ್ದಾಗ-ಅದರೊಂದಿಗೆ ಈ ಕ್ರೂರ ಕೃತ್ಯವನ್ನು ಪರದೇಶಗಳೂ ಬಲವಾಗಿ ಖಂಡಿಸಿದವು. ಮಾತ್ರವಲ್ಲ, ಮಾಧ್ಯಮಗಳೂ ಇವರ ನಿಜ ರೂಪವನ್ನು ಬಯಲುಗೊಳಿಸಿದವು - ಆಗ ಅಲ್ಲಿರುವ ಸರಕಾರಕ್ಕೆ ಪ್ರಜ್ಞೆ ಮೂಡಿ ಪ್ರತಿಕ್ರಿಯಿಸಿತು. ಆ ಬಳಿಕ ಸಹಾನುಭೂತಿ ತೋರಿಸುವ ಹೇಳಿಕೆಗಳನ್ನು ಅವರು ಹೊರಡಿಸಿದರು. ನಾಚಿಕೆಗೇಡನ್ನು ಮುಚ್ಚಿಡಬಹುದೆಂದು ಅವರು ಭಾವಿಸಿದರು.

ಆಶ್ಚರ್ಯಕರಾದ ವಿಚಾರವೇನೆಂದರೆ, ಇಷ್ಟರವರೆಗೆ ಲೋಕದ ಜನರಿಗೆ, ಮುಖ್ಯವಾಗಿ ಇವರಿಗೆ ಅಹ್ಮದಿಯತ್ ಏನೆಂದು ಮನವರಿಕೆ ಯಾಗಲಿಲ್ಲ. ಅಹ್ಮದಿಯರು ಓರ್ವ ಇಮಾಮರ ನೇತೃತ್ವದಲ್ಲಿ, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಅಧ್ಯಾಪನೆಗಳನ್ನು ಲೋಕದಲ್ಲಿ ಪ್ರಚಾರ

ಮಾಡಲು ಆಗಮಿಸಿದ ವಾಗ್ದತ್ತ ಮಸೀಹರನ್ನು ನಂಬಿದವರಾಗಿದ್ದಾರೆ. ಹಝ್ರತ್ ಪೈಗಂಬರರು[ಸ] ಮೃಗತುಲ್ಯರಾಗಿ ಬದುಕಿದವರನ್ನು ಮನುಷ್ಯರನ್ನಾಗಿ ಮತ್ತು ಮನುಷ್ಯರನ್ನು ದೈವಿಕ ಮನುಷ್ಯರನ್ನಾಗಿ ಪರಿವರ್ತಿಸಿದ್ದರು. ಆದ್ದರಿಂದ ನಮ್ಮಿಂದ ಪ್ರತಿಭಟನಾ ಪ್ರದರ್ಶನಗಳೂ ಕೊಳ್ಳೆ, ಕೊಲೆ, ಕಿಚ್ಚಿಡುವಿಕೆ ಇತ್ಯಾದಿಗಳನ್ನು ನೀವು ಹೇಗೆ ಪ್ರತೀಕ್ಷಿಸಿದಿರಿ? ನಾವು ಅಲ್ಲಾಹನ ಪ್ರೀತಿಯನ್ನು ಮುಂದೆ ಕಾಣುತ್ತಾ "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್" ಎಂದು ಹೇಳುತ್ತಾ ನಮ್ಮ ವಿಚಾರವನ್ನು ಅಲ್ಲಾಹನಿಗೆ ಅರ್ಪಿಸಿದ್ದೇವೆ. ನಮ್ಮ ವ್ಯಥೆಗಳನ್ನೂ ದುಃಖಗಳನ್ನೂ ಅಲ್ಲಾಹನ ಮುಂದೆ ಸಮರ್ಪಿಸಿದ್ದೇವೆ. ಅವನ ಸಂಪ್ರೀತಿಯಲ್ಲಿ ನಾವು ಸಂತೃಪ್ತರಾಗಿದ್ದೇವೆ. ಅವನ ತೀರ್ಮಾನವನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಈ ಮೃಗೀಯತೆ ಮತ್ತು ಭೀಕರತೆ ನಿಮಗೆ ಒಳ್ಳೆಯದಾಗಿರಲಿ.

ತಮಗೆ ಖುರ್‌ಆನ್ ಮತ್ತು ಶರೀಅತ್ ಸಾಕು ಎಂಬುದು ಅವರ ವಾದ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತಂದ ಖುರ್‌ಆನ್ ಮತ್ತು ಶರೀಅತ್‌ಗೆ ಅನುಸಾರವಾಗಿದೆಯೇ ನಿಮ್ಮ ಈ ಕೃತ್ಯ? ಅಲ್ಲ, ಎಂದಿಗೂ ಅಲ್ಲ. ಪ್ರವಾದಿ ಪ್ರಕೀರ್ತನೆಯ ಹೆಸರು ಹೇಳಿ ಪವಿತ್ರರಾದ ಪೈಗಂಬರರ ಹೆಸರನ್ನು ಕಳಂಕಗೊಳಿಸಲು ನೀವು ಪ್ರಯತ್ನಿಸುತ್ತೀರಿ. ಖಿಯಾಮತ್ ದಿನದಂದು "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದು ರ್ರಸೂಲುಲ್ಲಾಹ್" ಎಂಬ ಕಲಿಮ ನಿಮ್ಮ ಪೈಕಿ ಪ್ರತಿಯೊಬ್ಬರನ್ನು ಹಿಡಿದು ನಿಮ್ಮ ನಾಶಕ್ಕೆ ತಲಪಿಸುವುದು.

ಈ ಅತಿಕ್ರೂರವಾದ ಮೃಗೀಯ ಕೃತ್ಯಗಳಲ್ಲಿ ಅಹ್ಮದಿಯರು ಸಹನೆ ಕೈಕೊಂಡದ್ದು ನೋಡಿ ಇತರರು ಸಹಾನುಭೂತಿ ಪ್ರಕಟಿಸಿದರು; ಮಾತ್ರವಲ್ಲ, ಕೆಲವರು ಅಹ್ಮದಿಯತಿನೆಡೆಗೆ ಆಕರ್ಷಿತರಾಗಿ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಲು ಸನ್ನದ್ಧತೆ ತೋರಿಸಿದರು. ಆದ್ದರಿಂದ ನೀವು ನಮ್ಮೊಡನೆ ಮಾಡಿದ ಈ ದುಷ್ಕೃತ್ಯಗಳಿಗೆ ಈ ಲೋಕದಲ್ಲೇ ಅದರ ಪ್ರತಿಫಲ ನಮಗೆ ಲಭಿಸುತ್ತಿದೆ.

ಲಾಹೋರ್‌ನಲ್ಲಿ ನಡೆದ ಕೆಲವು ಘಟನೆಗಳನ್ನು ವಿವರಿಸಲು ನಾನು ಬಯಸಿದ್ದೆ. ಆದರೆ ಕೆಲವು ಘಟನೆಗಳನ್ನು ವಿವರಿಸುವಾಗ ನನಗೆ ನನ್ನ ಭಾವೋದ್ವೇಗ ನಿಯಂತ್ರಿಸಲು ಸಾಧ್ಯವಾದೀತೇ ಎಂದು ನನಗೆ ಸಂದೇಹವಿದೆ. ಅಷ್ಟರ ಮಟ್ಟಿಗೆ ಅವು ವೇದನಾಜನಕವಾಗಿದೆ. ಆದುದರಿಂದ ಕೆಲವನ್ನು ಮಾತ್ರ ನಾನು ವಿವರಿಸುವೆನು.

ನಾಇಬ್ ನಾಝಿರ್ ಇಸ್ಲಾಹ್ ವ ಇರ್ಶಾದ್ ಬರೆಯುತ್ತಾರೆ: ಜುಮಾ ನಮಾಝಿಗೆ ಬಂದ ಓರ್ವ ಅಹ್ಮದಿ ಹೇಳಿದರು: "ನನಗೆ ಇನ್ನೊಂದು ಬಹುಮಾನ ಲಭಿಸಿದೆ. ನಾನು ಹುತಾತ್ಮರಾದ ಪಿತನ ಮಗನಾಗಿದ್ದೇನೆ."

ಮೋಡೆಲ್ ಟೌನ್‌ನಲ್ಲಿ ಇಅ್‌ಜಾಝ್ ಸಾಹೇಬರ ಸಹೋದರ ಹುತಾತ್ಮರಾದರು. ಮಸೀದಿಯಲ್ಲೇ ಅವರಿಗೆ ಈ ಬಗ್ಗೆ ವಿವರ ಲಭಿಸಿತು. ಬೇಗನೆ ಆಸ್ಪತ್ರೆಗೆ ತೆರಳಲಿಕ್ಕೆ ಅವರೊಡನೆ ಹೇಳಲಾಯಿತು. ಆಗ ಅವರು ಹೇಳಿದರು: "ನಮ್ಮಿಂದ ಅಗಲಿ ಹೋದವರು ಅಲ್ಲಾಹನ ಸಮೀಪಕ್ಕೆ ತಲುಪಿದ್ದಾರೆ. ಅಹ್ಮದೀ ಸಹೋದರರಿಗೆ ಪ್ರಾಯಶಃ ನನ್ನ ರಕ್ತದ ಅಗತ್ಯವಿರಬಹುದು. ಆದ್ದರಿಂದ ನಾನು ಇಲ್ಲೇ ನಿಲ್ಲುತ್ತೇನೆ."

ಓರ್ವ ಮಾತೆ ಹೇಳಿದರು: "ನನ್ನ ಮಡಿಲಿನಿಂದ ಯುವಕನಾದ ನನ್ನ ಪುತ್ರನನ್ನು ನಾನು ಅಲ್ಲಾಹನ ಮಡಿಲಿಗೆ ನೀಡಿದ್ದೇನೆ. ಇದು ಯಾರ ಅಮಾನತ್ತಾಗಿತ್ತೋ ಅವನಿಗೆಯೇ ಒಪ್ಪಿಸಿದ್ದೇನೆ."

ನಮ್ಮ ಮುರಬ್ಬಿ ಮಹ್‌ಮೂದ್ ಅಹ್ಮದ್ ಶಾಹಿದ್ ಸಾಹೇಬ್ ಮೋಡೆಲ್ ಟೌನ್‌ನಲ್ಲಿ ತನ್ನ ಕರ್ತವ್ಯವನ್ನು ಅತ್ಯುತ್ತಮ ರೀತಿಯಲ್ಲಿ ನಿಭಾಯಿಸಿದರು. ಖುತುಬ ಪ್ರವಚನ ಮಾಡುತ್ತಾ ದುಆ ಮಾಡಲಿಕ್ಕೂ ಸಹನೆ ಕೈಗೊಳ್ಳಲಿಕ್ಕೂ ಸಲಾತ್ ಹೇಳುತ್ತಾ ಇರಲಿಕ್ಕೂ ಅವರು ಉಪದೇಶಿಸುತ್ತಿದ್ದರು. ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಓದಿದರು. ದುಆಗಳನ್ನೂ ಪಠಿಸಿದರು. ಉಚ್ಚ ಸ್ವರದಲ್ಲಿ ಸಲಾತ್ ಹೇಳುತ್ತಲೂ ಇದ್ದರು. ಅಲ್ಲಾಹು ಅಕ್ಬರ್ ಎಂಬ ವಚನವನ್ನೂ ಗಟ್ಟಿಯಾಗಿ ಹೇಳಿದರು. ಹಾಗೆ ಅವರು ಹುತಾತ್ಮರಾದರು.

ಸರ್ದಾರ್ ಅಬ್ದುಸ್ಸಮೀಅ್ ಸಾಹೇಬ್ ಚಕ್‌ಸಿಕಂದರ್‌ನಲ್ಲಿ ನಡೆದ ಘಟನೆಗಳು ಮತ್ತು ಹುತಾತ್ಮರ ಕುರಿತು ಹೇಳಿದರು. ಅವರ ಡ್ಯೂಟಿ ಅಲ್ಲಿತ್ತು.

ಒಬ್ಬ ವ್ಯಕ್ತಿ ಬರೆಯುತ್ತಾರೆ: ಹೊರಗೆ ಏಣಿಯ ಕೆಳಗೆ ನೂರು ನೂರೈವತ್ತು ಮಂದಿ ಇದ್ದರು. ಮಸೀದಿಯ ಹಾಲ್‌ನ ಒಂದು ಮೂಲೆಯಲ್ಲಿ ನಿಂತುಕೊಂಡು ಒಬ್ಬ ಭಯೋತ್ಪಾದಕ ಗುಂಡು ಹಾರಿಸುತ್ತಲಿದ್ದ. ಆಗ ಮತ್ತೊಬ್ಬ ಅಂಗಳದ ಒಂದು ಮೂಲೆಯ ತನಕ ತಲುಪಿದ. ಅವನು ಹೊರಗೆ ಬಂದಿದ್ದರೆ ಹೊರಗಿರುವ ಈ ನೂರು ನೂರೈವತ್ತು ಮಂದಿ ಇಂದು ಇರುತ್ತಿರಲಿಲ್ಲ. ಆದರೆ ನನ್ನ ಕಣ್ಣ ಮುಂದೆ 65 ವರ್ಷ ಮಿಕ್ಕಿದ ಓರ್ವ ವೃದ್ಧ ಕಂಬದ ಹಿಂದಿನಿಂದ ಎದ್ದು ನಿಂತು ಆ ದುಷ್ಕರ್ಮಿಯ ಸಮೀಪಕ್ಕೆ ಓಡಿ ತಲಪಿದರು. ಹಾಗೆ ಅವರ ಎದೆಯೊಳಗೆ ಗುಂಡುಗಳು ಪ್ರವೇಶಿಸಿ ಅವರು ಹುತಾತ್ಮರಾದರು. ಅವರು ತೋರಿಸಿದ ಧೀರತೆಯ ಕಾರಣದಿಂದ ದುಷ್ಕರ್ಮಿಗೆ ಹೊರಗೆ ಬರಲು ಸ್ವಲ್ಪ ತಡವಾಯಿತು. ಅಷ್ಟರಲ್ಲಿ ಹಲವು ಅಹ್ಮದಿಯರು ಸುರಕ್ಷಿತ ಸ್ಥಳಕ್ಕೆ ತಲಪಿದರು. ನಂತರ ಅವನು ಗ್ರೆನೇಡ್ ಎಸೆದನು. ನಾವು ಹೊರಗೆ ಬಂದಾಗ ಹಲವರು ಏಣಿಯಲ್ಲಿ ಹುತಾತ್ಮರಾಗಿ ಮಲಗಿರುವುದನ್ನು ಕಂಡೆನು.

ಓರ್ವ ವ್ಯಕ್ತಿ ನನಗೆ ಬರೆದರು: ಅವರು ಜನಾಝ ನಮಾಝ್‌ನಲ್ಲಿ ಭಾಗವಹಿಸಿದ್ದರು. ಆಖರೀ ಜನರ ಈ ಹುತಾತ್ಮತೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲದಲ್ಲಿ ಘಟಿಸಿದ್ದ ಹುತಾತ್ಮತೆಯನ್ನು ಸ್ಮರಣೆಗೆ ತಂದಿತು. ರಬ್‌ವದ ಬೆಟ್ಟಗಳ ತಪ್ಪಲಿನಲ್ಲಿ ಈ ಅನುಗ್ರಹೀತ ವ್ಯಕ್ತಿಗಳನ್ನು ದಫನ ಮಾಡುವಾಗ ನಾವು ಬದುಕಿರುವುದು ಈ ಕಾಲದಲ್ಲಲ್ಲ ಎಂದು ತೋಚಲ್ಪಟ್ಟಿತು. ಅಲ್ಲಿ ಕಂಡ ಕ್ಷಮೆ ಮತ್ತು ಸಹನೆಯ ದೃಶ್ಯಗಳನ್ನು ಮಾತುಗಳಲ್ಲಿ ವಿವರಿಸಲಿಕ್ಕೆ ಸಾಧ್ಯವಿಲ್ಲ. "ಅನ್ಸಾರುಲ್ಲಾ ಹಾಲ್"ನಲ್ಲಿ ನನ್ನ ಸಮೀಪ ಇದ್ದ ಒಬ್ಬ ವ್ಯಕ್ತಿಯೊಡನೆ ನಾನು ಕೇಳಿದೆ: ನಿಮ್ಮ ಯಾರು ಮರಣಪಟ್ಟದ್ದು? ಆಗ ತನ್ನ ಮಗ ಹುತಾತ್ಮನಾಗಿದ್ದಾನೆ ಎಂದು ಅವರು ಹೇಳಿದರು. ಅವರು ಬರೆಯುತ್ತಾರೆ: ಅಲ್ಲಿ ನನ್ನ ಹೃದಯ ಕರಗುತ್ತಿತ್ತು. ಆದರೆ ವಿಶ್ವಾಸ ದಾರ್ಢ್ಯದಿಂದ ತುಂಬಿ ತುಳುಕುವ ಇವರ ಮುಖ ನೋಡಿ ನನಗೆ ಏನೂ ಹೇಳಲು ಸಾಧ್ಯವಾಗಲಿಲ್ಲ. ಆಗ ಆ ವ್ಯಕ್ತಿ ಹೇಳಿದರು: ಅಲ್‌ಹಮ್ದುಲಿಲ್ಲಾಹ್ (ಅಲ್ಲಾಹ್‌ನಿಗೆ ಸ್ತುತಿ). ಅಲ್ಲಾಹನಿಗೆ ಇದಾಗಿತ್ತು ಇಷ್ಟ. ಅವರು ಹೀಗೆಯೂ ಬರೆದರು: ದೃಢ ನಿರ್ಧಾರ ತುಂಬಿ ತುಳುಕುವ ಮುಖಗಳಾಗಿದ್ದವು ನನ್ನ ಸುತ್ತುಮುತ್ತು. ನಾನು ನನ್ನನ್ನೇ ನಿಯಂತ್ರಿಸುತ್ತಿದ್ದೆ. ದೃಢಚಿತ್ತರಾದ ಈ ಮಹದ್ವ್ಯಕ್ತಿತ್ವಗಳ ಮುಂದೆ ನನಗೆ ನಾಚಿಗೆಪಟ್ಟುಕೊಳ್ಳಬೇಕಾದ ಯಾವುದೇ ವರ್ತನೆ ನನ್ನಿಂದ ಉಂಟಾಗದಿರಲಿ ಎಂದು ನಾನು ಬಯಸಿದೆ. ನಾನು ಹಲವರನ್ನು ಭೇಟಿಯಾದೆ. ವಿವಿಧ ಅನುಭವಗಳನ್ನು ನಾನು ದಾಟಿ ಹೋದೆ. ರಕ್ತದಲ್ಲಿ ಸ್ನಾನ ಮಾಡಿದಂತಹ ಒಬ್ಬ ಹುತಾತ್ಮರ ಸಮೀಪ ನಾನು ನಿಂತಿದ್ದೆ. ಕೂಡಲೇ ಒಂದು ಶಬ್ದ ಕೇಳಿ ಬಂತು – ನನ್ನ ಹುತಾತ್ಮತೆಯನ್ನು ನೋಡಿರಿ.

ಓರ್ವ ಸ್ತ್ರೀ ಬರೆಯುತ್ತಾರೆ: ನನ್ನ ಕಿರಿಯ ಪುತ್ರ ಜುಮುಅ ನಮಾಝಿಗೆ ಹೋಗಿದ್ದನು. ಅಲ್ಲಾಹನು ತನ್ನ ಅನುಗ್ರಹದಿಂದ ಅವನನ್ನು ಕಾಪಾಡಿದನು. ಮಸೀದಿಯಲ್ಲಿ ಗುಂಡೆಸೆತ ನಡೆದುಕೊಂಡಿರುವಾಗ ಈ ವಾರ್ತೆಯನ್ನು ಟಿ.ವಿ.ಯಲ್ಲಿ ನೋಡಿ ನನ್ನ ನೆರೆಕರೆಯವರು ನನ್ನ

ಸಮೀಪಕ್ಕೆ ಓಡಿಬಂದರು. ಅವರ ಮನೆ ಮಸೀದಿಯ ಸಮೀಪವಾಗಿತ್ತು. ನಾನು ಅಳುತ್ತಿರಬಹುದೆಂದು ಅವರು ಭಾವಿಸಿದ್ದರು. ನಾನು ಅವರೊಡನೆ ಹೇಳಿದೆ: ನಮ್ಮ ವಿಚಾರ ಅಲ್ಲಾಹನ ಬಳಿಯಿದೆ. ಮಕ್ಕಳ ಬಗ್ಗೆ ನನಗೇನೂ ಕಳವಳವಿಲ್ಲ. ಅಲ್ಲಿರುವವರೆಲ್ಲ ನಮ್ಮವರೇ. ನನ್ನ ಮಕ್ಕಳು ಹುತಾತ್ಮರಾದರೆ ಅವರು ಅಲ್ಲಾಹನ ಸಮೀಪಸ್ಥರಾಗಿ ಮಾರ್ಪಾಡುವರು. ಇನ್ನು ಪಾರಾದರೆ ಅದರಲ್ಲೂ ಸಂತೃಪ್ತಿ ಇದೆ. ಇದನ್ನು ಆಲಿಸಿದಾಗ ಸ್ತ್ರೀಯರೆಲ್ಲ ಆಶ್ಚರ್ಯಚಕಿತರಾದರು. ಅವರು ಮರಳಿಹೋದರು. ಅವರು ಬರೆಯುತ್ತಾರೆ: ರಬ್‌ವದಲ್ಲಿರುವವರು ರಾತ್ರಿಹಗಲು ಇದಕ್ಕೋಸ್ಕರ ಮಾಡುವ ಸೇವೆಗಳಿಗೆ ತಮಗೂ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

ಓರ್ವ ಮಾತೆಗೆ 18 ವರ್ಷ ಪ್ರಾಯದ ಏಕಪುತ್ರನಿದ್ದನು. ಬಾಕಿಯವರು ಹೆಣ್ಮಕ್ಕಳು. ಆತನು ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿದ್ದನು. ಆತನು ಸಹ ಹುತಾತ್ಮನಾದನು. ಆತನ ಮಾತಾಪಿತರು ಬಹಳ ಉದಾತ್ತವಾದ ಕ್ಷಮೆ ಮತ್ತು ಸಹನೆಯನ್ನು ತೋರ್ಪಡಿಸಿದರು.

ಸಿರಿಯಾದ ಮುಸಲ್ಲಾಂದ್ದಹಬಿ ಸಾಹೇಬ್ ಅಲ್ಲಿಗೆ ಹೋಗಿದ್ದರು. ಅವರು ಸಹ ಘಾಸಿಗೊಂಡಿದ್ದಾರೆ. ಅವರ ಕಾಲಿಗೆ ಗಾಯವಾಗಿದೆ. ಅವರು ಬರೆಯುತ್ತಾರೆ: ಹೀಗಿರುವ ಒಂದು ದೃಶ್ಯವನ್ನು ನಾನು ನನ್ನ ಜೀವಮಾನದಲ್ಲಿ ಕಂಡಿಲ್ಲ. ಅಲ್ಲಿ ಯಾವ ವಿಧದ ಗಾಬರಿಯಿಂದ ಕೂಡಿದ ಓಟವಾಗಲಿ, ನೂಕು ನುಗ್ಗಲು ಯಾವುದೇ ಇರಲಿಲ್ಲ. ಯಾರಲ್ಲೂ ಭಯ ಕಾಣಲಿಲ್ಲ. ದುಷ್ಕರ್ಮಿಗಳು ಅಲ್ಲಿ ಗುಂಡೆಸೆಯುತ್ತಿರುವಾಗಲೂ ಪ್ರತಿಯೊಬ್ಬರು ತಂತಮ್ಮ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದರು. ಜಮಾಅತ್ ವ್ಯವಸ್ಥೆ ನೀಡುತ್ತಿದ್ದ ನಿರ್ದೇಶಗಳನು ಸಾರ ಅವರು ವರ್ತಿಸುತ್ತಿದ್ದರು. ಈ ರೀತಿಯ ಒಂದು ಸ್ಥಿತಿಯನ್ನು ನಾನೆಂದೂ ಕಂಡಿಲ್ಲ. ಹಝ್ರತ್ ಮಸೀಹ್ ಮೌಊದ್‌ರವರ[ಅ] ಜಮಾಅತಿನಲ್ಲಿ ತರಬೇತಿ ಪಡೆದ ಮಾತೆಯರಾಗಿದ್ದಾರೆ ಅವರು. ತ್ಯಾಗದ ಮಹತ್ತರ ಉದಾಹರಣೆಗಳು. ತಮ್ಮ ಮಕ್ಕಳು ಏನಾದರೆಂದಾಗಲೀ ತಮ್ಮ ಮಕ್ಕಳು ಹುತಾತ್ಮರಾದರೆಂದಾಗಲೀ ಅವರಿಗೆ ಚಿಂತೆ ಇಲ್ಲ. ಜಮಾಅತಿನ ಎಲ್ಲರೂ ಒಟ್ಟಾಗಿ ವೇದನಾಭರಿತವಾದ ಪ್ರಾರ್ಥನೆ ಮಾಡುತ್ತಲಿದ್ದಾರೆ. ಆದ್ದರಿಂದ ಅಹ್ಮದೀ ಮಾತೆಯರೇ, ಈ ಪವಿತ್ರವೂ ಪರಿಶುದ್ಧವೂ ಆದ ಮನೋಭಾವಗಳನ್ನೂ ಚಿಂತನೆಗಳನ್ನೂ ಎಂದಿಗೂ ಸಾಯಲು ಬಿಡಬಾರದು. ಈ ಮನೋಭಾವ ನೆಲೆನಿಂತಿರುವ ಕಾಲದ ವರೆಗೆ ಈ ಉನ್ನತವಾದ ವೀಕ್ಷಣೆ ನೆಲೆನಿಲ್ಲುವ ಕಾಲದವರೆಗೆ ಯಾವ ಶತ್ರುವಿಗೂ ಜಮಾಅತಿಗೆ ಏನೂ ಮಾಡಲಿಕ್ಕೂ ಸಾಧ್ಯವಿಲ್ಲ.

ಓರ್ವ ಅಹ್ಮದಿ ಬರೆಯುತ್ತಾರೆ: ನಾನು ರಬ್‌ವದಿಂದ ಹೋಗಿದ್ದೆ. ಒಬ್ಬ ಯುವಕನೊಂದಿಗೆ ಸೇರಿ ಒಂದೊಂದೇ ಮೃತ ಶರೀರವನ್ನು ಎತ್ತಿಡುತ್ತಿದ್ದೆವು. ಕೊನೆಗೆ ಒಂದು ಮೃತ ಶರೀರವಿತ್ತು. ಅದನ್ನು ಸಹ ನಾವು ತೆಗೆದು ಆಂಬುಲೆನ್ಸ್‌ನೊಳಗೆ ಇಟ್ಟೆವು. ಆ ಬಳಿಕ ಆ ಯುವಕ ಹೇಳಿದನು – ಇದು ನನ್ನ ತಂದೆಯೆಂದು. ಆ ಯುವಕ ಆ ಆಂಬುಲೆನ್ಸ್‌ನೊಂದಿಗೆ ಹೋಗಲಿಲ್ಲ. ಆತನು ಕೂಡಲೇ ಮಸೀದಿಗೆ ಹೋಗಿ ಆತನಿಗೆ ಒಪ್ಪಿಸಲಾಗಿದ್ದ ಡ್ಯೂಟಿಯನ್ನು ಮಾಡುತ್ತಲಿದ್ದನು.

ತಮ್ಮ ಭಾವೋದ್ವೇಗಗಳನ್ನು ಅಲ್ಲಾಹನ ಮುಂದೆ ಮಾತ್ರ ಸಮರ್ಪಿಸುವ ಮುಹಮ್ಮದೀ ಮಸೀಹರ ಧೀರಯೋಧರಾಗಿದ್ದಾರೆ ಇವರು. ಇಂತಹ ಎಷ್ಟೋ ಘಟನೆಗಳಿವೆ. ಇವನ್ನೆಲ್ಲ ಕ್ರೋಢೀಕರಿಸಿ ಪ್ರಕಟಿಸಲಾಗುವುದು. (ಇನ್‌ಶಾಅ್ ಅಲ್ಲಾಹ್). ಎಲ್ಲರೂ ಹೇಳಿದ ಒಂದು ವಿಚಾರವಿದೆ. ಭಯೋತ್ಪಾದಕರು ಅವರ ಕೃತ್ಯಗಳನ್ನು ನಡೆಸುತ್ತಿರುವಾಗ ಯಾವ ರೀತಿಯ ಅಸ್ತವ್ಯಸ್ತತೆಯಾಗಲಿ ಅಲ್ಲಿ ಗೋಚರವಾಗಲಿಲ್ಲ. ಅಮೀರ್ ಸಾಹೇಬ್, ಮುಬಲ್ಲಿಗ್ ಸಾಹೇಬ್ ಮತ್ತು ಇತರ ಹುದ್ದೇದಾರರು ಅಂತ್ಯ ಶ್ವಾಸದ ತನಕ ನಿರ್ದೇಶನಗಳನ್ನು ನೀಡುತ್ತಲಿದ್ದರು. ಅದಕ್ಕನುಸಾರವಾಗಿ ಜನರು ವರ್ತಿಸುತ್ತಿದ್ದರು. ಅವರು ಹುತಾತ್ಮರಾದ ಬಳಿಕ ಕೂಡ ಯಾವುದೇ ರೀತಿಯ ನೂಕು ನುಗ್ಗು ಅಲ್ಲಿರಲಿಲ್ಲ. ಬಹಳ ಪ್ಲಾನ್‌ನೊಂದಿಗೆ ಗುಂಡೆಸೆತದಿಂದ ಪಾರಾಗಲು ಗೋಡೆಗೆ ತಾಗಿ ಜನರು ನಿಂತರು. ಆ ನಿಮಿಷಗಳನ್ನು ಪ್ರಾರ್ಥನಾ ನಿರ್ಭರರಾಗಿ ಅವರು ಕಳೆದರು. ಒಬ್ಬ ವ್ಯಕ್ತಿ ಈ ಸಂದರ್ಭದಲ್ಲೆಲ್ಲ ಸುಜೂದ್ (ಸಾಷ್ಟಾಂಗ ಪ್ರಣಾಮ) ಮಾಡಿ ಪ್ರಾರ್ಥಿಸುತ್ತಿದ್ದರು. ಗುಂಡುಗಳು ಹಾರುತ್ತಿರುವುದನ್ನು ಅವರು ಗಮನಿಸಲೇ ಇಲ್ಲ.

ಯಥಾರ್ಥ ವಿಶ್ವಾಸಿಗಳ ಧೀರ ವರ್ತನೆಗಳಾಗಿವೆ ಇವು. ಸೂರಃ ಅಹ್‌ಝಾಬ್‌ನಲ್ಲಿ ಅಲ್ಲಾಹನು ಹೇಳಿದ ಒಂದು ವಿಚಾರವನ್ನು ನೆನಪಿಸುವ ಪತ್ರಗಳು ಸಹ ನನಗೆ ಬರುತ್ತಿದ್ದವು.

**"ಅಲ್ಲಾಹನೊಡನೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಆ ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭವನ್ನು ಕಾಯುತ್ತಿದ್ದಾರೆ. ಅವರು (ತಮ್ಮ ನಿಲುವಿನಲ್ಲಿ) ತುಸು ಮಾತ್ರವಾದರೂ ಬದಲಾಗಲಿಲ್ಲ." (33:24)**

ಸಂದರ್ಭವನ್ನು ಕಾಯುತ್ತಿರುವರೆಂಬ ವಿಚಾರವನ್ನು ಬರೆದು ತಾವು ಸಹ ಈ ಪ್ರತಿಜ್ಞೆಯನ್ನು ಈಡೇರಿಸಲು ಸನ್ನದ್ಧರೆಂದು ಅವರು ತಿಳಿಸುತ್ತಾರೆ. ಶತ್ರುಗಳು ಭಾವಿಸಿದ್ದು, ಈ ಕೃತ್ಯ ಅಹ್ಮದಿಯರನ್ನು ಬಲಗುಂದಿಸುವುದೆಂದಾಗಿತ್ತು. ಜಮಾಅತಿನ ಶಕ್ತಿ ಛಿದ್ರಗೊಳ್ಳುವುದೆಂದು ಅವರು ಭಾವಿಸಿದ್ದರು. ಪಟ್ಟಣದಲ್ಲಿ ವಾಸಿಸುವವರಿಗೆ ಪ್ರಾಯಶಃ ಇಷ್ಟು ವಿಶ್ವಾಸ ದೃಢತೆ ಇರಲಿಕ್ಕಿಲ್ಲವೆಂದು ಅವರು ಭಾವಿಸಿರಬಹುದು. ಆದರೆ ಈ ಪಟ್ಟಣಗಳಲ್ಲಿ ವಾಸಿಸುವವರಲ್ಲಿ ಹಝ್ರತ್ ವಾಗ್ದತ್ತ ಮಸೀಹ್‌ರವರು ವಿಶ್ವಾಸದ ಬಿಸಿ ಮತ್ತು ಆವೇಶವನ್ನು ತುಂಬಿಸಿರುವ ವಿಚಾರ ಅವರಿಗೆ ಹೇಗೆ ತಿಳಿಯಲು ಸಾಧ್ಯ? ಇವರು ಧರ್ಮಕ್ಕೋಸ್ಕರ ದೊಡ್ಡ ದೊಡ್ಡ ತ್ಯಾಗಗಳನ್ನು ಮಾಡಲು ಸದಾ ಸನ್ನದ್ಧರಾಗಿದ್ದಾರೆ. ಇವರು ಭೌತಿಕವಾದ ಪರಿಸರದಲ್ಲಿ ಒಳಪಟ್ಟಿರುತ್ತಾರೆಂಬುದು ಸರಿಯೇ. ಆದರೆ ಇವರ ಉದ್ದೇಶ ಲಕ್ಷ್ಯ ಕೇವಲ ಭೌತಿಕ ಸಾಧನೆಯಲ್ಲ. ಧರ್ಮ ಕಾರ್ಯಕ್ಕೆ ಕರೆಯಲ್ಪಡುವಾಗ ನಾವು ಹಾಜರಿದ್ದೇವೆ ಎಂದು ಹೇಳಿಕೊಂಡು ಇವರು ಓಡಿ ಬರುತ್ತಾರೆ. ಇವರು ಮಾನವೀಯತೆಯ ಪ್ರತೀಕಗಳಾಗಿದ್ದಾರೆ. ಈ ಅಹ್ಮದಿಯರು ಸಹ ಆ ಜನರ ಸಮುದಾಯದಿಂದ ಬಂದವರಲ್ಲವೇ? ಕುಟುಂಬ ಸಂಬಂಧಗಳೆಲ್ಲ ಅದೇ. ಧರ್ಮದ ನಾಮದಲ್ಲಿ ಕ್ರೂರತೆ ಮತ್ತು ಮೃಗೀಯತೆ ತೋರಿಸುವ ಅದೇ ಸಮೂಹದಿಂದಲೇ ಇವರು ಸಹ ಬಂದವರಾಗಿದ್ದಾರೆ. ಆದರೆ ವಾಗ್ದತ್ತ ಮಸೀಹರನ್ನು ಅಂಗೀಕರಿಸಿದ ನಂತರ ಇವರು ಧರ್ಮಕ್ಕೋಸ್ಕರ ಮಾಡುವ ತ್ಯಾಗಗಳು ಅಲ್ಲಾಹನು ನಿರ್ದೇಶಿಸಿದ ಮಾರ್ಗ ಮೂಲಕವಾಗಿದೆ.

ಪಾಕಿಸ್ತಾನದ ಪತ್ರಿಕೆಗಳು ಈ ಘಟನೆಗಳನ್ನು ವಿವರಿಸಿದ್ದವು. ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. ಸದಾ ಸತ್ಯ ಹೇಳುವ ಸೌಭಾಗ್ಯವನ್ನು ಅಲ್ಲಾಹನು ಅವರಿಗೆ ದಯಪಾಲಿಸಲಿ. ಈ ಸತ್ಯವನ್ನು ಘೋಷಿಸಿದ ನಂತರ ಮುಲ್ಲಾಗಳಿಗೆ ಭಯಪಟ್ಟು ಪೂರ್ವಸ್ಥಿತಿಗೆ ಅವರು ಮರಳದಿರಲಿ. ಜಗತ್ತಿನ ವಿವಿಧ ಕಡೆಗಳಲ್ಲಿರುವ ಪತ್ರಿಕೆಗಳಲ್ಲೂ ಹೇಳಿಕೆಗಳು ಪ್ರಕಟವಾಗಿದ್ದವು. ಸಂತಾಪ ಸಂದೇಶಗಳೂ ಪ್ರಕಟಗೊಂಡವು. ವಿವಿಧ ಸರಕಾರಗಳ ಪ್ರತಿನಿಧಿಗಳೂ ಇಲ್ಲಿರುವ ಸರಕಾರದ ಪ್ರತಿನಿಧಿಗಳೂ ಪಾರ್ಲಿಮೆಂಟ್ ಸದಸ್ಯರೂ ಸಹಾನುಭೂತಿ ಮತ್ತು ಸಂತಾಪದ ಸಂದೇಶಗಳನ್ನು ಕಳುಹಿಸಿದರು. ಅಲ್ಲಾಹನು ಇವರೆಲ್ಲರಿಗೂ ಪ್ರತಿಫಲ ನೀಡಲಿ.

ತಹಫ್ಫುಝೆ ಖತ್‌ಮುನ್ನುಬುವ್ವತ್ ಸಂಘಟನೆಯಿಂದ ಕೂಡ,

ಇದು ಬಹಳ ಕೆಟ್ಟ ವರ್ತನೆಯೆಂದೂ ಮೃಗೀಯತೆಯೆಂದೂ ಇದು ಘಟಿಸಬಾರದಿತ್ತೆಂದೂ ಹೇಳಿಕೆ ಇತ್ತು. ಆದರೆ, ಅಹ್ಮದಿಯರನ್ನು ಬಹಳ ಕೆಟ್ಟದ್ದಾಗಿ ಚಿತ್ರೀಕರಿಸಿ, ಅವರನ್ನು ಧರ್ಮತ್ಯಾಗಿಗಳೆಂದು ಹೇಳಿ, ಅವರನ್ನು ಕೊಲೆಮಾಡಬೇಕಾದುದು ಕಡ್ಡಾಯವೆಂದು ಬರೆದ ಪೋಸ್ಟರ್‌ಗಳೂ ಬ್ಯಾನರ್‌ಗಳೂ ಎಲ್ಲವೂ ಈಗಲೂ ಬೀದಿಗಳಲ್ಲೂ ಮಾರ್ಗಗಳಲ್ಲೂ ಇವೆ. ಎಷ್ಟರ ಮಟ್ಟಿಗೆಂದರೆ, ಹೈಕೋರ್ಟ್ ಜಡ್ಜ್‌ಗಳ ನೇಮ್‌ಪ್ಲೇಟ್‌ನ ಕೆಳಗೆ ಸಹ ಅವು ಕಾಣಿಸುತ್ತವೆ. ಇವು ಯಾರದು? ಈ ಅಲ್ಪಬುದ್ಧಿಗಳಿಗೆ ಪ್ರೇರಣೆ ಕೊಟ್ಟು ಈ ಕ್ರೂರ ಕೃತ್ಯಗಳನ್ನು ಮಾಡಿಸುವುದು ನೀವಲ್ಲವೇ? ಆದರೆ ಈಗ ಲೋಕದೆಲ್ಲೆಡೆ ಈ ನೀಚ ಕೃತ್ಯವನ್ನು ಶಕ್ತಿಯಾಗಿ ಖಂಡಿಸಿದಾಗ, ಈ ದುಷ್ಕೃತ್ಯದಲ್ಲಿ ಅವರು ಪಾಲುಗಾರರಾಗಿದ್ದು ಕೂಡ ಲೋಕದ ಮುಂದೆ ತಾವು ಇದರಲ್ಲಿ ಪಾಲುಗಾರಲ್ಲವೆಂದು ತೋರಿಸಲಿಕ್ಕಾಗಿ ಈಗ ಹೇಳಿಕೆಗಳನ್ನು ಹೊರಡಿಸುತ್ತಾರೆ. ಅಹ್ಮದಿಯರ ವಿರುದ್ಧ ಈ ಮುಲ್ಲಾಗಳಿಂದ ಪ್ರಕಟವಾಗುತ್ತಿರುವ ವಿದ್ವೇಷ ಮತ್ತು ಹಗೆ ಈ ನೀಚಕೃತ್ಯಗಳ ಹಿಂದೆ ಇರುವ ಕಾರಣ. ಪಾಕಿಸ್ತಾನದ ಚೀಫ್ ಜಸ್ಟಿಸ್ ಚಿಕ್ಕ ಪುಟ್ಟ ವಿಚಾರಗಳಿಗೆ ಸ್ವಯಂ ಕೇಸ್ ತೆಗೆಯುತ್ತಾರೆ. ಅದು ಪತ್ರಿಕೆಗಳಲ್ಲೆಲ್ಲ ವಾರ್ತೆಯಾಗುತ್ತದೆ. ಆದರೆ ಇಷ್ಟು ದೊಡ್ಡ ಧಾಳಿ ನಡೆದಿದ್ದರೂ ಇದಕ್ಕೆ ಪ್ರೇರಣೆ ನೀಡುವ ದೊಡ್ಡ ದೊಡ್ಡ ಬ್ಯಾನರುಗಳನ್ನೂ ಪೋಸ್ಟರ್‌ಗಳನ್ನೂ ಕಂಡಿದ್ದರೂ ಸ್ವಯಂ ಒಂದು ಕೇಸ್ ತೆಗೆಯಲು ಅವರು ಸಿದ್ಧರಲ್ಲ. ಅದೇ ರೀತಿ, ಜನರನ್ನು ಛೂ ಬಿಡುವ ಉಲಮಾಗಳ ವಿರುದ್ಧವಾಗಿ ಕಾನೂನು ಕ್ರಮ ಕೈಗೊಳ್ಳಲು ಅವರು ಸಿದ್ಧರಾಗುವುದಿಲ್ಲ. ನ್ಯಾಯ ನಿರ್ವಹಣೆ ಎಂಬುದು ಸ್ವಂತ ಇಷ್ಟಾನುಸಾರ ಮಾತ್ರವಾಗಿದೆ.

ನಮ್ಮ ಅಳು, ದುಃಖಗಳೆಲ್ಲ ನಾವು ಅಲ್ಲಾಹನ ಮುಂದೆಯೇ ಸಮರ್ಪಿಸುತ್ತೇನೆ. ಇವರೊಡನೆ ನಾವು ಏನನ್ನೂ ಕೇಳುವುದಿಲ್ಲ. ಅವರ ಸ್ಥಿತಿಯನ್ನು ಮಾತ್ರ ನಾನು ವಿವರಿಸಿದ್ದೇನೆ. ಪ್ರತಿಯೊಂದು ಸತ್ವಪರೀಕ್ಷೆಯ ನಂತರ ಅಲ್ಲಾಹನಿಗೋಸ್ಕರ ಮಾಡುವ ತ್ಯಾಗಗಳ ಮತ್ತು ಅವನ ಪ್ರೀತಿ ಗಳಿಸುವ ಮಾರ್ಗಗಳು ಇನ್ನೂ ಹೆಚ್ಚು ಸ್ಪಷ್ಟವಾಗುತ್ತವೆ. ನಮಗೆ ಏನು ಮಾಡಲಿಕ್ಕೂ ಇವರಿಂದ ಸಾಧ್ಯವಿಲ್ಲ. ನಮಗೆ ಏನನ್ನಾದರೂ ನೀಡಲಿಕ್ಕೆ ಕೂಡ ಇವರಿಗೆ ಸಾಧ್ಯವಿಲ್ಲ.

ಲೋಕದಲ್ಲಿ ಉಗ್ರವಾದ ಈ ಕಾಲದಲ್ಲಿ ಬಹಳ ಹೆಚ್ಚಾಗಿದೆ ಎಂಬುದು ಸರಿಯೇ. ಪಾಕಿಸ್ತಾನದಲ್ಲಿ ಅದು ಸೀಮೆಗಳನ್ನು ಉಲ್ಲಂಘಿಸಿದೆ. ಆದರೆ ಅಹ್ಮದಿಯರ ವಿರುದ್ಧ ನಡೆಯುವ ಉಗ್ರರ ಕೃತ್ಯಗಳಿಗೆ ಕಾನೂನಿನ ಸಂರಕ್ಷಣೆ ಇದೆ. ಆದುದರಿಂದ ಅವರಿಗೆ ತೋಚಿದೆಲ್ಲ ಮಾಡಬಹುದಾಗಿದೆ. ಒಂದು ಕಡೆ ಒಬ್ಬ ಭಯೋತ್ಪಾದಕ ಹಿಡಿಯಲ್ಪಟ್ಟನು. ಅವನಿಗೆ ಇವರು ಏನು ಮಾಡಿದರು? ಅವನನ್ನು ಶಿಕ್ಷಿಸಿದರೋ? ಅವನು ಈಗಲೂ ಪಾಕಿಸ್ತಾನದ ಬೀದಿಗಳಲ್ಲಿ ಸ್ವತಂತ್ರವಾಗಿ ವಿಹರಿಸುತ್ತಿದ್ದಾನೆ. ಆದುದರಿಂದ, ಇವರಿಂದ ಏನನ್ನೂ ಯಾವ ಅಹ್ಮದಿಯಾಗಲಿ ಪ್ರತೀಕ್ಷಿಸುವುದಿಲ್ಲ.

ನಮ್ಮ ಯಜಮಾನ ನಮ್ಮ ಅಲ್ಲಾಹನಾಗಿದ್ದಾನೆ. ಅವನ ಮೇಲೆ ನಾವು ಪೂರ್ಣ ಭರವಸೆ ಇಟ್ಟಿದ್ದೇವೆ. ನಮ್ಮ ಸಹಾಯಕ ಅವನಾಗಿದ್ದಾನೆ. ಅವನು ಸದಾ ತನ್ನ ಸಂರಕ್ಷಣೆಯಲ್ಲಿ ನಮ್ಮನ್ನಿಡುತ್ತಾನೆ. ಇವರಿಂದ ಭಾವಿಕಾಲದಲ್ಲೂ ಯಾವುದೇ ಒಳಿತನ್ನು ನಾವು ನಿರೀಕ್ಷಿಸುವುದಿಲ್ಲ. ಆದುದರಿಂದ ಅಹ್ಮದಿಯರು ಜಾಗರೂಕರಾಗಿರಬೇಕು. ಹೆಚ್ಚು ಹೆಚ್ಚಾಗಿ ಪ್ರಾರ್ಥಿಸುತ್ತಿರಬೇಕು. "ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊದುಬಿಕ ಮಿನ್ ಶುರೂರಿಹಿಂ" ಎಂಬ ದುಆ ಹೆಚ್ಚಾಗಿ ಮಾಡುತ್ತಾ ಇರಿ. "ರಬ್ಬಿ ಕುಲ್ಲು ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ" ಎಂಬ ದುಆ ಮಾಡಿರಿ. ಬೇರೆ ದುಆಗಳನ್ನೂ ಮಾಡಿರಿ. ಇವರು ಮಾಡಿದುದರ ನಾಶ ಇವರಿಗೆ ಉಂಟಾಗಲಿಕ್ಕೋಸ್ಕರ ದುಆ ಮಾಡಿರಿ.

ಎರಡು ಮಸೀದಿಗಳಲ್ಲೂ ಗಾಯಗೊಂಡವರಿದ್ದಾರೆ. ಅವರಿಗೋಸ್ಕರ ನೀವು ದುಆ ಮಾಡಿರಿ. ಅವರ ಪೈಕಿ ಒಬ್ಬ ಡಾಕ್ಟರ್ ಜಮ್ರಾನ್ ಸಾಹೇಬ್ ಇಂದು ಮಡಿದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಉಳಿದ ಗಾಯಾಳುಗಳಿಗೆ ಅಲ್ಲಾಹನು ಶಮನ ನೀಡಲಿ. ಪ್ರತಿಯೊಬ್ಬ ಅಹ್ಮದಿಯನ್ನು ಎಲ್ಲ ಕೇಡುಗಳಿಂದ ಅಲ್ಲಾಹನು ಕಾಪಾಡಲಿ.

ಒಂದು ವಿಚಾರವನ್ನು ಹೇಳಲು ಬಯಸುತ್ತೇನೆ. ಓರ್ವ ಅಹ್ಮದಿ ಬಹಳ ಭಾವೋದ್ರೇಕದಿಂದ ಪತ್ರ ಬರೆದಿದ್ದಾರೆ. ಅವರ ಮನೋಭಾವ ದಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ. ಅವರು ವಿದ್ಯಾಸಂಪನ್ನ ರಾಗಿದ್ದಾರೆ. ಅವರು ಜಮಾಅತಿಗೆ ಸೇವೆಸಲ್ಲಿಸುವವರೂ ಆಗಿದ್ದಾರೆ. ಅವರು ಬರೆದ ಒಂದು ಸಾಲು ಹೀಗಿತ್ತು: "ಶತ್ರುಗಳು ಯಾವೆಲ್ಲ ವಿಧದ ರತ್ನಗಳನ್ನು ಮಣ್ಣುಗೂಡಿಸಿಬಿಟ್ಟರು!" ಈ ಮನೋಭಾವ ತಪ್ಪು. ಈ ರತ್ನಗಳನ್ನು ಅವರು ಮಣ್ಣಿನಲ್ಲಿ ತುಳಿದುಹಾಕಲಿಲ್ಲ. ಅವರನ್ನು ಮಣ್ಣಿನಲ್ಲಿ ತುಳಿದು ಹಾಕಲು ಒಂದು ಕುತ್ಸಿತ ಪ್ರಯತ್ನವನ್ನು ಶತ್ರುಗಳು ಮಾಡಿ ನೋಡಿದರು. ಆದರೆ ಅಲ್ಲಾಹನು ಅವರ ಮೌಲ್ಯಗಳನ್ನು ಮೊದಲಿಗಿಂತ ವರ್ಧಿಸಿದನು. ಆ ರತ್ನಗಳನ್ನು ಅಲ್ಲಾಹನು ತನ್ನ ಕೈಗಳಲ್ಲಿ ತೆಗೆದುಕೊಂಡು ತನ್ನ ಎದೆಗೊತ್ತಿ ಹಿಡಿದಿದ್ದಾನೆ. ಅವನು ಅವರಿಗೆ ನಿತ್ಯ ಜೀವನವನ್ನು ದಯಪಾಲಿಸಿದನು. ಈ ಪ್ರತಿಯೊಂದು ರತ್ನ ತನ್ನ ಹಿಂದೆ ಬಿಟ್ಟುಹೋದ ರತ್ನಗಳನ್ನು ಇನ್ನೂ ಹೆಚ್ಚು ಶೋಭಾಯಮಾನ ವಾಗಿ ಮಾಡಿತು. ನಮ್ಮಿಂದ ಅಗಲಿ ಹೋದ ಈ ರತ್ನಗಳನ್ನು ಅಲ್ಲಾಹನು ಇಸ್ಲಾಂ –ಅಹ್ಮದಿಯತಿನ ಆಕಾಶ ಮಂಡಲದಲ್ಲಿ ಪ್ರಶೋಭಿತ ನಕ್ಷತ್ರಗಳಾಗಿ ಸ್ಥಾಪಿಸಿದ್ದಾನೆ. ಆ ಮೂಲಕ ಹೊಸ ಹೊಸ ಕ್ಷೀರಪಥಗಳು ನಿರ್ಮಿಸಲ್ಪಡುವುವು. ನಮಗೆ ನವನವೀನ ಮಾರ್ಗಗಳನ್ನು ಅವು ತೋರಿಸಿಕೊಡುತ್ತವೆ. ಈ ಪ್ರತಿಯೊಂದು ನಕ್ಷತ್ರ ಒಂಟಿಯಾಗಿಯೇ ನಮಗೆ ಮಾರ್ಗ ದೀಪವಾಗಿ ಮಾರ್ಪಡುತ್ತದೆ.

ಆದುದರಿಂದ ನಮ್ಮ ಶತ್ರುಗಳಿಗೆ ಎಂದಿಗೂ ಅವರ ಕುತ್ಸಿತ ಪ್ರಯತ್ನಗಳಲ್ಲಿ ವಿಜಯ ಸಿದ್ಧಿಸಲಾರದು. ಪ್ರತಿಯೊಂದು ಹುತಾತ್ಮತೆ ಬೆಲೆಬಾಳುವ ಫಲಗಳನ್ನು ನೀಡುತ್ತದೆ; ಉನ್ನತ ಸ್ಥಾನಗಳನ್ನು ಪ್ರದಾನ ಮಾಡುತ್ತದೆ. ಈ ಎಲ್ಲ ಹುತಾತ್ಮರ ಪದವಿಗಳನ್ನು ಅಲ್ಲಾಹನು ಉನ್ನತಗೊಳಿಸಲಿ. ನಾವು ಸಹ ಸದಾ ಸ್ಥಿರಚಿತ್ತತೆ ತೋರಿಸಿಕೊಂಡು ಧರ್ಮಕ್ಕೋಸ್ಕರ ತ್ಯಾಗಗಳನ್ನು ಮಾಡುವವರಾಗಲಿ.

ಹುತಾತ್ಮರ ಬಗ್ಗೆ ಹೇಳಲು ಬಯಸುತ್ತೇನೆ. ಆದರೆ ಇದು ದೀರ್ಘ ವಾಗುವುದು. ಮುಂದೆ ಸಂಕ್ಷಿಪ್ತವಾಗಿ ವಿವರಿಸಲಾಗುವುದು. ಸುಮಾರು 85 ಹುತಾತ್ಮರಿದ್ದಾರೆ. ಸಂಕ್ಷಿಪ್ತವಾಗಿ ವಿವರಿಸಲಿಕ್ಕೆಯೇ ತುಂಬಾ ಸಮಯ ಬೇಕು. ಜುಮುಅ ನಂತರ ಅವರ ಜನಾಝ ನಮಾಝ್ ನಿರ್ವಹಿಸಲಾಗುವುದು.

ಲಾಹೋರ್ ಮಸೀದಿಗಳಲ್ಲಿ ನಡೆದ ಈ ಘಟನೆಗಳ ಎರಡು ಮೂರು ದಿನಗಳ ಬಳಿಕ ನಾರೋವಾಲ್ ಎಂಬ ಸ್ಥಳದಲ್ಲಿ ನಮ್ಮ ಒಬ್ಬ ಅಹ್ಮದೀ ಹುತಾತ್ಮರಾದರು. ಅವರ ಹೆಸರು ನಿಅ್‌ಮತುಲ್ಲಾಹ್ ಸಾಹೇಬ್ ಎಂದಾಗಿದೆ. ಅವರು ತನ್ನ ಮನೆಯ ಅಂಗಳದಲ್ಲಿ ನಿದ್ರಿಸುತ್ತಿದ್ದರು. ಕತ್ತಿಯಿಂದ ಕಡಿದು ಅವರನ್ನು ಸಾಯಿಸಲಾಯಿತು. ಅವರ ಹಿರಿಯ ಪುತ್ರ ತಂದೆಯನ್ನು ರಕ್ಷಿಸಲಿಕ್ಕೆ ಬಂದಾಗ ಅವರಿಗೂ ಚೂರಿಯ ಪೆಟ್ಟಾಯಿತು. ಅವರೀಗ ಆಸ್ಪತ್ರೆಯಲ್ಲಿದ್ದಾರೆ. ಅಲ್ಲಾಹನು ಅವರನ್ನು ಗುಣಪಡಿಸಲಿ. ಹುತಾತ್ಮರ ಪದವಿಯನ್ನು ಉನ್ನತಗೊಳಿಸಲಿ. ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳಿದ್ದಾರೆ. ಇವರ ಬಂಧುಗಳು ಸಹ

*(30ನೇ ಪುಟಕ್ಕೆ.......)*

# ಧಾರ್ಮಿಕ ಭೀಕರ ಕೃತ್ಯಗಳು

## ಕಾರಣ ಮತ್ತು ಪರಿಹಾರ ಮಾರ್ಗಗಳು

★ ನಸೀರ್ ಅಹ್ಮದ್ ಖಮರ್
ಪ್ರಧಾನ ಸಂಪಾದಕ "ಅಲ್‌ಫಝ್ಲ್ ಇಂಟರ್‌ನೇಶನಲ್"

ಇಸ್ಲಾಮ್ ಧರ್ಮವು ಆಕ್ರಮಣಕಾರಿ ಧರ್ಮವಾಗಿದೆ; ಅದು ಭೀಕರ ಕೃತ್ಯಗಳನ್ನು ಪ್ರೋತ್ಸಾಹಿಸುತ್ತದೆ ಎಂದು ಪಾಶ್ಚಿಮಾತ್ಯ ದೇಶಗಳಲ್ಲಿರುವ ಹಲವು ಜನರು ಅಭಿಪ್ರಾಯ ಹೊಂದಿದ್ದಾರೆ. ದುಃಖಕರವಾದ ವಿಷಯವೇನೆಂದರೆ, ನಿರಪರಾಧಿ ಜನರ ಹತ್ಯೆ, ಆತ್ಮಹತ್ಯಾ ಬಾಂಬ್ ದಾಳಿ ಮತ್ತು ಇತರ ಭೀಕರ ಕೃತ್ಯಗಳು ಮುಸ್ಲಿಮರೆಂದು ತಮ್ಮನ್ನು ಹೇಳಿಕೊಳ್ಳುವ ಜನರಿಂದ ನಡೆಸಲಾಗುತ್ತಿದೆ. ವಾಸ್ತವಿಕ ವಿಷಯವೇನೆಂದರೆ, ಇಂತಹ ದ್ವೇಷಭರಿತ ಕೃತ್ಯಗಳ ಹೊಣೆಗಾರಿಕೆಯನ್ನು ತಥಾಕಥಿತ ಮುಸ್ಲಿಮ್ ಮತವಿದ್ವಾಂಸರ ಮೇಲೆ ಹೊರಿಸಬೇಕಾಗಿದೆ. ಈ ವಿದ್ವಾಂಸರು "ಜಿಹಾದ್" ಎಂಬ ವಿಷಯವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಮನುಷ್ಯರನ್ನು ಅನ್ಯಾಯಕರವಾಗಿ ಕೊಲ್ಲುವುದು ತಮ್ಮ ಧಾರ್ಮಿಕ ಕರ್ತವ್ಯವೆಂದು ಅವರು ಗಣಿಸುತ್ತಾರೆ. ಅವರು ಪವಿತ್ರ ಖುರ್‌ಆನಿನಲ್ಲಿರುವ ಮುತಶಾಬಿಹಾತ್ (ಜಟಿಲ ಮತ್ತು ವಿವಿಧ ಅರ್ಥಗಳುಳ್ಳ) ವಚನಗಳಿಗೆ ತಪ್ಪು ವ್ಯಾಖ್ಯಾನ ನೀಡಿ ತಮ್ಮ ಸ್ವಾರ್ಥ ಲಾಭದಗಳಿಕೆಗೋಸ್ಕರ ಮಾಡುವ ವಿದ್ರೋಹಕೃತ್ಯಗಳೇ ಇಸ್ಲಾಮೀ ಜಿಹಾದ್ ಎಂದು ಅವರು ಹೇಳುತ್ತಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ವಾಗ್ದತ್ತ ಮಸೀಹರು[ಅ] ಹೀಗೆ ಹೇಳಿದ್ದಾರೆ:

"ಇಸ್ಲಾಮ್ ಅದರ ಪ್ರಚಾರಕ್ಕೋಸ್ಕರ ಖಡ್ಗದ ಆವಶ್ಯಕತೆಯೇ ಇಲ್ಲದ ಧರ್ಮವಾಗಿದೆ. ಇಸ್ಲಾಮ್ ಧರ್ಮದಲ್ಲಿ ಅಡಕವಾಗಿರುವ ಅತ್ಯುತ್ತಮ ಉಪದೇಶಗಳು, ಅದರ ಸತ್ಯತೆಗಳು, ಅದರ ಬೋಧನೆ, ಅದರ ತರ್ಕ ಬದ್ಧ ವಾದಗಳು, ಅದಕ್ಕೆ ಇರುವ ಮಹೋನ್ನತವಾದ ಅಲ್ಲಾಹನ ನೆರವು, ದೃಷ್ಟಾಂತಗಳು ಮತ್ತು ಅಲ್ಲಾಹನ ಮೇಲ್ವಿಚಾರಣೆ, ಮೊದಲಾದವು ಇಸ್ಲಾಮಿನ ಪ್ರಚಾರಕ್ಕೆ ಸಹಕಾರಿಯಾದುವು.... ಇಸ್ಲಾಮ್ ಧರ್ಮದ ಸಂದೇಶದ ಪ್ರಚಾರಕ್ಕೆ ಯಾವುದೇ ಬಲಾತ್ಕಾರದ ಆವಶ್ಯಕತೆ ಇರುವುದಿಲ್ಲ... ಗಡಿನಾಡು ಪ್ರದೇಶಗಳಲ್ಲಿ ಜಿಹಾದ್ ಹೆಸರಿನಲ್ಲಿ ವಿದ್ರೋಹಕರ ಕೃತ್ಯಗಳನ್ನು ನಡೆಸುವವರನ್ನು, ಗಾಝಿಗಳೆಂದು (ಇಸ್ಲಾಮೀ ಹೋರಾಟಗಾರರೆಂದು) ಕರೆಯುವುದು ಅಸಂಬದ್ಧವೂ ತಿಳಿಗೇಡಿತನವೂ ಆಗಿದೆ. ಒಬ್ಬ ಅಜ್ಞಾನಿ ಮುಸ್ಲಿಮನು, ಇಂತಹ ಜನರು ಜಿಹಾದ್ ನಡೆಸುತ್ತಾರೆಂದು ಗಣಿಸಿ ಅವರ ಬಗ್ಗೆ ಸ್ವಲ್ಪ ಮಾತ್ರ ಸಹ ಸಹಾನುಭೂತಿ ಸೂಚಿಸುತ್ತಾನಾದರೆ ಮತ್ತು ವಿದ್ರೋಹಿಯನ್ನು ಗಾಝಿ ಎಂದು ಕರೆದು, ಇಸ್ಲಾಮಿಗೆ ಕೆಟ್ಟ ಹೆಸರು ತರುವವನನ್ನು ಪ್ರಶಂಸಿಸುವುದಾದರೆ ನಾನು ಆತನನ್ನು ಸತ್ಯವಾಗಿ ಇಸ್ಲಾಮಿನ ಶತ್ರು ಎಂದು ಕರೆಯುತ್ತೇನೆ..... ಇಸ್ಲಾಮ್ ಖಡ್ಗದ ಮೂಲಕ ಪ್ರಚಾರಗೊಂಡಿತೆಂದು ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ಯುರೋಪಿಯನ್ ದೇಶಗಳಲ್ಲಿ ಇಸ್ಲಾಮನ್ನು ತೀವ್ರವಾಗಿ ಖಂಡಿಸಲಾಗುತ್ತಿದೆ...

"ವಾಸ್ತವಿಕ ವಿಷಯವೇನೆಂದರೆ, ವಿದ್ರೋಹಕರ ಕೃತ್ಯಗಳು ಮೌಲವಿಗಳೆಂದು ಕರೆಯಲ್ಪಡುವ ಮುಸ್ಲಿಮ್ ಮತಪಂಡಿತರಿಂದ ಪ್ರೋತ್ಸಾಹಿಸಲ್ಪಡುತ್ತವೆ. ಅವರು ಇಸ್ಲಾಮಿಗೆ ತಿಳಿಗೇಡಿಗಳಾದ ಸ್ನೇಹಿತರಾಗಿದ್ದಾರೆ. ಅವರು ಇಸ್ಲಾಮಿನ ನೈಜ ತತ್ವಗಳನ್ನು ಅರಿತಿಲ್ಲ. ಅವರು ಸ್ವತಃ ಸೃಜಿಸಿದ ನಂಬಿಕೆಗಳ ಮೂಲಕ ಇಸ್ಲಾಮನ್ನು ಆಕ್ಷೇಪಿಸುವ ಇತರರಿಗೆ ಸಂದರ್ಭವೊದಗಿಸಿಕೊಟ್ಟರು. ಅವರು ಸೃಷ್ಟಿಸಿದ ನಂಬಿಕೆಗಳು ಕ್ರೈಸ್ತರಿಗೆ ಬಹಳ ಸಹಾಯಕವಾದುವು. ಅವರು ಜಿಹಾದ್ ಬಗ್ಗೆ ಇತರರನ್ನು ವಂಚಿಸದೆ ಇರುತ್ತಿದ್ದರೆ ಮತ್ತು ಜಿಹಾದನ್ನು ತಪ್ಪಾಗಿ ಅರ್ಥೈಸದೆ ಇರುತ್ತಿದ್ದರೆ ಯಾರಿಗೂ ಇಸ್ಲಾಮನ್ನು ಅಕ್ಷೇಪಿಸಲು ಸಂದರ್ಭ ಸಿಗುತ್ತಿರಲಿಲ್ಲ."

(ಮಲ್‌ಫೂಝಾತ್ - ಸಂಪುಟ 3, ಪುಟ 176-177)

### ಜಿಹಾದ್‌ಗೆ ನೀಡಲಾದ ತಪ್ಪು ವ್ಯಾಖ್ಯಾನ

ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

"ಜಿಹಾದ್ ಎಂಬ ವಿಷಯ ಜಟಿಲವೂ ಸೂಕ್ಷ್ಮವೂ ಆಗಿದೆ. ಅದನ್ನು ಮನವರಿಕೆ ಮಾಡದ ಕಾರಣದಿಂದ ಈಗಿನ ಕಾಲದಲ್ಲಿಯೂ (ಇಸ್ಲಾಮಿನ) ಮಧ್ಯಯುಗದಲ್ಲಿಯೂ ಜನರು ಬಹಳ ತಪ್ಪುಗಳನ್ನು ಮಾಡಿರುವರು ಎಂದು ನಾವು ಅತ್ಯಂತ ನಾಚಿಕೆಯಿಂದ ಒಪ್ಪಿಕೊಳ್ಳಲು ನಿರ್ಬಂಧಿತರಾಗುತ್ತೇವೆ. ಅವರು ಮಾಡಿದ ಅಪಾಯಕರ ತಪ್ಪುಗಳ ಕಾರಣದಿಂದ ಪರಿಶುದ್ಧವೂ ನೈಸರ್ಗಿಕ ನಿಯಮಗಳ ದರ್ಪಣವೂ ಜೀವಂತ ದೇವನ ಮಹಿಮೆಯನ್ನು ಪ್ರಕಟಿಸುವಂತಹದೂ ಆಗಿರುವ ಇಸ್ಲಾಮ್ ಧರ್ಮವನ್ನು ವಿರೋಧಿಗಳಿಗೆ ಆಕ್ಷೇಪಿಸಲು ಸಂದರ್ಭ ಸಿಗುವಂತಾಯಿತು."

(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಮುಸ್ಲಿಮ್ ವ್ಯಾಖ್ಯಾನಗಾರರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನವನ್ನು ಉಲ್ಲೇಖಿಸಿ ಇಸ್ಲಾಮನ್ನು ನಿಂದಿಸಿ ಅದನ್ನು ಜನರು ವಿರೋಧಿಸುವಂತೆ ಪ್ರೋತ್ಸಾಹಿಸುವುದು ಪಾಶ್ಚಿಮಾತ್ಯ ಓರಿಯಂಟಲಿಸ್ಟ್ ವಿದ್ವಾಂಸರ ಪರಂಪರೆಯಾಗಿದೆ.

ಇತ್ತೀಚೆಗಿನ ಕಾಲದಲ್ಲಿ ಜಮಾಅತೆ ಇಸ್ಲಾಮಿಯ ಸ್ಥಾಪಕ ಮೌಲವಿ ಅಬುಲ್ ಆಲಾ ಮೌದೂದಿ ಪವಿತ್ರ ಖುರ್‌ಆನಿಗೆ ತಪ್ಪು ಮತ್ತು ಅಸಂಗತ ವ್ಯಾಖ್ಯಾನ ನೀಡಿರುವುದಲ್ಲದೆ ಹಝ್ರತ್ ಮುಹಮ್ಮದ್ ಪೈಗಂಬರರ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಬಗ್ಗೆ ಸಹ ತಪ್ಪು ಅಭಿಪ್ರಾಯಗಳನ್ನು ನೀಡಿರುವರು. ಈ ತಪ್ಪು ವ್ಯಾಖ್ಯಾನಗಳು ಪಾಶ್ಚಿಮಾತ್ಯ ಲೇಖಕರ ಗ್ರಂಥಗಳಲ್ಲಿ ಪ್ರತಿಧ್ವನಿಸಿವೆ.

ಡೇವಿಡ್ ಮಾರ್ಶಲ್ ಎಂಬ ಲೇಖಕ God, Muhammad and the Unbelievers - A Quaranic Study ಎಂಬ ಗ್ರಂಥ ಬರೆದಿರುವನು. ಈ ಗ್ರಂಥದಲ್ಲಿ ಪವಿತ್ರ ಖುರ್‌ಆನಿನ ಅನೇಕ ವಚನಗಳಿಗೆ ತಪ್ಪು ಅರ್ಥನೀಡಿ ಅದನ್ನು ಬರ್ಬರ ಧರ್ಮ ಎಂದು ಕರೆದಿರುವನು. ಮುಸ್ಲಿಮೇತರರು ಇಸ್ಲಾಮ್ ಧರ್ಮ ಸ್ವೀಕರಿಸುವ ತನಕ ಅಥವಾ ಕೊಲ್ಲಲ್ಪಡುವ ತನಕ ಅವರ ವಿರುದ್ಧ ಹೋರಾಡಬೇಕೆಂದು ಮುಸ್ಲಿಮರಿಗೆ ಕಲಿಸಲಾಗಿದೆ ಎಂದು ಅವನು ಬರೆದಿದ್ದಾನೆ. ಅವನು ತನ್ನ ಅಭಿಪ್ರಾಯವನ್ನು ಸ್ಥಾಪಿಸಲು ಮೌಲವಿ ಅಬುಲ್ ಆಲಾ ಮೌದೂದಿಯ ಗ್ರಂಥಗಳಿಂದ ಉಲ್ಲೇಖಗಳನ್ನು ನೀಡಿದ್ದಾನೆ. ಇಸ್ಲಾಮಿನ ಸಂದೇಶವನ್ನು ಸರಿಯಾಗಿ ಅರ್ಥ ಮಾಡಿ ಕೊಂಡಿರುವ ಏಕ ಮಾತ್ರ ವ್ಯಕ್ತಿ ಮೌಲವಿ ಅಬುಲ್ ಆಲಾ ಮೌದೂದಿ ಮಾತ್ರ ಎಂದು ಅವನು ಹೇಳುತ್ತಾನೆ. (God, Muhammad and the Unbelievers - A Quaranic Study - pp. 191-197)

ಹಝ್ರತ್ ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

> "ಮುಸ್ಲಿಮರೆಂದು ತಮ್ಮನ್ನು ಹೇಳಿಕೊಳ್ಳುವ ಜನರು ಇಸ್ಲಾಮನ್ನು ಖಡ್ಗದ ಮೂಲಕ ಪ್ರಚಾರ ಮಾಡಬೇಕಾಗಿದೆ ಎಂದು ನಂಬುವುದಾದರೆ ಅವರು ಇಸ್ಲಾಮಿನಲ್ಲಿರುವ ಶ್ರೇಷ್ಠ ತತ್ವಗಳನ್ನು ಅರಿತು ಕೊಂಡಿಲ್ಲ. ಅವರ ಕೃತ್ಯಗಳು ಕಾಡು ಮೃಗಗಳ ಕೃತ್ಯಗಳ ಹಾಗಿವೆ."
>
> (ತಿರ್‌ಯಾಖುಲ್ ಖುಲೂಬ್ - ರೂಹಾನಿ ಖಝಾಯಿನ್ - ಸಂಪುಟ 15, ಪುಟ 167)

ಅವರು ಪುನಃ ಹೇಳುತ್ತಾರೆ:

> "ಧರ್ಮಕ್ಕೋಸ್ಕರ ಖಡ್ಗ ಎತ್ತಬೇಕೆಂಬ ನಂಬಿಕೆ ಯನ್ನು ದೂರೀಕರಿಸಲು ವಾಗ್ದತ್ತ ಮಸೀಹ್ ಆಗಮಿಸಿದರು.... ಇಸ್ಲಾಮ್ ಎಂಬ ಪವಿತ್ರ ಧರ್ಮದ ವಿರುದ್ಧ ಕೆಟ್ಟ ಜನರು ಮಾಡುವ ಎಲ್ಲಾ ಆಕ್ಷೇಪಗಳನ್ನು ನಿವಾರಿಸಲು ಮಹೋನ್ನತನಾದ ಅಲ್ಲಾಹನು ಈಗ ಬಯಸುತ್ತಾನೆ."
>
> (ಮಲ್‌ಫೂಝಾತ್ - ಸಂಪುಟ 3, ಪುಟ 176 ಲಂಡನ್‌ನಲ್ಲಿ ಪ್ರಕಟಿತ)

ಹಝ್ರತ್ ವಾಗ್ದತ್ತ ಮಸೀಹರ[ಅ] ಪ್ರತಿನಿಧಿಯಾಗಿ ಅವರ ಪಂಚಮ ಖಲೀಫರೂ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಾಯಕರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ "ಜಿಹಾದ್" ಎಂಬ ಪದದ ವಿವರಣೆ ನೀಡುವ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ಧರ್ಮದ ಹೆಸರಲ್ಲಿ ಬಲಾತ್ಕಾರ ಮತ್ತು ಹಿಂಸಾಚಾರ ಮಾಡಬಾರದೆಂದು ಅವರು ಹೇಳುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ನೈಜ ಜಿಹಾದ್ ನಡೆಸುವುದರಲ್ಲಿ ನಿರತರಾಗಿದ್ದಾರೆ. ಮಹೋನ್ನತನಾದ ಅಲ್ಲಾಹನ ಸಹಾಯದೊಂದಿಗೆ ಇಸ್ಲಾಮ್ ಧರ್ಮದ ಶಾಂತಿ ಸಂದೇಶವನ್ನು ಲೋಕದಾದ್ಯಂತ ಹರಡುವುದರಲ್ಲಿ ಅವರು ತಲ್ಲೀನರಾಗಿದ್ದಾರೆ. ಅಹ್ಮದಿಯಾ ಜಮಾಅತಿಗೆ ಸೇರಿದವರು ಇಸ್ಲಾಮಿನ ಶಾಂತಿ ಸಂದೇಶ ವನ್ನು ಲೋಕದಲ್ಲಿ ಪ್ರಚಾರಗೊಳಿಸಬೇಕೆಂದು ಅವರು ಅಹ್ಮದಿಯಾ ಜಮಾಅತಿನ ಸದಸ್ಯರಿಗೆ ಯಾವಾಗಲೂ ಉಪದೇಶಿಸುತ್ತಾ ಇರುತ್ತಾರೆ.

ಈ ಉದ್ದೇಶಕ್ಕೋಸ್ಕರ ಅಹ್ಮದಿಯಾ ಜಮಾಅತ್ ಜನಸಂಖ್ಯೆಯಲ್ಲಿ ಕಿರಿದಾಗಿದ್ದರೂ ಪವಿತ್ರ ಖುರ್‌ಆನನ್ನು ಅರುವತ್ತಕ್ಕಿಂತ ಹೆಚ್ಚು ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸಿದೆ. ಅದು MTA ಎಂಬ ಅಂತರ್ರಾಷ್ಟ್ರೀಯ ಟೆಲಿವಿಷನ್ ಸ್ಟೇಷನ್ ಹೊಂದಿದ್ದು ದಿನವಿಡೀ 24 ಗಂಟೆಗಳಲ್ಲೂ ಬಿತ್ತರಿಸಿ ಇಸ್ಲಾಮಿನ ನೈಜ ತತ್ವಗಳನ್ನು ಪ್ರಚಾರ ಮಾಡುತ್ತಿದೆ.

ಅಹ್ಮದಿಯಾ ಜಮಾಅತ್ ಸಾವಿರಾರು ಪುಸ್ತಕಗಳನ್ನೂ ಇತರ ಸಾಹಿತ್ಯಗಳನ್ನೂ ಪ್ರಕಟಿಸುತ್ತಾ ಇದೆ. ಜಗತ್ತಿನಾದ್ಯಂತ ಸರ್ವ ಧರ್ಮ ಸಮ್ಮೇಳನಗಳನ್ನು ನಡೆಸಿ ಅದರಲ್ಲಿ ವಿವಿಧ ಧರ್ಮಗಳ ವಿದ್ವಾಂಸರು ಮತ್ತು ಇತರ ಜನರು ಭಾಗವಹಿಸಿ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸಲಾಗುತ್ತಿದೆ.

ಇಸ್ಲಾಮನ್ನು ಶಾಂತಿಯುತವಾಗಿ ಮತ್ತು ವೈಚಾರಿಕ ಪ್ರತಿಪಾದನೆಯ ಮೂಲಕ ಪ್ರಚಾರಗೊಳಿಸಬೇಕೆಂಬ ವಾಗ್ದತ್ತ ಮಸೀಹರ ಉದ್ದೇಶವು ಹೀಗೆ ನೆರವೇರುತ್ತಾ ಇದೆ.

ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನಾಯಕರೂ ಪಂಚಮ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಇಸ್ಲಾಮಿನ ಶಾಂತಿ ಸಂದೇಶವನ್ನು ಮತ್ತು ಜಿಹಾದಿನ ನೈಜ ಅರ್ಥವನ್ನು ಪವಿತ್ರ ಖುರ್‌ಆನ್, ಹದೀಸು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪರಿಶುದ್ಧ ಜೀವಿತ ಮಾದರಿಯ ಮೂಲಕ ವಿವರಿಸುತ್ತಾರೆ.

## ಅನಾಗರಿಕ ಮತ್ತು ರಕ್ತಪಾತ ಮಾಡುವ ಜಿಹಾದಿನ ಕಲ್ಪನೆಯ ಖಂಡನೆ

ನಾವು ಇದರ ಮೊದಲು ಉಲ್ಲೇಖಿಸಿದ ಹಾಗೆ ಕೆಲವು ಮುಸ್ಲಿಮರ ಧಾರ್ಮಿಕ ಅಂಧವಿಶ್ವಾಸ, ಹಿಂಸಾಚಾರ ಮತ್ತು ಭೀಕರ ಕೃತ್ಯಗಳಿಗೆ ಕಾರಣ ಮೌಲವಿಗಳೆಂಬ ಧಾರ್ಮಿಕ ಪಂಡಿತರು ಜಿಹಾದ್ ಎಂಬ ಪದಕ್ಕೆ ನೀಡಿದ ತಪ್ಪು ವ್ಯಾಖ್ಯಾನಗಳ ಪ್ರಚಾರವೇ ಆಗಿದೆ.

ವಾಗ್ದತ್ತ ಮಸೀಹ್[ಅ] ಈ ವಿಷಯಕ್ಕೆ ಸಂಬಂಧಿಸಿ ತನ್ನ ಅನೇಕ ಗ್ರಂಥಗಳಲ್ಲಿ ಬರೆದಿದ್ದಾರೆ. ಅವರು "ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್" ಮತ್ತು "ಝಮೀಮ ರಿಸಾಲ ಜಿಹಾದ್" ಎಂಬ ಪುಸ್ತಕಗಳಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ಬರೆದಿದ್ದಾರೆ. ಅವರು ಪವಿತ್ರ ಖುರ್‌ಆನ್, ಹದೀಸು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಡೆವಳಿಕೆಗಳನ್ನು ಉಲ್ಲೇಖಿಸಿ ಜಿಹಾದ್ ಶಬ್ದಕ್ಕೆ ಕೆಲವು ಮುಸ್ಲಿಮರು ನೀಡುವ ತಪ್ಪು ವಿವರಣೆಗಳನ್ನು ಖಂಡಿಸಿದ್ದಾರೆ. ಜಿಹಾದ್ ಬಗ್ಗೆ ತಪ್ಪು ವ್ಯಾಖ್ಯಾನ ನೀಡಿದವರನ್ನು ಸೂಚಿಸಿ ಅವರ ಅಪರಾಧವನ್ನು ವಿವರಿಸಿ ಅವರಿಂದ ಮಾನವರು ಎದುರಿಸಬೇಕಾದ ಅಪಾಯಗಳನ್ನು ಅವರು ವಿವರಿಸಿದ್ದಾರೆ. ಧಾರ್ಮಿಕ ಭೀಕರತೆಯನ್ನು ಹೋಗಲಾಡಿಸಿ, ಶಾಂತಿ ಯನ್ನು ಸ್ಥಾಪಿಸಲು ಮತ್ತು ಮತಭ್ರಾಂತಿಯನ್ನು ಹೋಗಲಾಡಿಸಲು ಅವರು ಮಾರ್ಗ ಸೂಚಿಗಳನ್ನು ನೀಡಿದ್ದಾರೆ.

ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

> "ಕಣ್ಣುಗಳನ್ನು ಹೊಂದಿರುವವನು ಹದೀಸು ಗಳನ್ನು ಓದುತ್ತಾ ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡುವುದಾದರೆ ಅವನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ, ಈ ಕಾಲಘಟ್ಟದಲ್ಲಿ ಬಹುತೇಕ ಅನಾಗರಿಕ ಜನರು ಮಾಡುವ ಜಿಹಾದ್ ವಾಸ್ತವಿಕ ಇಸ್ಲಾಮೀ ಜಿಹಾದ್ ಅಲ್ಲ. ದುಷ್ಪ್ರೇರಕ ಆತ್ಮದ ಉತ್ಸಾಹದಿಂದ ಅಥವಾ ಸ್ವರ್ಗ ಲಭಿಸುವು ದೆಂಬ ನಿರರ್ಥಕ ಆಶೆಯಿಂದ ಮಾಡಲ್ಪಡುವ ಈ ಕೃತ್ಯಗಳು ಧರ್ಮಬದ್ಧವಲ್ಲ."

"ಅನ್ಯ ಧರ್ಮದ ಜನರನ್ನು ಆಕ್ರಮಿಸುವ ಸಂಪ್ರದಾಯವನ್ನು ಮುಸ್ಲಿಮರಲ್ಲಿ ಜಿಹಾದ್ ಎಂದು ಕರೆಯುತ್ತಾರೆ. ಇದು ಧರ್ಮವು ಅನುಮತಿಸಿರುವ ಜಿಹಾದ್ ಅಲ್ಲ. ಇದು ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ವಿರೋಧಿಸುವ ಮಹಾ ಪಾಪಕೃತ್ಯವಾಗಿದೆ."

"ಇಸ್ಲಾಮೀ ಮತಪಂಡಿತರು ಜಿಹಾದನ್ನು ಅರ್ಥಮಾಡಿಕೊಂಡಿರುವುದು ಖಂಡಿತವಾಗಿಯೂ ಸರಿಯಾಗಿ ಅಲ್ಲ ಎಂದು ನೆನಪಿಟ್ಟುಕೊಳ್ಳಿರಿ. ಅದರ ಪರಿಣಾಮವಾಗಿ ಜನರು ಮಾನವೀಯ ಸದ್ಗುಣಗಳಿಂದ ವಂಚಿತರಾಗಿದ್ದಾರೆ."

"ನಮಗೆ ಇದರ ಮೊದಲು ಯಾವುದೇ ಹಗೆತನ ಇಲ್ಲದ ಮತ್ತು ನಮಗೆ ಪರಿಚಯ ಸಹ ಇಲ್ಲದ ಒಬ್ಬ ಮನುಷ್ಯನನ್ನು, ಅವನು ತನ್ನ ಮಕ್ಕಳಿಗೋಸ್ಕರ ಅಂಗಡಿಯಿಂದ ಏನನ್ನೋ ಖರೀದಿಸುತ್ತಾ ಇರುವಾಗ ಬಂದೂಕಿನಿಂದ ಕೊಂದು ಅವನ ಪತ್ನಿಯನ್ನು ವಿಧವೆಯನ್ನಾಗಿಯೂ ಮಕ್ಕಳನ್ನು ಅನಾಥರನ್ನಾಗಿಯೂ ಅವನ ಮನೆಯನ್ನು ಶೋಕಭರಿತವನ್ನಾಗಿಯೂ ಮಾಡುವುದು ಎಷ್ಟು ನಾಚಿಗೇಡಿತನ ಮತ್ತು ದುಃಖಕರವಾದ ಕೆಲಸವಾಗಿದೆ. ಯಾವ ಹದೀಸು ಮತ್ತು ಪವಿತ್ರ ಖುರ್‌ಆನಿನ ಯಾವ ವಚನ ಇದನ್ನು ಉಪದೇಶಿಸುತ್ತದೆ? ಯಾರಾದರೂ ಮೌಲವಿ ಇದಕ್ಕೆ ಉತ್ತರ ನೀಡಬಲ್ಲರೇ? ತಿಳಿಗೇಡಿಗಳು ಜಿಹಾದ್ ಎಂಬ ಹೆಸರು ಆಲಿಸಿ ಅದನ್ನು ಅನಂತರ ತಮ್ಮ ಸ್ವಾರ್ಥ ಸಾಧನೆಗೆ ನೆವನವನ್ನಾಗಿ ಮಾಡಿದರು. ಹಾಗೆ ಅವರು ಭ್ರಾಂತರಾಗಿ ರಕ್ತಪಾತ ಮಾಡುತ್ತಿದ್ದಾರೆ."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಇಂದಿನ ಕಾಲದಲ್ಲಿ ಭೀಕರವಾದಿಗಳು ನಿರಪರಾಧಿ ಜನರನ್ನು ಪ್ರಾರ್ಥನಾಲಯಗಳಲ್ಲೂ ಸಾರಿಗೆ ವಾಹನಗಳಲ್ಲೂ ಸಭೆ ಸಮಾರಂಭಗಳಲ್ಲೂ ಜಿಹಾದ್ ಹೆಸರಿನಲ್ಲಿ ಹತ್ಯೆಗೈಯುತ್ತಾ ಇದ್ದಾರೆ.

## ಮುಲ್ಲಾ (ಧಾರ್ಮಿಕ ಪಂಡಿತ) ಮತಾಂಧತೆಗೂ ಭೀಕರ ಕೃತ್ಯಗಳಿಗೂ ಮುಖ್ಯ ಕಾರಣ

ಮತಾಂಧತೆ, ಭೀಕರ ಕೃತ್ಯಗಳು ಮತ್ತು ಅನ್ಯಾಯಕರ ಹತ್ಯಾಕಾಂಡಗಳಿಗೆ ಕಾರಣ ಮುಲ್ಲಾ ಆಗಿದ್ದಾರೆಂದು ಹಝ್‌ರತ್ ವಾಗ್ದತ್ತ ಮಸೀಹ್[ಅ] ಹೇಳಿದ್ದಾರೆ. ಇವರಲ್ಲಿ ಮುಸ್ಲಿಮ್ ಮತಪಂಡಿತರೂ ಯುರೋಪಿಯನ್ ಪಾದರಿಗಳೂ ಸೇರಿದ್ದಾರೆ.

ಮುಸ್ಲಿಮ್ ಮುಲ್ಲಾ ಬಗ್ಗೆ ಹಝ್‌ರತ್ ವಾಗ್ದತ್ತ ಮಸೀಹ್ ಹೀಗೆ ಹೇಳಿದ್ದಾರೆ:

"ಮೌಲವಿಗಳೆಂದು ಕರೆಯಲ್ಪಡುವ ಮುಸ್ಲಿಮ್ ಮತ ಪಂಡಿತರು ಜಿಹಾದ್ ಬಗ್ಗೆ ಮನವರಿಕೆ ಮಾಡಿಕೊಂಡಿರುವ ವಿಷಯವನ್ನು ಜನರಿಗೆ ವಿವರಿಸಿ ಕೊಡುತ್ತಿದ್ದಾರೆ. ಅದು ಖಂಡಿತವಾಗಿಯೂ ಸರಿಯಲ್ಲ. ಅವರು ತಮ್ಮ ಉತ್ತೇಜಕ ಭಾಷಣಗಳ ಮೂಲಕ ಜನರ ಹಿಂಸಾತ್ಮಕ ಸ್ವಭಾವವನ್ನು ಪ್ರೇರೇಪಿಸಿ ಇನ್ನಷ್ಟು ಹಿಂಸಾತ್ಮಕವನ್ನಾಗಿ ಮಾಡುತ್ತಾರೆ. ಜನರನ್ನು ಎಲ್ಲಾ ಮಾನವೀಯ ಸದ್ಗುಣಗಳಿಂದ ವಂಚಿತರನ್ನಾಗಿ ಮಾಡಲಾಗುತ್ತದೆ. ಇಂತಹ ಸ್ವಾರ್ಥ, ತಿಳಿಗೇಡಿ ಜನರಿಂದ ನಡೆಸಲಾಗುವ ಹತ್ಯಾಕಾಂಡಗಳ ಬಗ್ಗೆ ನನಗೆ ಖಂಡಿತವಾಗಿಯೂ ತಿಳಿದಿದೆ. ಇಸ್ಲಾಮಿನ ಆರಂಭದ ಕಾಲದಲ್ಲಿ ಯುದ್ಧಮಾಡುವ ಆವಶ್ಯಕತೆ ಏಕೆ ಉಂಟಾಯಿತು ಎಂಬ ರಹಸ್ಯದ ಬಗ್ಗೆ ಈ ಜನರು ತಿಳಿದಿಲ್ಲ. ಈ ಜನರು ನಡೆಸುವ ಹತ್ಯಾಕಾಂಡಗಳಿಗೆ ಕಾರಣ ಮೌಲವಿಗಳು ರಹಸ್ಯವಾಗಿ ನೀಡುವ ಉಪದೇಶಗಳಾಗಿವೆ. ಈ ಜನರ ಪಾಪಭಾರವು ಈ ಮೌಲವಿಗಳ ಕೊರಳಿಗೆ ಬೀಳುವುದು."

"ಅಜ್ಞಾನಿ ಮೌಲವಿಗಳಿಗೆ ಅಲ್ಲಾಹನು ಮಾರ್ಗದರ್ಶನ ನೀಡುವವನಾಗಲಿ. ಅವರು ನಿಷ್ಕಳಂಕರಾದ ಜನರನ್ನು ಬಹಳ ಮೋಸಕ್ಕೊಳಪಡಿಸಿರುವರು. ಅವರು ದೌರ್ಜನ್ಯಭರಿತ, ದಯೆರಹಿತ ಮತ್ತು ಮಾನವೀಯ ಸದ್ಗುಣಗಳಿಗೆ ಸಂಪೂರ್ಣ ವಿರುದ್ಧವಾಗಿರುವ ಈ ಕೃತ್ಯದಲ್ಲಿ ಸ್ವರ್ಗದ ಕೀಲಿಗೈಗಳಿವೆ ಎಂದು ಈ ಜನರಿಗೆ ಉಪದೇಶಿಸಿ ದಾರಿತಪ್ಪಿಸಿದ್ದಾರೆ."

"ಜಿಹಾದ್ ಮಾಡವುದು ಕಡ್ಡಾಯವಾಗಿದೆ ಎಂದು ಅವರು ತಮ್ಮ ಹೃದಯದಲ್ಲಿ ದೃಢನಂಬಿಕೆ ಹೊಂದಿದ್ದಾರೆ. ಅಂತಹ ನಂಬಿಕೆ ಹೊಂದಿದವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಗೆ ವಿರುದ್ಧವಾಗಿರುವ ನಂಬಿಕೆಯಲ್ಲಿ ಅವರು ಎಷ್ಟು ದೃಢಚಿತ್ತರಾಗಿರುವರೆಂದರೆ, ಅವರ ಈ ನಂಬಿಕೆಯನ್ನು ಹೊಂದದವರನ್ನು ದಜ್ಜಾಲ್ ಎಂದು ಕರೆದು ವಧಾರ್ಹನೆಂದು ವಿಧಿಸುತ್ತಾರೆ. ನಾನು ಇದೇ ಫತ್ವಕ್ಕೆ ಇತ್ತೀಚೆಗೆ ಗುರಿಯಾಗಿರುವೆನು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಮುಸ್ಲಿಮ್ ಮತಪಂಡಿತರ ಧಾರ್ಮಿಕ ತೀರ್ಮಗಳು (ಫತ್ವಾ) ಸಂಪರ್ಕ ಮಾಧ್ಯಮಗಳಲ್ಲಿ ಇಂದು ಹೆಚ್ಚಿನ ಪ್ರಚಾರ ಗಳಿಸುತ್ತಿವೆ.

ಅಂತಿಮ ಕಾಲ ಘಟ್ಟದ ದುರದೃಷ್ಟಶಾಲಿ ಮುಸ್ಲಿಮ್ ಮುಲ್ಲಾಗಳು ಇಸ್ಲಾಮಿನ ಪರಿಶುದ್ಧಿಯನ್ನು ಕಳಂಕಗೊಳಿಸುವರು; ತಮ್ಮ ಅಜ್ಞಾನ, ಅಜಾಗರೂಕತೆ ಮತ್ತು ಕೆಟ್ಟ ಸ್ವಭಾವ ಗುಣಗಳ ಮೂಲಕ ತಮ್ಮದೇ ಜನರ ಶತ್ರುಗಳಾಗಿ ವರ್ತಿಸುವರು ಎಂದು ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿರುವರು.

## ವಿದ್ರೋಹದ ಉದ್ಭವ ಸ್ಥಾನ

ಹಝ್‌ರತ್ ವಾಗ್ದತ್ತ ಮಸೀಹ್[ಅ] ಒಂದು ನೂರು ವರ್ಷಗಳ ಹಿಂದೆ ಮುಲ್ಲಾಗಳ ವಿದ್ರೋಹ ಕೃತ್ಯಗಳ ಬಗ್ಗೆ ಹೀಗೆ ಹೇಳಿರುವರು:

"ಸರಕಾರದ ವಿರುದ್ಧ ವಿದ್ರೋಹ ಮಾಡುವವರ ಉದ್ಭವ ಸ್ಥಾನ ಇವರೇ ಆಗಿದ್ದಾರೆ. ಜನ ಸಾಮಾನ್ಯರು ಅವರ ಹಿಡಿತಕ್ಕೆ ಗುರಿಯಾಗಿದ್ದಾರೆ. ಅವರ ಹೃದಯಗಳ ಕೀಲು ಇವರ ಕೈಗಳಲ್ಲಿವೆ. ಅವರು ತಾವು ಬಯಸುವ ದಿಶೆಗೆ ಜನರನ್ನು ತಿರುಗಿಸಬಲ್ಲರು. ಜನರು ತಕ್ಷಣ ಗಲಭೆ, ಗೊಂದಲ ನಡೆಸುವಂತೆ ಮಾಡಬಲ್ಲರು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಹಝ್ರತ್ ವಾಗ್ದತ್ತ ಮಸೀಹರ(ಅ) ಮಾತುಗಳು ಸ್ವತಃಸಿದ್ಧವಾಗಿವೆ. ಎಲ್ಲಾ ಸರಕಾರಗಳ (ಮುಸ್ಲಿಮ್ ಮತ್ತು ಮುಸ್ಲಿಮೇತರ) ವಿರುದ್ಧ ನಡೆಸಲಾಗುವ ವಿದ್ರೋಹ ಚಟುವಟಿಕೆಗಳಿಗೆ ಈ ಜನರೇ ಮೂಲ ಕಾರಣವಾಗಿದ್ದಾರೆ. ಅವರು ತಮ್ಮ ಬೆಂಕಿ ಕಾರುವ ಭಾಷಣಗಳಿಂದ ಜನರ ದ್ವೇಷಾಗ್ನಿಯನ್ನು ಕ್ಷಣಮಾತ್ರದಲ್ಲಿ ಪ್ರಜ್ವಲಿಸುತ್ತಾರೆ ಮತ್ತು ಸಾಮಾಜಿಕ ಶಾಂತಿಯನ್ನು ಭಸ್ಮ ಮಾಡುತ್ತಾರೆ.

## ಜಾಗತಿಕ ಭೀಕರವಾದ

ಹಝ್ರತ್ ವಾಗ್ದತ್ತ ಮಸಿಹ್(ಅ) ಜಾಗತಿಕ ಭೀಕರ ವಾದದ ಅಪಾಯಗಳನ್ನು ಸೂಚಿಸುತ್ತಾ ಹೀಗೆ ಬರೆದರು:

> "ಮುಸ್ಲಿಮರು ಮತ್ತು ವಿಶಿಷ್ಟವಾಗಿ ಮೌಲವಿಗಳು ಇಸ್ಲಾಮಿನ ಆದ್ಯ ಕಾಲೀನ ಘಟನೆಗಳನ್ನು ನಿರ್ಲಕ್ಷಿಸುತ್ತಾರೆ. ಅವರು ಭೂಲೋಕವನ್ನು ತಮ್ಮ ಶಿಕಾರಿಗೆ ಮಾತ್ರವಾಗುವ ಮೃಗದ ಹಾಗೆ ಭಾವಿಸುತ್ತಾರೆ. ಒಬ್ಬ ಬೇಟೆಗಾರ ಒಂದು ಕಾಡಿನಲ್ಲಿರುವ ಜಿಂಕೆಯನ್ನು ಪತ್ತೆಹಚ್ಚಿ ಬಹಳ ಜಾಗರೂಕತೆಯಿಂದ ಅದರ ಕಡೆಗೆ ಹೋಗಿ ಸಂದರ್ಭ ನೋಡಿ ಬಂದೂಕಿನಿಂದ ಗುಂಡು ಹಾರಿಸುವ ಹಾಗೆ ಬಹುತೇಕ ಮೌಲವಿಗಳು ವರ್ತಿಸುತ್ತಾರೆ. ಅವರು ಮಾನವೀಯ ಸಹಾನುಭೂತಿ ಎಂಬ ಪಾಠದಿಂದ ಒಂದು ಅಕ್ಷರವನ್ನಾದರೂ ಎಂದೂ ಕಲಿಯಲಿಲ್ಲ. ಒಬ್ಬ ನಿರಪರಾಧಿ ಮನುಷ್ಯನ ಮೇಲೆ ವಿನಾಕಾರಣ ಗುಂಡು ಹಾರಿಸಿ ಕೊಲ್ಲುವುದೇ ಇಸ್ಲಾಮ್ ಎಂದು ಅವರು ಗಣಿಸುತ್ತಾರೆ."
>
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

## ಸುಳ್ಳು ಹೇಳುವುದು, ಕಾಪಟ್ಯ ಮತ್ತು ದ್ವಿಮುಖ ಧೋರಣೆ ಮುಲ್ಲಾಗಳ ಹೆಗ್ಗುರುತು

ಮುಲ್ಲಾಗಳ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಬರೆದರು:

> "ಈ ಜನರು ಸರಕಾರದ ಅಧಿಕಾರಿಗಳಿಗೆ ವಂದಿಸಲು ಎಷ್ಟು ಬಾಗುತ್ತಾರೆಂದರೆ ಅವರು ಸಾಷ್ಟಾಂಗ ಪ್ರಣಾಮ ಮಾಡಲು ಸನ್ನದ್ಧರಾಗಿದ್ದಾರೆ ಎಂದು ತೋರಿಸುತ್ತಾರೆ. ಅವರು ತಮ್ಮದೇ ವರ್ಗದ ಜನರ ಮಧ್ಯೆ ಕುಳಿತಿರುವಾಗ ಪದೇ ಪದೇ ಒತ್ತಿ ಹೇಳುತ್ತಾರೆ: 'ಈ ದೇಶ ದಾರುಲ್ ಹರ್ಬ್ (ಯುದ್ಧ ಕ್ಷೇತ್ರ).' ಜಿಹಾದ್ ಮಾಡುವುದು ಕಡ್ಡಾಯ ಎಂದು ಅವರು ಹೃದಯಗಳಲ್ಲಿ ನಂಬುತ್ತಾರೆ. ಅವರ ಹಾಗೆ ನಂಬಿಕೆ ಹೊಂದದವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ."
>
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಹಝ್ರತ್ ವಾಗ್ದತ್ತ ಮಸೀಹ್(ಅ) ವಿವರಿಸಿದ ಲಕ್ಷಣಗಳನ್ನು ನೋಡಿ ಅಂತಹ ಜನರನ್ನು ಗುರುತಿಸುವುದು ಸುಲಭಕರವಾಗಿದೆ. ತಮಗೆ ಸ್ವಾರ್ಥ ಲಾಭಕ್ಕೋಸ್ಕರ ಅಥವಾ ತಾವು ಸರಕಾರದ ಹಿಡಿತಕ್ಕೊಳಗಾಗುವೆವೆಂಬ ಭಯದಿಂದ ಅಥವಾ ಒತ್ತಡಕ್ಕೆ ಪಾತ್ರರಾಗಿ ಈ ಮತಪಂಡಿತರು ಸರಕಾರದ ಅಧಿಕಾರಿಗಳ ಮುಂದೆ ಅಥವಾ ಅಂತರಾಷ್ಟ್ರೀಯ ಪತ್ರಿಕಾ ಮಾಧ್ಯಮದವರ ಮುಂದೆ, ತಾವು ರಕ್ತಹರಿಸುವ ಜಿಹಾದನ್ನು ಪ್ರತಿಪಾದಿಸುವುದಿಲ್ಲ ಅಥವಾ ಮತಾಂಧತೆಯನ್ನು ಪ್ರತಿಪಾದಿಸುವುದಿಲ್ಲ ಎಂದು ಹೇಳುತ್ತಾರೆ. ಆದರೆ ಪರದೆಯ ಹಿಂದೆ ಇಂತಹ ತತ್ವಗಳನ್ನು ತಮ್ಮ ಪುಸ್ತಕ, ಭಾಷಣ ಮತ್ತು ಮದ್ರಸಗಳ ಮೂಲಕ ಪ್ರಚಾರಮಾಡುತ್ತಾರೆ.

ಆದುದರಿಂದ ಇಂತಹ ಜನರು ತಮ್ಮ ತತ್ವಗಳನ್ನು ಬದಲಾಯಿಸುವ ತನಕ, ಅವರ ಪುಸ್ತಕಗಳು ಮತ್ತು ಮದ್ರಸಗಳು ನಿಜವಾದ ಇಸ್ಲಾಮೀ ಜಿಹಾದನ್ನು ಪ್ರತಿಪಾದಿಸುವ ತನಕ ಅವರ ಹೇಳಿಕೆಗಳನ್ನು ನಂಬಬಾರದು. ವಿದ್ರೋಹಕರ ತತ್ವಗಳು ಮತ್ತು ವಿಶ್ವಾಸಗಳು ಸಾತ್ವಿಕ ಕರ್ಮಗಳನ್ನು ಎಂದೂ ಹುಟ್ಟುಹಾಕಲಾರವು. ಆದುದರಿಂದ ತತ್ವಗಳ ಪರಿಷ್ಕರಣೆ, ವಿಶ್ವಾಸಾದರ್ಶಗಳ ಪರಿಷ್ಕಾರ ಮತ್ತು ಹೃದಯದ ಶುದ್ಧೀಕರಣವಿಲ್ಲದೆ ದೇಶದಲ್ಲಿ ಶಾಂತಿ ಸ್ಥಾಪನೆ ಮತ್ತು ಸುಧಾರಣೆ ಸಾಧ್ಯವಾಗಲಾರದು.

ನಾವು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇವೆ. ಎಲ್ಲಾ ಇಸ್ಲಾಮೀ ವಿದ್ವಾಂಸರು ಈ ವಿದ್ರೋಹಕರ ಅಭಿಪ್ರಾಯಗಳನ್ನು ಹೊಂದಿಲ್ಲ. ಆದರೆ ದುರದೃಷ್ಟಕರವಾಗಿ ಬಹುತೇಕ ವಿದ್ವಾಂಸರು ವಿದ್ರೋಹಕರ ನಂಬಿಕೆಗಳನ್ನು ಹೊಂದಿದ್ದಾರೆ. ಜಿಹಾದೀ ಮುಲ್ಲಾಗಳ ರಕ್ತಪಿಪಾಸು ನಿಲುವನ್ನು ಎದುರಿಸುವ ಮತ್ತು ಜಿಹಾದಿನ ನಿಜವಾದ ತತ್ವವನ್ನು ಪ್ರತಿಪಾದಿಸುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ.

## ಸರಕಾರದ ಗೂಢ ಶತ್ರುಗಳು

ಹಝ್ರಸ್ ವಾಗ್ದತ್ತ ಮಸೀಹ್(ಅ) ಪುನಃ ಹೀಗೆ ಹೇಳಿದರು:

> "ನಾನು ಸತ್ಯವಾಗಿ ಹೇಳುತ್ತೇನೆ. ಈ ಜನರು ಸರಕಾರದ ಗೂಢ ಶತ್ರುಗಳಾಗಿದ್ದಾರೆ. ಅವರು ಅಲ್ಲಾಹನ ದೃಷ್ಟಿಯಲ್ಲಿ ಅಪರಾಧಿಗಳೂ ಆಜ್ಞೆಗಳ ಉಲ್ಲಂಘಕರೂ ಆಗಿದ್ದಾರೆ."
>
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ದುರದೃಷ್ಟಕರವಾಗಿ, ಸರಕಾರದ ಅಧಿಕಾರಿಗಳು ಹಝ್ರತ್ ವಾಗ್ದತ್ತ ಮಸೀಹರ(ಅ) ಮಾತುಗಳನ್ನು ಗಮನಿಸಲಿಲ್ಲ ಮತ್ತು ಗೂಢಶತ್ರುಗಳನ್ನು ಗುರುತಿಸಲಿಲ್ಲ. ಇದರ ಪರಿಣಾಮವಾಗಿ ಅವರು ಶಕ್ತಿಗಳಿಸುತ್ತಾ ಹೋದರು. ಈಗ ಸಹ ಶಕ್ತಿಗಳಿಸುತ್ತಾ ಇರುತ್ತಾರೆ. ಕೆಲವು ದೇಶಗಳ ಸರಕಾರಗಳು ವಿದ್ರೋಹಕರ ಚಟುವಟಿಕೆಗಳನ್ನು ಉತ್ತೇಜಿಸುವವರೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಅವರನ್ನು ತಮ್ಮ ಸ್ವಾರ್ಥ ಮತ್ತು ನಿರ್ದಿಷ್ಟ ರಾಜಕೀಯ ಲಾಭಕ್ಕೋಸ್ಕರ ಬಳಸುವುದರಿಂದ ಅನ್ಯಾಯ ನಡೆಯುತ್ತದೆ. ಈ ಮುಲ್ಲಾಗಳನ್ನು ಈ ಸರಕಾರಗಳು ಬೆಂಬಲಿಸುತ್ತವೆ. ಅವರ ವಿದ್ರೋಹಕರ ತಂತ್ರಗಳಿಗೆ ಸಹಾಯ ನೀಡುತ್ತವೆ. ಹಾಗೆ ಅವರ ಅಪಾಯಕಾರಿ ಶಕ್ತಿ ಸಾಮರ್ಥ್ಯಗಳು ವರ್ಧಿಸುವಂತೆ ಮಾಡುತ್ತವೆ. ಇದರ ಫಲಸ್ವರೂಪವಾಗಿ ನಿರಪರಾಧಿ ಜನರ ರಕ್ತ ಚೆಲ್ಲುವಿಕೆಯ ಆಟಗಳನ್ನು ಈ ಮುಲ್ಲಾಗಳು ಆಡಿದ್ದಾರೆ ಮತ್ತು ಬಹಿರಂಗವಾಗಿ ಸಮಾಜದಲ್ಲಿ ಕೊಲೆಕೊಲ್ಲುವಿಕೆಗಳನ್ನು ಜಾರಿಗೊಳಿಸಿದ್ದಾರೆ. ಈ ಹಂತಕರು ತಮ್ಮ ಸ್ವಂತ ಸಹಾಯಕರ ಕಡೆಗೆ ತಿರುಗಿದಾಗ ಅವರ ಕಣ್ಣುಗಳು ತೆರೆದುವು. ಆಗ ಈ ಹಂತಕರನ್ನು ಸಮಾಜಕ್ಕೆ ಅಪಾಯಕಾರಿಗಳಾದ ಕೊಲೆಗಾರರೆಂದು ಘೋಷಿಸಿ ಅವರನ್ನು ಸೋಲಿಸಿ ಕೊಲ್ಲಲು ನಿರ್ಧರಿಸಿದರು.

## ಯುರೋಪಿಯನ್ ಮುಲ್ಲಾಗಳು (ಕ್ರೈಸ್ತ ಪಾದರಿಗಳು) ಸಹ ರಕ್ತಪಾತಕ್ಕೆ ಹೊಣೆಗಾರರು

ವಾಗ್ದತ್ತ ಮಸೀಹ್(ಅ) ತನ್ನ "ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್" ಮತ್ತು ಅದರ ಜೊತೆಗಿರುವ ಪುರವಣಿ "ಝುಮೀಮ

ರಿಸಾಲಯೆ ಜಿಹಾದ್"ನಲ್ಲಿ ಭೀಕರ ಕೃತ್ಯಗಳಿಗೆ ಯುರೋಪಿಯನ್ ಮುಲ್ಲಾಗಳು (ಕ್ರೈಸ್ತ ಪಾದರಿಗಳು) ಮತ್ತು ಅಜ್ಞಾನಿ ಮೌಲವಿಗಳು ಹೊಣೆಗಾರ ರಾಗಿದ್ದಾರೆ ಎಂದು ಹೇಳಿದ್ದಾರೆ. ಒಂದು ನೂರು ವರ್ಷಗಳ ಹಿಂದೆ ಹೇಳಿದ ಆ ಮಾತುಗಳು ಇಂದು ಸಹ ಅನ್ವಯಿಸುತ್ತವೆ. ಅವರು ಹೀಗೆ ಹೇಳಿದರು:

> "ಈ ಸಂದರ್ಭದಲ್ಲಿ ನಾನು ಬಹಳ ಖೇದದಿಂದ ಹೀಗೆ ಬರೆಯಲು ಇಚ್ಛಿಸುತ್ತೇನೆ: ಅಜ್ಞಾನಿ ಮೌಲವಿಗಳು ಜಿಹಾದ್ ಎಂದರೇನೆಂಬುದನ್ನು ಮರೆಮಾಡಿ ಲೂಟಿ ಮತ್ತು ಹತ್ಯೆಯನ್ನು ಜಿಹಾದ್ ಎಂದು ಜನರಿಗೆ ಕಲಿಸಿದ ಹಾಗೆ ಕ್ರೈಸ್ತ ಪಾದರಿಗಳು ಸಹ ಅಂತಹ ಕೆಲಸವನ್ನೇ ಮಾಡಿದರು. ಅವರು ಸಾವಿರಾರು ಪುಸ್ತಕಗಳನ್ನೂ ಕರಪತ್ರಗಳನ್ನೂ ಉರ್ದು, ಪುಶ್ತು ಮೊದಲಾದ ಭಾಷೆಗಳಲ್ಲಿ ಪ್ರಕಟಿಸಿ ಹಿಂದೂಸ್ತಾನದಲ್ಲಿ – ಪಂಜಾಬ್ ಮತ್ತು ಗಡಿನಾಡುಗಳಲ್ಲಿ ಹಂಚಿದರು. ಇಸ್ಲಾಮ್ ಖಡ್ಗದ ಮೂಲಕ ಹರಡಿತೆಂದೂ ಖಡ್ಗ ಚಲಾಯಿಸುವುದರ ಹೆಸರು ಇಸ್ಲಾಮ್ ಎಂದೂ ಅವರು ಘೋಷಿಸಿದರು. ಜನಸಾಮಾನ್ಯರು, ಜಿಹಾದ್ ಕುರಿತು ನೀಡಲಾದ ಎರಡು ಸಾಕ್ಷ್ಯಗಳಿಂದ; ಎಂದರೆ ಮೌಲವಿಗಳು ನೀಡಿದ ಸಾಕ್ಷ್ಯದಿಂದ ಮತ್ತು ಪಾದರಿಗಳು ನೀಡಿದ ಸಾಕ್ಷ್ಯದಿಂದ ತಮ್ಮ ಮೃಗೀಯ ಉತ್ಸಾಹದಲ್ಲಿ ವರ್ಧನೆಯನ್ನು ಅನುಭವಿಸಿದರು."
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಅನ್ಯಾಯಕರವಾದ ಹತ್ಯೆಗೆ ಕಾರಣ ಜಿಹಾದ್ ಬಗ್ಗೆ ಇರುವ ತಪ್ಪು ಕಲ್ಪನೆ ಎಂದು ಹಝ್ರತ್ ವಾಗ್ದತ್ತ ಮಸೀಹ್(ಅ) ಬರೆದಿರುವರು. ಅವರು ಹೀಗೆ ಹೇಳುತ್ತಾರೆ:

> "ನನ್ನ ದೃಷ್ಟಿಯಲ್ಲಿ ವಾಸ್ತವಿಕವಾದ ಮತ್ತು ದೃಢೀಕರಿಸಲಾದ ವಿಷಯವೇನೆಂದರೆ, ಗಡಿನಾಡಿನಲ್ಲಿರುವ ಅಫ್‌ಘಾನ್ ಜನರಲ್ಲಿ ಕಂಡುಬರುವ ಮೃಗೀಯ ನಡೆವಳಿಕೆಯ ಕಾರಣದಿಂದ ಪ್ರತಿದಿನ ಯಾರಾದರೊಬ್ಬ ನಿರಪರಾಧಿಯನ್ನು ಕೊಲ್ಲಲಾಗುತ್ತಿದೆ. ಇದಕ್ಕೆ ಎರಡು ಕಾರಣಗಳಿವೆ:
>
> 1. ಮೌಲವಿಗಳ ನಂಬಿಕೆಯೇನೆಂದರೆ, ಅನ್ಯಧರ್ಮದ ಜನರನ್ನು ಮತ್ತು ವಿಶಿಷ್ಟವಾಗಿ ಕ್ರೈಸ್ತರನ್ನು ಕೊಲ್ಲುವುದರಿಂದ ಬೃಹತ್ತಾದ ಪುಣ್ಯವು ಲಭಿಸುವುದು. ನಮಾಝ್‌ನಿಂದಾಗಲೀ ಹಜ್ಜ್‌ನಿಂದಾಗಲೀ ಝಕಾತ್‌ನಿಂದಾಗಲೀ ಅಥವಾ ಬೇರೆ ಯಾವುದೇ ಸತ್ಕರ್ಮದಿಂದ ದೊರೆಯಲಾರದ ಸ್ವರ್ಗದ ಭವ್ಯ ಅನುಗ್ರಹಗಳು ಈ ಕೃತ್ಯದಿಂದ ದೊರಕುವುವು. ಮೌಲವಿಗಳು ಸಾಮಾನ್ಯ ಜನರ ಕಿವಿಗಳಿಗೆ ಇಂತಹ ಉಪದೇಶಗಳನ್ನು ರಹಸ್ಯವಾಗಿ ತಲಪಿಸುತ್ತಾರೆ ಎಂದು ನನಗೆ ಚೆನ್ನಾಗಿ ತಿಳಿದಿದೆ. ರಾತ್ರಿ ಹಗಲು ಇಂತಹ ಉಪದೇಶಗಳನ್ನು ಆಲಿಸುವ ಜನರು ಹೇಗಿದ್ದಾರೆಂದರೆ ಅವರ ಮತ್ತು ಮೃಗಗಳ ಮಧ್ಯೆ ಬಹಳ ಕಡಿಮೆ ವ್ಯತ್ಯಾಸವಿರುತ್ತದೆ. ಅಂತಹ ಜನರ ಹೃದಯಗಳ ಮೇಲೆ ಮೌಲವಿಗಳ ಪ್ರವಚನ ಬಹಳ ಪ್ರಭಾವ ಬೀರುತ್ತದೆ. ಅವರು ಕ್ರೂರಮೃಗಗಳ ಹಾಗೆ ಆಗುತ್ತಾರೆ. ಅವರಲ್ಲಿ ಒಂದಿಷ್ಟು ದಯೆಯು ಕೂಡ ಬಾಕಿಯಾಗಿ ಉಳಿಯವುದಿಲ್ಲ. ಅವರು ಎಷ್ಟು ನಿರ್ದಯವಾಗಿ ರಕ್ತಪಾತ ನಡೆಸುತ್ತಾರೆ ಎಂದರೆ ನಮ್ಮ ಶರೀರ ನಡುಗುತ್ತವೆ. ಗಡಿನಾಡು ಮತ್ತು ಅಫ್‌ಘಾನಿಸ್ಥಾನದಲ್ಲಿ ಇಂತಹ ಮೌಲವಿಗಳು ಧಾರಾಳವಾಗಿ ಇದ್ದಾರೆ. ಅವರು ಅಂತಹ ಪ್ರವಚನ ನೀಡುತ್ತಾರೆ. ನನ್ನ ಅಭಿಪ್ರಾಯ ಪ್ರಕಾರ ಪಂಜಾಬ್ ಮತ್ತು ಹಿಂದೂಸ್ತಾನದ ಇತರ ಪ್ರದೇಶಗಳಲ್ಲೂ ಇಂತಹ ಮೌಲವಿಗಳು ಇಲ್ಲದೆ ಇಲ್ಲ. ಈ ದೇಶದ ಎಲ್ಲಾ ಮೌಲವಿಗಳು ಇಂತಹ ಯೋಚನೆಗಳಿಂದ ಮುಕ್ತರಾಗಿದ್ದಾರೆಂದು ಭಾವಿಸುವುದಾದರೆ ಈ ನಿಲುವಿನ ಬಗ್ಗೆ ಪುನರಾವಲೋಕನ ಆವಶ್ಯಕವಾಗಿದೆ. ನನ್ನ ಅಭಿಪ್ರಾಯ ಪ್ರಕಾರ ಬಹುತೇಕ ಮಸ್‌ಜಿದ್‌ಗಳಲ್ಲಿ ಇರುವ ತಿಳಿಗೇಡಿಗಳೂ ಕೋಪಿಷ್ಠರೂ ಆಗಿರುವ ಮುಲ್ಲಾಗಳು ಹೇಗಿದ್ದಾರೆಂದರೆ ಅವರು ಇಂತಹ ಕೊಳಕು ಯೋಚನೆಗಳಿಂದ ಮುಕ್ತರಾಗಿಲ್ಲ. ಇಂತಹ ಜನರು ಪವಿತ್ರ ಖುರ್‌ಆನಿನ ಮಾರ್ಗದರ್ಶನದ ಪ್ರಕಾರ ವರ್ತಿಸುವುದಾದರೆ ನಾನು ಅವರನ್ನು ಕ್ಷಮಾರ್ಹರೆಂದು ಗಣಿಸುತ್ತಿದ್ದೆನು. ಏಕೆಂದರೆ ಮನುಷ್ಯನು ವಿಶ್ವಾಸಕ್ಕೆ ಸಂಬಂಧಿಸಿದ ವಿಷಯದಲ್ಲಿ ಕ್ಷಮಾರ್ಹನಾಗುತ್ತಾನೆ. ಆದರೆ ನಾನು ಸತ್ಯವಾಗಿ ಹೇಳುತ್ತೇನೆ. ಈ ಜನರು ಸರಕಾರದ ಉಪಕಾರಗಳನ್ನು ಮರೆತು ಈ ನ್ಯಾಯನಿಷ್ಠ ಸರಕಾರದ ಗುಪ್ತ ಶತ್ರುಗಳು ಆಗಿರುವ ಹಾಗೆ ಈ ಜನರು ಅಲ್ಲಾಹನ ದೃಷ್ಟಿಯಲ್ಲಿ ಅಪರಾಧಿಗಳಾಗಿರುವ ಆಜ್ಞಾಲಂಘಕರಾಗಿದ್ದಾರೆ. ನಿರಪರಾಧಿಗಳನ್ನು ಈ ರೀತಿ ಹತ್ಯೆ ಮಾಡಬೇಕೆಂದು ಪವಿತ್ರ ಖುರ್‌ಆನ್ ಖಂಡಿತವಾಗಿಯೂ ಕಲಿಸುವುದಿಲ್ಲವೆಂದು ನಾನು ಸವಿಸ್ತಾರವಾಗಿ ಪ್ರತಿಪಾದಿಸಿದ್ದೇನೆ. ಯಾರಾದರೂ ಅದನ್ನು (ರಕ್ತಪಾತದ ಜಿಹಾದನ್ನು) ಸರಿ ಎಂದು ಭಾವಿಸುವುದಾದರೆ ಅವನು ಇಸ್ಲಾಮನ್ನು ತ್ಯಜಿಸಿದವನು ಆಗುತ್ತಾನೆ.
>
> 2. ಗಾಝಿ ಪದವಿ ಗಳಿಸಲು ಮಾಡಲಾಗುವ ಈ ಅಪರಾಧಕರವಾದ ಹತ್ಯೆಗಳಿಗೆ ಎರಡನೆಯ ಕಾರಣ ನನ್ನ ಅಭಿಪ್ರಾಯದ ಪ್ರಕಾರ, ಕ್ರೈಸ್ತ ಪಾದರಿಗಳು ಆಗಿದ್ದಾರೆ. ಇಸ್ಲಾಮ್ ಧರ್ಮದಲ್ಲಿ ಜಿಹಾದ್ ಕಡ್ಡಾಯವಾಗಿದೆ ಎಂದು ಅವರು ಮಿತಿ ಮೀರಿ ಪ್ರಚಾರ ಮಾಡುತ್ತಿದ್ದಾರೆ. ಅನ್ಯ ಮತದವರನ್ನು ಕೊಲ್ಲುವುದು ಮುಸ್ಲಿಮರ ಧರ್ಮ ಪ್ರಕಾರ ಪುಣ್ಯದಾಯಕವಾಗಿದೆ ಎಂದು ಅವರು ಪ್ರಕಟಿಸುತ್ತಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ, ಗಡಿನಾಡುಗಳ ಜನರಿಗೆ ಜಿಹಾದ್ ಬಗ್ಗೆ ತಿಳಿಯದೆ ಇದ್ದಾಗ ಕ್ರೈಸ್ತ ಪಾದರಿಗಳು ಅದನ್ನು ಅವರ ಮನಸ್ಸಿನಲ್ಲಿ ಮೂಡುವಂತೆ ಮಾಡಿದರು. ನನ್ನ ಬಳಿ ಈ ವಾದಕ್ಕೆ ಇರುವ ಸಾಕ್ಷ್ಯಾಧಾರವೇನೆಂದರೆ, ಪಾದರಿಗಳು ಗಡಿನಾಡು ಪ್ರದೇಶದಲ್ಲಿ ತಮ್ಮ ಪತ್ರಿಕೆಗಳು ಮತ್ತು ಪುಸ್ತಕಗಳ ಮೂಲಕ ಜಿಹಾದ್ ಬಗ್ಗೆ ಪ್ರಚಾರ ಮಾಡುವ ಮೊದಲು ಇಂತಹ ಹತ್ಯೆಯ ಘಟನೆಗಳು ಅಲ್ಲಿ ಬಹಳ ಕಡಿಮೆ ಸಂಭವಿಸುತ್ತಿದ್ದುವು. ಅಥವಾ

ಸಂಭವಿಸುತ್ತಲೇ ಇರಲಿಲ್ಲ ಎಂದು ಹೇಳಬಹುದು. ಸಿಖ್ಖರ ರಾಜ್ಯಭಾರ ಕೊನೆಗೊಂಡು ಅವರ ಸ್ಥಾನದಲ್ಲಿ ಬ್ರಿಟಿಷರು ಬಂದಾಗ ಸಾಮಾನ್ಯ ಮುಸ್ಲಿಮರಿಗೆ ಈ ಬದಲಾವಣೆಯಿಂದ ಬಹಳ ಸಂತೋಷವಾಗಿತ್ತು. ಗಡಿನಾಡಿನ ಜನರು ಸಹ ಸಂತೋಷಗೊಂಡಿದ್ದರು. 1849ರಲ್ಲಿ ಫೆಂಡರ್ ಎಂಬ ಪಾದರಿ 'ಮೀಝಾನುಲ್ ಹಖ್' ಎಂಬ ಪುಸ್ತಕವನ್ನು ಬರೆದು ಪಂಜಾಬು, ಹಿಂದೂಸ್ತಾನದ ಇತರ ಪ್ರದೇಶಗಳಲ್ಲಿ ಮತ್ತು ಗಡಿ ನಾಡುಗಳಲ್ಲಿ ಪ್ರಕಟಿಸಿದನು. ಇಸ್ಲಾಮ್ ಮತ್ತು ಪೈಗಂಬರರ ವಿರುದ್ಧ ನಿಂದೆಯಿಂದ ಭರಿತ ಪ್ರಸ್ತಾಪಗಳನ್ನು ಮಾಡಿ ಇಸ್ಲಾಮ್ ಅನ್ಯ ಮತಸ್ಥರನ್ನು ಕೊಲ್ಲುವುದು ಪುಣ್ಯದಾಯಕವೆಂದು ಗಣಿಸುತ್ತದೆ ಎಂದು ಲಕ್ಷಾಂತರ ಜನರ ಮಧ್ಯೆ ಪ್ರಚಾರ ಮಾಡಿದನು. ಇಂತಹ ಮಾತುಗಳನ್ನು ಆಲಿಸಿದ ಗಡಿನಾಡಿನ ಮೃಗೀಯ ಸ್ವಭಾವದ ಜನರಿಗೆ ತಮ್ಮ ಸ್ವಂತ ಧರ್ಮದ ಬಗ್ಗೆ ತಿಳುವಳಿಕೆ ಇರಲಿಲ್ಲ. ಅವರು ಎಚ್ಚರಗೊಂಡು ಅನ್ಯ ಮತಸ್ಥರನ್ನು ಹತ್ಯೆ ಮಾಡುವುದು ಬಹಳ ಪುಣ್ಯದಾಯಕವಾಗಿದೆ ಎಂದು ದೃಢವಾಗಿ ನಂಬಿದರು. ನಾನು ಬಹಳ ಚಿಂತಿಸಿ ಹೀಗೆ ನಿರ್ಧರಿಸಿದೆನು: ಗಡಿನಾಡುಗಳಲ್ಲಿ ಸಂಭವಿಸುವ ಹತ್ಯಾಕಾಂಡಗಳು ಮತ್ತು ಅಲ್ಲಿನ ಜನರಲ್ಲಿರುವ ದೋಷಭರಿತ ನಿಲುವುಗಳಿಗೆ ಕಾರಣ ಪಾದರಿಗಳ ಗ್ರಂಥಗಳಾಗಿವೆ. ಅವರು ಆ ಗ್ರಂಥಗಳಲ್ಲಿ ಕಟು ಶಬ್ದಗಳನ್ನು ಬಳಸಿ ಜಿಹಾದ್ ಬಗ್ಗೆ ಪ್ರತಿಪಾದಿಸುತ್ತಾರೆ... ಅನಂತರ ಪಾದರಿ ಇಮಾದುದ್ದೀನ್ ಅಮೃತ್‌ಸರಿ ಮತ್ತು ಇತರ ಕೆಲವು ಪಾದರಿಗಳ ಕೆಟ್ಟ ಮತ್ತು ಕೊಳಕು ಲೇಖನಗಳು ದೇಶದ ಜನರ ಆಂತರಿಕ ಪ್ರೀತಿ ಮತ್ತು ಸಮಾಧಾನಕ್ಕೆ ಬಹಳ ಹಾನಿಕರವಾಯಿತು. ಇದೇ ರೀತಿ ನಾವು ಸವಿಸ್ತಾರವಾಗಿ ಪ್ರಸ್ತಾಪಿಸಲು ಬಯಸದ ಇತರ ಪಾದರಿಗಳ ಗ್ರಂಥಗಳು ಜನರ ಹೃದಯಗಳಲ್ಲಿ ದ್ವೇಷದ ಬೀಜ ಬಿತ್ತಲು ಸಹಕಾರಿಗಳಾದುವು...."

(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಹಝ್‌ರತ್ ವಾಗ್ದತ್ತ ಮಸೀಹ್(ಅ) ಪುನಃ ಬರೆಯುತ್ತಾರೆ:

"ಇಸ್ಲಾಮಿನ ಮುಲ್ಲಾಗಳ ಕುರಿತು ನಾವು ಖೇದದಿಂದ ಹೇಳಬಯಸುವುದೇನೆಂದರೆ, ಅವರು ಜಿಹಾದಿಗೆ ತಪ್ಪು ಅರ್ಥ ನೀಡಿ ಗಡಿನಾಡು ಪ್ರದೇಶದ ಜನರು ತಮ್ಮ ಖಡ್ಗದ ಮೂಲಕ ಸರಕಾರಿ ಅಧಿಕಾರಿಗಳ ಹತ್ಯೆಗೈಯ್ಯಲು ಕಲಿಸಿಕೊಟ್ಟರು. ಅದರೊಂದಿಗೆ ಯುರೋಪಿನ ಮುಲ್ಲಾಗಳಾದ ಪಾದರಿಗಳ ಕೃತ್ಯಗಳ ಬಗ್ಗೆ ಸಹ ನಮಗೆ ಖೇದವಿದೆ. ಅವರು ಅಸತ್ಯಭರಿತ, ಕಟು ಬರಹಗಳ ಮೂಲಕ ತಿಳಿಗೇಡಿ ಜನರನ್ನು ಉತ್ತೇಜಿಸಿದರು. ಜಿಹಾದ್ ಬಗ್ಗೆ ಸಾವಿರಾರು ಸಾರಿ ಪ್ರಸ್ತಾಪಿಸಿ ಸಂಸ್ಕಾರ ಶೂನ್ಯರಾದ ಮುಸ್ಲಿಮರು ಸ್ವರ್ಗವು ಬೇಗನೆ ಲಭಿಸಲು ತಮ್ಮ ಧರ್ಮ ಒದಗಿಸುವ ಒಂದು ಮಾರ್ಗವಾಗಿದೆ ಜಿಹಾದ್ ಎಂದು ಹೃತ್ಪೂರ್ವಕವಾಗಿ ನಂಬುವಂತೆ ಮಾಡಿದರು."

"ಜನರನ್ನು ಜಿಹಾದ್‌ಗೆ ಪ್ರೇರೇಪಿಸುವುದರಲ್ಲಿ ಮೌಲವಿಗಳು ಹೆಚ್ಚು ಪಾತ್ರವಹಿಸಿದ್ದಾರೆಂದು ನಾವು ಹೇಳುತ್ತೇವೆ. ಹಾಗಿದ್ದರೂ ನ್ಯಾಯಬದ್ಧತೆ ನಮ್ಮನ್ನು ಹೇಳಲು ನಿರ್ಬಂಧಿಸುವುದೇನೆಂದರೆ, ಈ ಹತ್ಯಾಕಾಂಡಗಳಿಗೆ ಪಾದರಿಗಳು ಪ್ರಕಟಿಸಿದ ಲೇಖನಗಳು ಸಹ ಕಾರಣಗಳಾಗಿದೆ. ಅವುಗಳಿಂದ ಮುಸ್ಲಿಮರು ಪ್ರತಿದಿನ ಅಪಮಾನಿಸಲ್ಪಡುತ್ತಿದ್ದಾರೆ. ದುಃಖಕರವಾದ ವಿಷಯವೇನೆಂದರೆ, ಕೆಲವು ಅಜ್ಞಾನಿಗಳು ಒಂದು ಕೆಟ್ಟ ಕೆಲಸಮಾಡಿ ದೂರ ಸರಿಯುತ್ತಾರೆ. ಅದರಿಂದ ಉಂಟಾಗುವ ಹಾನಿಯನ್ನು ಪರಿಹರಿಸುವ ಜವಾಬ್ದಾರಿ ಸರಕಾರದ್ದು ಆಗುತ್ತದೆ."

(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಸಂಕ್ಷಿಪ್ತವಾಗಿ ಹೇಳುವುದಾದರೆ, ವಾಗ್ದತ್ತ ಮಸೀಹ್(ಅ) ಹೀಗೆ ಸೂಚಿಸುತ್ತಾರೆ: ಮುಸ್ಲಿಮ್ ಮತಪಂಡಿತರು ಹತ್ಯಾಕಾಂಡ, ಭೀಕರವಾದ ಮತ್ತು ಶಾಂತಿಭಂಗವನ್ನು ಉತ್ತೇಜಿಸಿದ ಹಾಗೆಯೇ ಕ್ರೈಸ್ತ ಧರ್ಮ ಪ್ರಚಾರಕರೂ ಈ ವಿಷಯದಲ್ಲಿ ಸಹಭಾಗಿಗಳಾಗಿದ್ದಾರೆ.

ಈ ಆಕ್ಷೇಪವೂ ಎಲ್ಲಾ ಕ್ರೈಸ್ತರಿಗೂ ಅವರ ಧಾರ್ಮಿಕ ನಾಯಕರಿಗೂ ಅನ್ವಯಿಸುವುದಿಲ್ಲವೆಂದು ವಾಚಕರು ಗಮನಿಸಬೇಕು. ವಾಗ್ದತ್ತ ಮಸೀಹ್(ಅ) ತನ್ನ ಕಾಲದ ಬ್ರಿಟಿಷ್ ಸರಕಾರದ ಬಗ್ಗೆ ಮೆಚ್ಚುಗೆ ಸೂಚಿಸಿ ಬರೆದಿದ್ದಾರೆ. ವಾಗ್ದತ್ತ ಮಸೀಹರ ವಿಮರ್ಶೆಗಳು ಇಸ್ಲಾಮಿನ ಸತ್ಯ ಸಂದೇಶವನ್ನು ಬಿಗಡಾಯಿಸಲು ಕಾರ್ಯನಿರತರಾಗಿರುವ ಅಲ್ಪ ಸಂಖ್ಯೆಯಲ್ಲಿರುವ ಧಾರ್ಮಿಕ ನಾಯಕರಿಗೆ ಹಿಂದೆ ಅನ್ವಯಿಸಿದ ಹಾಗೆ ಇಂದು ಸಹ ಅನ್ವಯಿಸುತ್ತದೆ. ಅವರು ಹೀಗೆ ಹೇಳಿದರು:

"ಈ ಕಾಲದ ಮುಸ್ಲಿಮರ ಬಗ್ಗೆಯೂ ದುಃಖ ಉಂಟಾಗುತ್ತದೆ. ಅವರು ಇಸ್ಲಾಮೀ ಶರೀಅತಿನ ದ್ವಿತೀಯ ಭಾಗವನ್ನು ಕಳೆದುಕೊಂಡಿರುವರು. ಮಾನವರ ಬಗ್ಗೆ ಹಿತಾಕಾಂಕ್ಷೆ, ಪ್ರೀತಿ ಮತ್ತು ಸೇವೆ ಅದರಲ್ಲಿ ಸೇರಿವೆ. ಅವರು ಏಕದೇವ ವಿಶ್ವಾಸವನ್ನು ಅವಲಂಬಿಸುವುದಾಗಿ ವಾದಿಸುತ್ತಾರಾದರೂ ನಾಚಿಕೆ ಉಂಟುಮಾಡುವಂತಹ ಅನಾಗರಿಕ ಸ್ವಭಾವ ಗುಣಗಳನ್ನು ಹೊಂದಿರುತ್ತಾರೆ..... ಕೆಲವರ ವರ್ತನೆಗಳಿಂದ ಅವರ ಅನಾಗರಿಕ ಭಾವೋದ್ವೇಗಗಳು ಉತ್ತೇಜಿಸಲ್ಪಡುತ್ತವೆ. ಕೆಲವು ತಿಳಿಗೇಡಿ ಪಾದರಿಗಳ ಲೇಖನಗಳು ವಿಷಕರವಾದ ಪ್ರಭಾವ ಬೀರುತ್ತವೆ. ಅವು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಅತ್ಯಂತ ಕೀಳು ಮಟ್ಟದ ಟೀಕೆಗಳಿಂದ ತುಂಬಿರುತ್ತವೆ. ಈ ಪುಸ್ತಕಗಳು ಹೇಗಿವೆ ಎಂದರೆ ಮುಸ್ಲಿಮರಲ್ಲಿ ಯಾರಾದರೂ ಅವುಗಳನ್ನು ಓದುವುದಾದರೆ ಸಹನೆ ಮತ್ತು ಸಹಿಷ್ಣುತೆಯನ್ನು ಹೊಂದಿರದಿದ್ದರೆ ತಾನಾಗಿಯೇ ಉತ್ತೇಜಿಸಲ್ಪಡುವನು. ಈ ಗ್ರಂಥಗಳಲ್ಲಿ ಜ್ಞಾನಸಂಬಂಧವಾದ ಉಲ್ಲೇಖಗಳಿಗಿಂತ ಹೆಚ್ಚಾಗಿ ಕಟುಭಾಷೆಯ ಪ್ರಯೋಗಗಳಿವೆ ಮತ್ತು ಸಾಮಾನ್ಯ ಮುಸ್ಲಿಮರು ಅವುಗಳನ್ನು ಸಹಿಸಲಾರರು....

"ಈಗ ಸಹ ಪಾದರಿಗಳು ಪ್ರತಿದಿನ ಎಂತಹ ಬರಹಗಳನ್ನು ಪ್ರಕಟಿಸುತ್ತಾರೆಂದರೆ, ತೀವ್ರ ಉದ್ವೇಗ

ಭರಿತ ಮುಸ್ಲಿಮರು ಅವುಗಳನ್ನು ಸಹಿಸಲಾರರು. ಪಾದರಿಗಳು ಮಾಡುವುದು ಭಯಾನಕ ವರ್ತನೆಯಾಗಿದೆ. ಅವರು ಮುಸ್ಲಿಮರ ವಿರುದ್ಧ ಸುಳ್ಳು ಆರೋಪಮಾಡುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ ಎಲ್ಲಾ ಕಾಲಗಳಿಗೆ ಅನ್ವಯಿಸುವ ಜಿಹಾದ್ ಬಗ್ಗೆ ಆಜ್ಞೆ ಇದೆ ಎಂದು ಹೇಳುತ್ತಾರೆ. ಅವರು ಮುಸ್ಲಿಮರಿಗೆ ಜಿಹಾದ್ ಬಗ್ಗೆ ನೆನಪಿಸಿ ಅನಂತರ ಕಟು ಶಬ್ದಗಳನ್ನು ಪ್ರಯೋಗಿಸಿ ಮುಸ್ಲಿಮರನ್ನು ಉತ್ತೇಜಿಸುತ್ತಾರೆ. ಈ ಜನರು ಎಂತಹ ಸರಳ ಮನಸ್ಸಿನವರೆಂದು ತಿಳಿಯದು. ಅವರು ಅವಲಂಬಿಸುವ ಎರಡು ಮಾರ್ಗಗಳಿಂದ ಭಯಾನಕ ಪರಿಣಾಮ ಉಂಟಾಗುತ್ತದೆ ಎಂದು ಯೋಚಿಸುವುದಿಲ್ಲ.... ಸತ್ಯವಾದ ಮಾರ್ಗವನ್ನು ಅವಲಂಬಿಸದ ಪಾದರಿಗಳ ಬಗ್ಗೆ ನಮಗೆ ದೂರು ನೀಡಲಿಕ್ಕಿರುವಾಗ ನಾವು ಮೌಲವಿಗಳ ಬಗ್ಗೆ ದೂರುವುದಾದರೂ ಹೇಗೆ?

(ಝುಮೀಮ ಲಿಸಾಲ ಜಿಹಾದ್)

ಹಝ್‌ರತ್ ವಾಗ್ದತ್ತ ಮಸೀಹರ ವಿಮರ್ಶೆ ಇಂದಿನ ಕಾಲಕ್ಕೂ ಅನ್ವಯಿಸುತ್ತದೆ. ಇಸ್ಲಾಮನ್ನು ಕ್ರೂರ ಧರ್ಮವೆಂದು ಹೇಳಿ ಅದು ಬಲಾತ್ಕಾರವನ್ನೂ, ಭೀಕರ ಕೃತ್ಯಗಳನ್ನೂ ಅನುಮತಿಸುತ್ತದೆ ಎಂದು ಹೇಳುವ ಕ್ರೈಸ್ತ ಮತಪ್ರಚಾರಕರು ಮತ್ತು ವಿದ್ವಾಂಸರು (ಉದಾಹರಣೆಗೆ ಡೋನ್ ರಿಚರ್ಡ್‌ಸನ್ 2003ರಲ್ಲಿ, ರೋಬರ್ಟ್ ಸ್ಪೆನ್ಸರ್ 2006ರಲ್ಲಿ) ಮುಸ್ಲಿಮರ ಮತಾಂಧತೆ ಮತ್ತು ಭೀಕರ ಕೃತ್ಯಗಳಿಗೆ ಉತ್ತರದಾಯಿಗಳಾಗಿದ್ದಾರೆ.

ಅವರು ಆಕ್ಷೇಪಿಸುವಾಗ ಬಳಸುವ ಭಾಷೆ ಕೆಲವು ಸಾರಿ ಉದ್ದೇಶ ಪೂರ್ವಕವಾಗಿ ಅಸಭ್ಯವೂ ಅತ್ಯಂತ ರೊಚ್ಚಿಗೆಬ್ಬಿಸುವುದೂ ಮುಸ್ಲಿಮರ ಭಾವನೆಗಳಿಗೆ ನೋವನ್ನುಂಟುಮಾಡುವಂತೆ ಮುಹಮ್ಮದ್ ಪೈಗಂಬರ್[ಸ] ಮತ್ತು ಪವಿತ್ರ ಖುರ್‌ಅನಿನ ವಿರುದ್ಧ ಸುಳ್ಳು ಆರೋಪದಿಂದ ತುಂಬಿರುವುದೂ ಆಗಿರುತ್ತದೆ.

ಈ ಮತ ಪ್ರಚಾರಕರು, ಅವರ ಸಹಾಯಕರಾದ ಬರಹಗಾರರು, ಆರ್ಟಿಸ್ಟ್‌ಗಳು, ಚಲನಚಿತ್ರ ತಯಾರಕರು ಮತ್ತು ಇಸ್ಲಾಮ್ ಧರ್ಮ ತ್ಯಾಗಿಗಳು ಬುದ್ಧಿವಿಹೀನರಾದ ಮತ್ತು ದುರದೃಷ್ಟಶಾಲಿಗಳಾದ ಮುಸ್ಲಿಮರನ್ನು ಇಸ್ಲಾಮಿನ ಪವಿತ್ರ ವ್ಯಕ್ತಿಗಳ ಅಪಮಾನಕರ ವ್ಯಂಗ್ಯಚಿತ್ರಗಳ ಮೂಲಕ ಮತ್ತು ರೊಚ್ಚಿಗೆಬ್ಬಿಸುವ ಸಿನಿಮಾಗಳ ನಿರ್ಮಾಣದ ಮೂಲಕ ಹಿಂಸೆಗೆ ಉತ್ತೇಜಿಸುತ್ತಾರೆ.

ಸ್ಯಾಟನಿಕ್ ವರ್ಸಸ್, ಡ್ಯಾನಿಶ್ ವ್ಯಂಗ್ಯಚಿತ್ರಗಳು, ಜ್ಯುವೆಲ್ ಆಫ್ ಮದೀನ ಎಂಬ ಪುಸ್ತಕ ಮತ್ತು 'ಫಿತ್ನ' ಚಲನಚಿತ್ರದ ವಿರುದ್ಧ ಎಬ್ಬಿಸಲಾದ ಪ್ರತಿಭಟನೆ ಮತ್ತು ಹಿಂಸಾತ್ಮಕ ಪ್ರತಿಕ್ರಿಯೆಗಳನ್ನು ನಾವು ಕಂಡಿದ್ದೇವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಹಝ್‌ರತ್ ವಾಗ್ದತ್ತ ಮಸೀಹ್[ಅ] ಹೇಳಿದ ಹಾಗೆ ಭೀಕರವಾದ ಮತ್ತು ಹತ್ಯಾಕಾಂಡಗಳಿಗೆ ಮೇಲೆ ವಿವರಿಸಿದ ಎರಡು ಗುಂಪುಗಳಿಗೆ ಸೇರಿದವರು ಜವಾಬ್ದಾರರಾಗಿದ್ದಾರೆ. ಪಾಶ್ಚಿಮಾತ್ಯ ಮತ್ತು ಪೌರಾತ್ಯ ದೇಶಗಳು ನಿಜವಾದ ಶಾಂತಿಯನ್ನು ಸ್ಥಾಪಿಸಲು ಬಯಸುವುದಾದರೆ ಮುಸ್ಲಿಮ್ ವಿದ್ವಾಂಸರು, ಮುಸ್ಲಿಮ್ ಜನತೆ, ಪಾಶ್ಚಿಮಾತ್ಯ ಸರಕಾರಗಳು, ಕ್ರೈಸ್ತ ವಿದ್ವಾಂಸರು, ಮತ ಪ್ರಚಾರಕರು ಮತ್ತು ಅವರ ಜನತೆ ಈ ಕಾಲಘಟ್ಟದಲ್ಲಿ ಧರ್ಮ ಸುಧಾರಕರಾಗಿ ಆಗಮಿಸಿದ ವಾಗ್ದತ್ತ ಮಸೀಹರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರ ಉಪದೇಶಗಳಿಗೆ ಕಿವಿಗೊಡಬೇಕು.

## ಅಫ್‌ಘಾನಿಸ್ಥಾನ ಮತ್ತು ಅದರ ಗಡಿನಾಡು ಪ್ರದೇಶಗಳಲ್ಲಿ ಇರುವ ಜಿಹಾದಿ ಶಿಬಿರಗಳು ಮತಾಂಧತೆ ಮತ್ತು ಭೀಕರ ಕೃತ್ಯಗಳನ್ನು ಹರಡುವುದಕ್ಕೆ ವಹಿಸಿದ ಪಾತ್ರ

ಇಂದು ಆತ್ಮಹತ್ಯಾ ಧಾಳಿಯನ್ನು ಮಾಡುವ ತಥಾಕಥಿತ ಮುಸ್ಲಿಮರು, ಅವರು ಲೋಕದಲ್ಲಿ ಎಲ್ಲಿ ಕಾರ್ಯನಿರತರಾಗಿದ್ದರೂ ಅವರಿಗೆ ಆಫ್‌ಘಾನಿಸ್ತಾನ ಮತ್ತು ಅದರ ಗಡಿನಾಡು ಪ್ರದೇಶಗಳಲ್ಲಿರುವ ಜಿಹಾದಿ ಶಿಬಿರಗಳೊಂದಿಗೆ ನಿಕಟ ಸಂಬಂಧವಿರುತ್ತದೆ. ಪಾಕಿಸ್ತಾನ ಸರಕಾರ ಪಾಕಿಸ್ತಾನದ ಉತ್ತರದ ಗಡಿನಾಡು ಪ್ರದೇಶಗಳಲ್ಲಿ ಮತ್ತು ಆಫ್‌ಘಾನಿಸ್ತಾನದಲ್ಲಿ ಆತ್ಮಹತ್ಯಾ ದಾಳಿಕೋರರಿಗೆ ತರಬೇತಿ ನೀಡುವ ಶಿಬಿರಗಳು ಇರುವುದಾಗಿ ಒಪ್ಪಿಕೊಂಡಿದೆ. ಜಿಹಾದ್ ಹೆಸರಲ್ಲಿ ಭೀಕರ ಕೃತ್ಯಗಳನ್ನು ಮಾಡುವವರನ್ನು ಪೋಷಿಸುವ ಶಿಬಿರಗಳು ಇಲ್ಲಿವೆ.

ಇದೆಷ್ಟು ವಿಚಿತ್ರವಾಗಿದೆ! ಒಂದು ನೂರು ವರ್ಷಗಳ ಮೊದಲು ಹಝ್‌ರತ್ ವಾಗ್ದತ್ತ ಮಸೀಹರ ಕಾಲದಲ್ಲಿ ದಕ್ಷಿಣ ಏಶಿಯಾದ ಅಫ್‌ಘಾನಿಸ್ಥಾನ ಮತ್ತು ಗಡಿನಾಡು ಪ್ರಾಂತ್ಯಗಳು ಭ್ರಷ್ಟ ಮತ್ತು ದಯಾಹೀನ ಚಟುವಟಿಕೆಗಳಿಗೆ ಕೇಂದ್ರವಾಗಿದ್ದ ಹಾಗೆ ಇಂದು ಸಹ ಆ ಪ್ರದೇಶ ಇಂತಹದೇ ಚಟುವಟಿಕೆಗಳ ಕೇಂದ್ರವಾಗಿದೆ. ಧಾರ್ಮಿಕ ವ್ಯತ್ಯಾಸದ ಕಾರಣದಿಂದ ಅನೇಕ ನಿರಪರಾಧಿ ಜನರ ರಕ್ತವನ್ನು ಅಂದಿನ ಕಾಲದ ಹಾಗೆ ಇಂದು ಸಹ ಹರಿಸಲಾಗುತ್ತಿದೆ.

## ಕಾಬೂಲಿನ ದೊರೆಗೆ ನೀಡಲಾದ ಮುಖ್ಯ ಸಲಹೆಗಳು

ವಿದ್ವಾಂಸರು ಮತ್ತು ಜನರು ಜಿಹಾದ್ ಬಗ್ಗೆ ಮಾಡಿದ ತಪ್ಪುಗಳನ್ನು ಸೂಚಿಸುತ್ತಾ ಹಝ್‌ರತ್ ವಾಗ್ದತ್ತ ಮಸೀಹರು ಕಾಬೂಲಿನ ದೊರೆ (ಅಮೀರ್) ತೆಗೆದುಕೊಳ್ಳಬೇಕಾದ ಸುಧಾರಣೆಯ ಕ್ರಮಗಳನ್ನು ಹೀಗೆ ವಿವರಿಸಿದರು:

> "ಇಸ್ಲಾಮ್ ಧರ್ಮದಲ್ಲಿ ದೊರೆಯ ಆಜ್ಞೆ ಇಲ್ಲದೆ ಯಾವುದೇ ಜಿಹಾದ್ ಮಾಡಬಾರದು. ಇದನ್ನು ಜನರು ಸಹ ಅರಿತಿದ್ದಾರೆ. ಆದುದರಿಂದ ಸತ್ಯವೇನೆಂದು ಅರಿಯದ ಜನರು ತಮ್ಮ ಹೃದಯಗಳಲ್ಲಿ ಅಮೀರ್ ಸಾಹೇಬರ ಬಗ್ಗೆ ಈ ಎಲ್ಲಾ ಹಿಂಸಾಕೃತ್ಯಗಳು ಅವರ ಸೂಚನೆ ಮೇರೆಗೆ ನಡೆಸಲಾಗುತ್ತಿದೆ ಎಂದು ದೋಷಾರೋಪವನ್ನು ಮಾಡುತ್ತಾ ಇರಬಹುದು. ಆದುದರಿಂದ ಅಮೀರ್ ಸಾಹೇಬ್ ಆವಶ್ಯಕವಾಗಿ ಮಾಡಬೇಕಾದ ಕೆಲಸವೇನೆಂದರೆ, ತಪ್ಪು ಫತ್ವಾಗಳನ್ನು ತಡೆಯಲು ಕಠಿಣ ಪರಿಶ್ರಮವನ್ನು ಮಾಡಬೇಕು. ಆಗ ಅಮೀರ್ ಸಾಹೇಬ್ ದೋಷಾರೋಪದಿಂದ ಮುಕ್ತರಾಗಿ ಪ್ರಕಾಶ ಮಾನವರಾಗುವರು. ಅವರಿಗೆ ದೈವಿಕ ಅನುಗ್ರಹವೂ ಲಭಿಸುವುದು. ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಕೊಡಿಸುವುದಕ್ಕಿಂತ ಉತ್ತಮ ಸತ್ಕಾರ್ಯವಿಲ್ಲ. ದೌರ್ಜನ್ಯಗಾರರ ಖಡ್ಗದಿಂದ ದೌರ್ಜನ್ಯ ಪೀಡಿತರನ್ನು ರಕ್ಷಿಸುವುದು ಇದರಲ್ಲಿ ಸೇರಿದೆ. ಗಾಝಿ ಆಗಬೇಕೆಂಬ ಆಶೆಯಿಂದ ಖಡ್ಗ ಚಲಾಯಿಸುವವರಲ್ಲಿ ಬಹುತೇಕ ಜನರು ಅಫ್‌ಘಾನಿಗಳೇ ಆಗಿದ್ದಾರೆ. ಅವರಲ್ಲಿ ಬಹುತೇಕ ಜನರು ಅಮೀರ್ ಸಾಹೇಬರ ದೇಶದ

ನಿವಾಸಿಗಳೇ ಆಗಿದ್ದಾರೆ. ಅಲ್ಲಾಹನು ಅವರಿಗೆ ಉತ್ತಮ ಸಂದರ್ಭವೊದಗಿಸಿರುವನು. ಇಸ್ಲಾಮಿಗೆ ಕೆಟ್ಟ ಹೆಸರು ತರುವ ಅನಾಗರಿಕ ಸ್ವಭಾವ ಗುಣಗಳನ್ನು ಅಫ್‌ಘಾನ್ ಜನತೆಯಿಂದ ಬಿಡಿಸಿ ಅಮೀರ್ ಸಾಹೇಬರು ಮಾಡಿದ ಉತ್ತಮ ಕೆಲಸಗಳ ದಾಖಲೆಯಲ್ಲಿ ಸುಧಾರಣೆಯ ಪ್ರಸ್ತಾಪವೂ ಬರುವಂತಾಗಲಿ." (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ನೀವು ನೋಡಿರಿ, ಹಝ್ರತ್ ವಾಗ್ದತ್ತ ಮಸೀಹರ ಹೇಳಿಕೆಗಳು ಇಂದಿನ ಸ್ಥಿತಿಯನ್ನು ಎಷ್ಟು ಚೆನ್ನಾಗಿ ಪ್ರತಿಬಿಂಬಿಸುತ್ತಾ ಇವೆ.

ಹಝ್ರತ್ ವಾಗ್ದತ್ತ ಮಸೀಹರ ಸಲಹೆಗಳು ಅಫ್‌ಘಾನಿಸ್ತಾನಕ್ಕೆ ಮಾತ್ರವಲ್ಲ ಲೋಕದಲ್ಲಿರುವ ಎಲ್ಲಾ ಮುಸ್ಲಿಮ್ ಆಡಳಿತೆಗಾರರಿಗೂ ಅನುಸರಣೆಗೆ ಯೋಗ್ಯವಾಗಿದೆ. ಅವರು ಹೀಗೆ ಹೇಳಿದರು:

"ಅನ್ಯಧರ್ಮದ ಜನರನ್ನು ಆಕ್ರಮಿಸುವ ಸಂಪ್ರದಾಯ ಮುಸ್ಲಿಮರಲ್ಲಿದೆ. ಅದನ್ನು ಅವರು ಜಿಹಾದ್ ಎಂದು ಕರೆಯುತ್ತಾರೆ. ಇದು ಧರ್ಮಬದ್ಧ ಜಿಹಾದ್ ಅಲ್ಲ. ಇದು ಅಲ್ಲಾಹನ ಮತ್ತು ಅವನ ಪ್ರವಾದಿಯ ಉಪದೇಶಗಳಿಗೆ ವಿರುದ್ಧವಾಗಿರುವ ಪಾಪಕೃತ್ಯವಾಗಿದೆ. ಆದರೆ ಈ ರೀತಿ ವರ್ತಿಸುವುದು ಕೆಲವು ಮುಸ್ಲಿಮ್ ಗೋತ್ರಗಳ ಪುರಾತನ ಸ್ವಭಾವವಾಗಿದೆ. ಈ ಸ್ವಭಾವವನ್ನು ಬಿಡುವುದು ಅವರಿಗೆ ಸಾಧ್ಯವಾಗುವುದಿಲ್ಲ. ಯಾರಾದರೂ ಅವರಿಗೆ ಉಪದೇಶ ನೀಡಲು ಬಯಸಿದರೆ ಈ ಜನರು ಆ ವ್ಯಕ್ತಿಯ ಕಠಿಣ ಶತ್ರುಗಳಾಗುವರು. ಅವರು ಗಾಝಿ ಆಗಬೇಕೆಂದು ಉತ್ತೇಜಿಸಲ್ಪಟ್ಟು ಆತನನ್ನು ಕೊಲ್ಲಲೂ ಬಹುದು. ನಾನು ಒಂದು ಕ್ರಮವನ್ನು ಸೂಚಿಸುತ್ತೇನೆ. ಕಾಬೂಲಿನ ಅಮೀರ್ ಅಫ್‌ಘಾನ್ ಜನರ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದಾರೆ. ಪ್ರಾಯಶಃ ಈ ಮೊದಲು ಆಡಳಿತೆ ನಡೆಸಿದ ಅಮೀರ್‌ಗಳು ಇವರಷ್ಟು ಪ್ರಭಾವಶಾಲಿಗಳಾಗಿರಲಿಲ್ಲ. ಅಮೀರ್ ಸಾಹೇಬರು ಪ್ರಸಿದ್ಧ ಮತಪಂಡಿತರನ್ನು ಆಮಂತ್ರಿಸಿ ಜಿಹಾದ್ ಬಗ್ಗೆ ಚರ್ಚೆ ನಡೆಸಬೇಕು. ಈ ಮತ ಪಂಡಿತರ ಮೂಲಕ ಜನರ ತಪ್ಪುಗಳ ಬಗ್ಗೆ ಎಚ್ಚರಿಕೆ ನೀಡಬೇಕು. ಪುಶ್ತು ಭಾಷೆಯಲ್ಲಿ ಪುಸ್ತಕಗಳನ್ನು ಬರೆಯಿಸಿ ಜನರಿಗೆ ಹಂಚಬೇಕು. ಇಂತಹ ಕೆಲಸದಿಂದ ಜನರು ಬಹಳ ಪ್ರಭಾವಿತರಾಗುವರು. ತಿಳಿಗೇಡಿ ಮುಲ್ಲಾಗಳು ಜನರ ಮಧ್ಯೆ ಹರಡುವ ದ್ವೇಷವು ಕ್ರಮೇಣ ಕಡಿಮೆಯಾಗುತ್ತಾ ಹೋಗುವುದು."

(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಪವಿತ್ರ ಖುರ್‌ಆನಿನ ಮಾರ್ಗದರ್ಶನ ಪ್ರಕಾರ ದೈವಿಕ ಪ್ರಕಾಶಭರಿತವಾದ ಈ ಸಲಹೆ ಬಹಳ ವಿವೇಕಭರಿತವಾಗಿದ್ದು ನೈಜ ಮತ್ತು ಶಾಶ್ವತ ಸುಧಾರಣೆಗೆ ಮೂಲತತ್ವವಾಗಬಲ್ಲದು.

## ಜಿಹಾದ್ ಬಗ್ಗೆ ತಪ್ಪು ಕಲ್ಪನೆಯಿಂದ ಉದ್ಭವಿಸಿರುವ ವಿದ್ರೋಹ ಮತ್ತು ವಿರೋಧವನ್ನು ಬಲ ಪ್ರಯೋಗಿಸಿ ಹತೋಟಿಗೆ ತರಲು ಸಾಧ್ಯವಾಗದು

ಜಿಹಾದ್ ಬಗ್ಗೆ ಅನಾಗರಿಕ ಕಲ್ಪನೆಯ ಮೂಲಕ ಮುಲ್ಲಾಗಳು ಹರಡಿದ ವಿದ್ರೋಹಗಳನ್ನು ಬಲಪ್ರಯೋಗಿಸಿ ಹತೋಟಿಗೆ ತರಲು ಸಾಧ್ಯವಿಲ್ಲ. ನಿರಂಕುಶ ಪ್ರಭುಗಳನ್ನು, ವಿದ್ರೋಹಿಗಳನ್ನು ಮತ್ತು ಅಪರಾಧಿಗಳನ್ನು ಶಿಕ್ಷಿಸುವುದು ಅವರು ಮಾಡಿದ ಅಪರಾಧಗಳ ಕಾರಣದಿಂದ ಆವಶ್ಯಕವಾಗಿರುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ." (42:41)

"ಯಾರಾದರೂ ನಿಮ್ಮ ಮೇಲೆ ಆಕ್ರಮಣ ಮಾಡಿದರೆ, ಅವನು ಆಕ್ರಮಣ ಮಾಡಿದ ರೀತಿಯಲ್ಲಿಯೇ ನೀವು ಸಹ ಅವನ ಮೇಲೆ ಆಕ್ರಮಣ ಮಾಡಿರಿ." (2:195)

ಆದರೆ ಧಾರ್ಮಿಕ ನಂಬಿಕೆಗಳಿಗೋಸ್ಕರ ಬಲಾತ್ಕಾರ ಮಾಡುವುದರಿಂದ ಮತ್ತು ಜನರನ್ನು ಹಿಂಸಿಸುವುದರಿಂದ ಸಮಾಜದಲ್ಲಿ ಶಾಂತಿ ಸ್ಥಾಪಿತವಾಗಲಾರದು. ಸಮಾಜದಲ್ಲಿ ಹರಡಿರುವ ತಪ್ಪು ಮತ್ತು ಸುಳ್ಳು ಕಲ್ಪನೆಗಳನ್ನು ನೇರವಾಗಿ ಎದುರಿಸದೆ ಹೋಗಲಾಡಿಸಲು ಸಾಧ್ಯವಾಗಲಾರದು. ಬಲಪ್ರಯೋಗವು ಅಭಿಪ್ರಾಯ ವ್ಯತ್ಯಾಸವನ್ನು ತಾತ್ಕಾಲಿಕವಾಗಿ ಅದುಮಿಡಬಹುದು. ಆದರೆ ದೀರ್ಘಕಾಲೀನ ಶಾಂತಿ ಸ್ಥಾಪನೆ ಅದರಿಂದ ಸಾಧ್ಯವಾಗಲಾರದು. ಖಡ್ಗ ಪ್ರಯೋಗದಿಂದ ತಾತ್ಕಾಲಿಕ ಜಯಗಳಿಸಬಹುದು. ಆದರೆ ಹೃದಯಗಳನ್ನು ಖಡ್ಗಬಲದಿಂದ ಗೆಲ್ಲಲು ಸಾಧ್ಯವಾಗದು. ಇದೇ ಕಾರಣದಿಂದ ಪವಿತ್ರ ಖುರ್‌ಆನ್ ಒಂದು ತತ್ವವನ್ನು ಪ್ರಚಾರ ಮಾಡಲು ಮತ್ತು ಸುಧಾರಣೆ ಮಾಡಲು ಬಲಪ್ರಯೋಗ ಮಾಡುವುದನ್ನು ತಡೆದಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2:257)

ಪವಿತ್ರ ಖುರ್‌ಆನ್ ಬೇರೆ ಒಂದು ಕಡೆಯಲ್ಲಿ ಹೀಗೆ ಹೇಳಿದೆ:

".... ದೃಷ್ಟಾಂತ ಮೂಲಕ ನಾಶಹೊಂದಬೇಕಾದವನು ನಾಶ ಹೊಂದಲಿಕ್ಕೂ ದೃಷ್ಟಾಂತ ಮೂಲಕ ಬದುಕಬೇಕಾದವನು ಬದುಕಲಿಕ್ಕೂ..." (8:43)

ಒಂದು ದೃಷ್ಟಾಂತವನ್ನು ಹೊಂದಿರುವವನು ಜೀವಂತನಾಗಿರುತ್ತಾನೆ. ಒಂದು ದೃಷ್ಟಾಂತವನ್ನು ಪಡೆಯದವನು ನಾಶ ಹೊಂದುತ್ತಾನೆ. ತರ್ಕ ಮತ್ತು ವೈಚಾರಿಕ ಪ್ರಯೋಗಗಳ ಮೂಲಕ ಸುಳ್ಳು ಮತ್ತು ಮಿಥ್ಯ ನಂಬಿಕೆಗಳನ್ನು ಹೋಗಲಾಡಿಸಿ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಬಹುದಾಗಿದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು." (16:126)

## ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಮಾಡುವುದು ಆವಶ್ಯಕವಾಗಿದೆ

ಹಝ್ರತ್ ವಾಗ್ದತ್ತ ಮಸೀಹರು ಸೂಚಿಸಿದ ಹಾಗೆ ಪ್ರಮುಖ ಮತಪಂಡಿತರು ಸಭೆ ಸೇರಿ ಜಿಹಾದ್ ಬಗ್ಗೆ ಚರ್ಚಿಸಬೇಕು. ಜಿಹಾದ್ ಎಂದರೇನೆಂದು ಜನರಿಗೆ ತಿಳಿಸಬೇಕು. ಜನರ ತಪ್ಪು ಗ್ರಹಿಕೆಗಳನ್ನು ದೂರೀಕರಿಸಬೇಕು. ಇಂದಿನ ಕಾಲದಲ್ಲಿ ಸ್ಥಳೀಯ ಪ್ರಭಾವಶಾಲಿ ಮತಪಂಡಿತರು ಸಭೆ ಸೇರಿ ಚರ್ಚಿಸಿ ಜನರಿಗೆ ಜಿಹಾದ್ ಬಗ್ಗೆ ಇರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕು.

ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗುವ ಪತ್ರಿಕೆಗಳಲ್ಲಿ ಜಿಹಾದ್ ಬಗ್ಗೆ ವಿವರಣೆಯನ್ನು ಪ್ರಕಟಿಸಬೇಕು. ರೇಡಿಯೋ, ಟಿ.ವಿ., ಇಂಟರ್‌ನೆಟ್

ಮೊದಲಾದ ಸಂಪರ್ಕ ಮಾಧ್ಯಮಗಳನ್ನು ಬಳಸಿಕೊಂಡು ಜಿಹಾದ್ ಬಗ್ಗೆ ಇರುವ ತಪ್ಪು ವ್ಯಾಖ್ಯಾನಗಳನ್ನು ತಿದ್ದಲು ಪ್ರಯತ್ನಿಸಬೇಕು.

ಅಫ್‌ಘಾನಿಸ್ತಾನ ಮತ್ತು ಗಡಿನಾಡು ಪ್ರದೇಶಗಳ ಮತಪಂಡಿತರು ಮಾತ್ರವಲ್ಲ ಇತರ ದೇಶಗಳ ಮತಪಂಡಿತರನ್ನು ಈ ಅಭಿಯಾನದಲ್ಲಿ ಭಾಗವಹಿಸುವಂತೆ ಮಾಡಬೇಕು. ಇಸ್ಲಾಮೀ ಜಿಹಾದ್ ಎಂದರೇನೆಂದು ಸ್ಪಷ್ಟಪಡಿಸಬೇಕು. ಎಲ್ಲಾ ಕಡೆಗಳಿಂದಲೂ ಒಂದೇ ರೀತಿಯ ಸಂದೇಶವನ್ನು ಪ್ರಕಟಿಸಿದರೆ ಅದರಿಂದ ಉತ್ತಮ ಪರಿಣಾಮ ಉಂಟಾಗುವುದು.

ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೀಗೆ ಸಹ ಹೇಳಿದರು:

> "...... ಪಂಜಾಬ್ ಮತ್ತು ಹಿಂದೂಸ್ತಾನದ ಇತರ ಭಾಗದ ಮೌಲವಿಗಳು ವಾಸ್ತವಿಕವಾಗಿ ಜಿಹಾದನ್ನು ವಿರೋಧಿಸುವವರಾದರೆ ಅವರು ಅದರ ಬಗ್ಗೆ ಪುಸ್ತಕಗಳನ್ನು ಬರೆದು ಪುಷ್ತು ಭಾಷೆಯಲ್ಲಿ ಭಾಷಾಂತರಿಸಿ ಗಡಿನಾಡು ಪ್ರದೇಶದಲ್ಲಿ ಹಂಚಬೇಕು. ನಿಸ್ಸಂಶಯವಾಗಿಯೂ ಇದು ಬಹಳ ಪ್ರಭಾವಶಾಲಿಯಾಗುವುದು. ಆದರೆ ಈ ಕೆಲಸವನ್ನು ಹೃತ್ಪೂರ್ವಕವಾದ ಉತ್ಸಾಹದಿಂದ ಮಾಡಬೇಕು. ಕಾಪಟ್ಯದಿಂದ ಮಾಡಬಾರದು."
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಜಿಹಾದಿನ ಬಗ್ಗೆ ವಾಸ್ತವಿಕ ಜ್ಞಾನ ಗಳಿಸಲು ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಬೆಳಕಿನಲ್ಲಿ ಅದನ್ನು ಮನವರಿಕೆ ಮಾಡಲು ಹಝ್‌ರತ್ ವಾಗ್ದತ್ತ ಮಸೀಹರ ಗ್ರಂಥಗಳಿಂದ ಮತ್ತು ಅವರ ಖಲೀಫರ ಹೇಳಿಕೆಗಳಿಂದ ಮಾರ್ಗದರ್ಶನ ಪಡೆಯುವುದು ಆವಶ್ಯಕವಾಗಿದೆ. ಅವರು ದೇವನ ದಾಸರಾಗಿದ್ದು ಧರ್ಮದ ಪುನರುತ್ಥಾನಕ್ಕಾಗಿ ಅಲ್ಲಾಹನು ಅವರನ್ನು ನೇಮಿಸಿದ್ದಾನೆ. ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹ್‌ದೀ ಎಂತಹ ಅನುಗ್ರಹಿಸಲ್ಪಟ್ಟ ಮಹಾನುಭಾವರೆಂದರೆ ಅವರ ಬಗ್ಗೆ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿರುವರು: "ಅವರ ಮೂಲಕ ಲೋಕವು ನ್ಯಾಯ, ಸಾತ್ವಿಕತೆ, ಶಾಂತಿ ಮತ್ತು ಪ್ರಾಮಾಣಿಕತೆಯಿಂದ ತುಂಬಿಸಲ್ಪಡುವುದು."

## ಜಿಹಾದ್ ಬಗ್ಗೆ ತಪ್ಪು ವ್ಯಾಖ್ಯಾನಗಳನ್ನು ನಿರ್ಲಕ್ಷಿಸುವುದರ ಅಪಾಯಗಳು

ಜಿಹಾದ್ ಬಗ್ಗೆ ತಪ್ಪು ವ್ಯಾಖ್ಯಾನಗಳನ್ನು ನಿರ್ಲಕ್ಷಿಸುವುದರಿಂದ ಉಂಟಾಗುವ ಅಪಾಯಗಳ ಕುರಿತು ಹಝ್‌ರತ್ ವಾಗ್ದತ್ತ ಮಸೀಹ್ ಸೂಚಿಸಿದ್ದಾರೆ. ಅವರ ಮಾತುಗಳು ಸತ್ಯವೆಂದು ಇಂದಿನ ಕಾಲದಲ್ಲಿ ಸಾಬೀತುದಾದನ್ನು ನಾವು ನೋಡಬಹುದು. ಅವರು ಹೀಗೆ ಹೇಳಿದರು:

> "ಅಮೀರ್ ಸಾಹೇಬರು ಆವಶ್ಯಕ ಸುಧಾರಣೆಯ ಬಗ್ಗೆ ಸಾಕಷ್ಟು ಗಮನ ಹರಿಸದಿದ್ದರೆ ಅವರ ಪ್ರಜೆಗಳು ಬಹಳ ದುರದೃಷ್ಟಕರ ಹಾನಿ ಅನುಭವಿಸುವರು. ಅದರ ಕೊನೆಯ ಪರಿಣಾಮ ಮುಲ್ಲಾಗಳ ಫತ್ವಾಗಳ ಬಗ್ಗೆ ಮೌನದಿಂದಿರುವ ಸರಕಾರ ಸ್ವತಃ ಅನುಭವಿಸುವುದು. ಇಂದಿನ ಕಾಲದಲ್ಲಿ ಮುಲ್ಲಾಗಳು ಮತ್ತು ಮೌಲವಿಗಳು ಎಂತಹ ಸ್ವಭಾವ ಹೊಂದಿದ್ದಾರೆಂದರೆ ಯಾವುದಾದರೂ ಚಿಕ್ಕಪುಟ್ಟ ಧಾರ್ಮಿಕ ಭಿನ್ನಾಭಿಪ್ರಾಯದ ಕಾರಣದಿಂದ ಒಬ್ಬನನ್ನು ಅಥವಾ ಒಂದು ಪಂಗಡವನ್ನು ಕಾಫಿರ್ (ಅವಿಶ್ವಾಸಿ) ಎಂದು ಘೋಷಿಸುತ್ತಾರೆ. ಕಾಫಿರರ ವಿರುದ್ಧ ಅವರ ಜಿಹಾದ್ ಮೊದಲಾದವುಗಳಿಗೆ ಸಂಬಂಧಿಸಿದ ಫತ್ವಾಗಳನ್ನು ಇಂತಹ ಜನರ ಮೇಲೆಯೂ ಜಾರಿಗೊಳಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಅಮೀರ್ ಸಾಹೇಬ್ ಸಹ ಇಂತಹ ಫತ್ವಾಗಳಿಂದ ಸುರಕ್ಷಿತರಾಗಿರಲು ಸಾಧ್ಯವಾಗದು. ಯಾವುದಾದರೂ ಒಂದು ಚಿಕ್ಕ ವಿಷಯಕ್ಕೆ ಸಂಬಂಧಿಸಿ ಅಮೀರರ ವಿರುದ್ಧ ಕೋಪಗೊಂಡು ಮುಲ್ಲಾಗಳು ಅಮೀರರನ್ನು ಇಸ್ಲಾಮ್‌ನಿಂದ ಹೊರಗೆ ಹಾಕಬಹುದು. ಅನಂತರ ಅವರ ವಿರುದ್ಧ ಕಾಫಿರರಿಗೆ ಅನ್ವಯಿಸುವ ಜಿಹಾದನ್ನು ಅವರ ಮೇಲೆಯೂ ಜಾರಿಗೊಳಿಸಬಹುದಾಗಿದೆ. ಒಂದು ಗುಂಪಿಗೆ ಸತ್ಯ ವಿಶ್ವಾಸಿ ಅಥವಾ ಅವಿಶ್ವಾಸಿ ಎಂದು ಘೋಷಿಸುವ ಅಧಿಕಾರ ಮತ್ತು ಜಿಹಾದ್ ಘೋಷಿಸುವ ಅಧಿಕಾರ ವಿರುವುದು ಅತ್ಯಂತ ಅಪಾಯಕರವಾಗಿದೆ. ಅಮೀರ್ ಸಾಹೇಬರು ಇದರ ಬಗ್ಗೆ ನಿರ್ಲಕ್ಷ್ಯದಿಂದ ಇರಬಾರದು. ಪ್ರತಿಯೊಂದು ಸರಕಾರದ ವಿರುದ್ಧ ವಿದ್ರೋಹ ಚಟುವಟಿಕೆಗಳ ಮೂಲ ಕೇಂದ್ರ ಇವರೇ ಆಗಿದ್ದಾರೆ. ನಿಸ್ಸಹಾಯಕರಾದ ಸಾಮಾನ್ಯ ಜನರು ಅವರ ಹಿಡಿತಕ್ಕೆ ಒಳಗಾಗಿದ್ದಾರೆ. ಅವರ ಹೃದಯಗಳ ಕೀಲಿ ಈ ಮುಲ್ಲಾಗಳ ಕೈಗಳಲ್ಲಿವೆ. ತಾವು ಬಯಸುವ ಕಡೆಗೆ ಅವರು ಜನರನ್ನು ತಿರುಗಿಸಬಲ್ಲರು ಮತ್ತು ಗಲಭೆಗೊಂದಲವನ್ನು ಬಡಿದೆಬ್ಬಿಸಬಲ್ಲರು. ಜನರನ್ನು ಇಂತಹ ಮೌಲವಿಗಳ ಹಿಡಿತದಿಂದ ಬಿಡುಗಡೆಗೊಳಿಸುವುದು ಪಾಪಕರವಲ್ಲ. ಅವರಿಗೆ ಮೃದು ಮಾತುಗಳಿಂದ ಜಿಹಾದ್ ಬಗ್ಗೆ ಸರಿಯಾದ ಶಿಕ್ಷಣ ನೀಡಬೇಕು."
> (ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಹಝ್‌ರತ್ ವಾಗ್ದತ್ತ ಮಸೀಹ್(ಅ) ಹೇಳಿದ ಮಾತುಗಳು ಅಂದು ಸತ್ಯವೆಂದು ಸಾಬೀತುಗೊಂಡ ಹಾಗೆ ಇಂದು ಸಹ ಸತ್ಯವೆಂದು ಸಾಬೀತಾಗುತ್ತವೆ. ನಾವು ಹಿಂದೆ ನೋಡಿದ್ದೆವು; ಈಗ ಸಹ ನೋಡುತ್ತಿದ್ದೇವೆ. ಮುಲ್ಲಾಗಳ ರಕ್ತ ಪಿಪಾಸು ಜಿಹಾದ್ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದವರ ವಿರುದ್ಧ ಕೋಪಗೊಂಡು ಅವರ ವಿರುದ್ಧ ಮುಲ್ಲಾಗಳು ಜಿಹಾದನ್ನು ಘೋಷಿಸುತ್ತಾರೆ.

## ಒಂದು ಎಚ್ಚರಿಕೆ ಮತ್ತು ಪ್ರಾರ್ಥನೆ

ಒಂದು ನೂರು ವರ್ಷಗಳಿಗಿಂತ ಹಿಂದೆ ಹಝ್‌ರತ್ ವಾಗ್ದತ್ತ ಮಸೀಹ್(ಅ) ಸರಕಾರಗಳಿಗೆ ಹೀಗೆ ಉಪದೇಶಿಸಿದ್ದರು: ಜಿಹಾದ್ ಕುರಿತು ಅನಾಗರಿಕ ವ್ಯಾಖ್ಯಾನಗಳ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕು ಮತ್ತು ಅವರಿಗೆ ಸರಿಯಾಗಿ ಮಾರ್ಗದರ್ಶನ ನೀಡಬೇಕು. ಹೀಗೆ ಮಾಡುವುದು ಸರಕಾರಗಳಿಗೆ ಹಿತಕರವಾಗಿದೆ.

ಅವರು ಹೀಗೆ ಹೇಳಿದರು:

> "...... ಈಗ ವಾಗ್ದತ್ತ ಮಸೀಹರ ಕಾಲಘಟ್ಟ ಪ್ರಾರಂಭವಾಗಿದೆ. ಈಗ ಅಲ್ಲಾಹನು ಆಕಾಶದಿಂದ ಎಂತಹ ವ್ಯವಸ್ಥೆಯನ್ನು ರೂಪಿಸುವನೆಂದರೆ ದೌರ್ಜನ್ಯ ಮತ್ತು ಅನ್ಯಾಯದ ರಕ್ತಪಾತಗಳಿಂದ ತುಂಬಿದ ಈ ಭೂಮಿಯನ್ನು ನ್ಯಾಯ, ಶಾಂತಿ ಮತ್ತು ಸೌಹಾರ್ದಮಯವನ್ನಾಗಿ ಮಾಡುವನು.

ಈ ಉದ್ದೇಶವನ್ನು ಸಾಧ್ಯಗೊಳಿಸಲು ಪ್ರಯತ್ನಿಸುವಂತಹ ದೊರೆ ಮತ್ತು ಅರಸರು ಅನುಗ್ರಹಿಸಲ್ಪಡುವರು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಈ ಉಲ್ಲೇಖದ ಕೊನೆಯ ಭಾಗದಲ್ಲಿ ಒಂದು ಪ್ರಾರ್ಥನೆಯು ಅಡಕವಾಗಿದೆ. ಹಝ್ರತ್ ವಾಗ್ದತ್ತ ಮಸೀಹರ ಉಪದೇಶವನ್ನು ಅನುಸರಿಸಿ ಜಿಹಾದ್ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ನೀಗಿಸಿ ಅವರ ಪ್ರಾರ್ಥನೆಯ ಫಲವನ್ನು ಅನುಭವಿಸುವ ಮತ್ತು ಅಲ್ಲಾಹನ ಅನುಗ್ರಹಗಳನ್ನು ಗಳಿಸುವ ಅಧಿಕಾರಿಗಳು ಯಾರಾಗಬಲ್ಲರೆಂಬುದನ್ನು ನಾವು ನೋಡಲಿಕ್ಕಿದೆ.

ದುರದೃಷ್ಟಕರವಾದ ವಿಷಯವೇನೆಂದರೆ, ಜನರಿಗೆ ಜಿಹಾದ್ ಬಗ್ಗೆ ಸರಿಯಾದ ತಿಳುವಳಿಕೆ ನೀಡಿ ಅವರ ತಪ್ಪು ಕಲ್ಪನೆಗಳನ್ನು ನೀಗಿಸಬೇಕೆಂದು ಹಝ್ರತ್ ವಾಗ್ದತ್ತ ಮಸೀಹರು ನೀಡಿದ ಉಪದೇಶವನ್ನು ಕಾಬೂಲಿನ ಅಮೀರ್ (ದೊರೆ) ಲಕ್ಷಿಸಲಿಲ್ಲ. ಹಝ್ರತ್ ವಾಗ್ದತ್ತ ಮಸೀಹರ ಶ್ರೇಷ್ಠ ಶಿಷ್ಯರು ಈ ಅಮೀರರ ದೇಶವಾದ ಅಫ್‌ಘಾನಿಸ್ಥಾನದಲ್ಲಿ ಕ್ರೂರವಾಗಿ ಕೊಲ್ಲಲ್ಪಟ್ಟರು. ಇದಕ್ಕೆ ಕಾರಣವಾದುದು ಅವರು ಮುಲ್ಲಾಗಳು ಜಿಹಾದ್‌ಗೆ ನೀಡಿದ ಅನಾಗರಿಕ ವ್ಯಾಖ್ಯಾನವನ್ನು ಅಂಗೀಕರಿಸಿದುದಾಗಿದೆ.

ಹಝ್ರತ್ ಮೌಲವಿ ಅಬ್ದುಲ್ ರಹ್ಮಾನ್ ಎಂಬ ಶಿಷ್ಯರನ್ನು ಕೊರಳಿಗೆ ಬಟ್ಟೆ ಬಿಗಿದು ಉಸಿರುಗಟ್ಟಿಸಿ ಕೊಲ್ಲಲಾಯಿತು. ಖೋಸ್ತ್ ಪ್ರಾಂತ್ಯದ ಮುಖ್ಯರಾಗಿದ್ದ ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹೇಬರನ್ನು ಭಾರವಾದ ಸಂಕೋಲೆಗಳಿಂದ ಬಂಧಿಸಿ ಹಿಂಸೆ ನೀಡಲಾಯಿತು. ಅವರ ಮೂಗಿನದ್ವಾರ ಮೂಲಕ ಹಗ್ಗ ಕಟ್ಟಿ ಅವರನ್ನು ಹತ್ಯೆ ಮಾಡುವ ಸ್ಥಳಕ್ಕೆ ಕಾಬೂಲಿನ ಮಾರ್ಗಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದಾಗ ಜನರು ಅವರನ್ನು ಪರಿಹಾಸ ಮಾಡುತ್ತಾ ಬೈಗಳ ಸುರಿಮಳೆಯನ್ನು ಸುರಿಯುತ್ತಿದ್ದರು. ಅವರನ್ನು ಸೊಂಟದ ತನಕ ಹುಗಿದು ನಿಲ್ಲಿಸಿ ಅವರ ಮೇಲೆ ಕಲ್ಲೆಸೆದು ಕೊಲ್ಲಲಾಯಿತು. ಅನಂತರ ಅವರ ಪತ್ನಿ ಮತ್ತು ಅನಾಥ ಮಕ್ಕಳನ್ನು ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು. ಅವರಲ್ಲಿ ಕೆಲವರನ್ನು ಕೊಂದು ಹುತಾತ್ಮರನ್ನಾಗಿ ಮಾಡಲಾಯಿತು.

ಅಫ್‌ಘಾನಿಸ್ಥಾನದ ದೊರೆಗಳಾಗಲಿ ಅಥವಾ ಪಾಕಿಸ್ತಾನದ ಆಡಳಿತಾಧಿಕಾರಿಗಳಾಗಲಿ ಜಿಹಾದಿನ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ನಿವಾರಿಸಲು ಪ್ರಯತ್ನಿಸಲಿಲ್ಲ. ಅವರು ಹಝ್ರತ್ ವಾಗ್ದತ್ತ ಮಸೀಹರನ್ನು, ಜಿಹಾದನ್ನು ರದ್ದುಗೊಳಿಸಿರುವರೆಂದು ಆರೋಪಿಸಿ ಅವರು ಸ್ಥಾಪಿಸಿದ ಜಮಾಅತಿನ ವಿರುದ್ಧ ವಿರೋಧದ ಬಿರುಗಾಳಿಯನ್ನು ಬಡಿದೆಬ್ಬಿಸಿದರು. ಅಹ್ಮದಿಯರನ್ನು ಸರಕಾರದ ಮತ್ತು ಸಂವಿಧಾನದ ಸಹಾಯದೊಂದಿಗೆ ದೌರ್ಜನ್ಯಗಳಿಗೆ ಈಡಾಗಿಸಲಾಗುತ್ತದೆ. ಹಲವು ಅಹ್ಮದಿಯರನ್ನು ಕೊಲ್ಲಲಾಗಿದೆ. ಅನೇಕರನ್ನು ಸೆರೆಮನೆಗೆ ತಳ್ಳಲಾಗಿದೆ. ಅವರ ಸಂಪತ್ತನ್ನು ಲೂಟಿಮಾಡಲಾಗಿದೆ ಮತ್ತು ಸುಟ್ಟುಹಾಕಲಾಗಿದೆ.

ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್‌ರವರ(ರ) ಕಗ್ಗೊಲೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ವಾಗ್ದತ್ತ ಮಸೀಹ್(ಅ) ತನ್ನ ಗ್ರಂಥವಾದ ತಝ್‌ಕಿರತುಶ್ಶಹಾದತೈನ್‌ನಲ್ಲಿ ಹೀಗೆ ಬರೆದರು:

"ಈ ರಕ್ತಪಾತದಿಂದ ಎಂತಹ ಫಲವುಂಟಾಗುವುದೆಂದು ಕಾಬೂಲು ಕಾಣುವುದು. ಈ ರಕ್ತಪಾತ ನಿರರ್ಥಕವಾಗಲಾರದು. ಇದಕ್ಕೆ ಮೊದಲು ನನ್ನ ಜಮಾಅತಿಗೆ ಸೇರಿದ ಅಬ್ದುರ್ರಹ್ಮಾನ್ ದೌರ್ಜನ್ಯಕ್ಕೀಡಾಗಿ ಕೊಲ್ಲಲ್ಪಟ್ಟಾಗ ಅಲ್ಲಾಹನು ಮೌನವಾಗಿದ್ದನು. ಆದರೆ ಅಲ್ಲಾಹನು ಈ ರಕ್ತಪಾತದ ನಂತರ ಸುಮ್ಮನೆ ಕುಳಿತುಕೊಳ್ಳಲಾರನು. ಇದರಿಂದ ದೊಡ್ಡ ದೊಡ್ಡ ಪರಿಣಾಮಗಳು ಉಂಟಾಗುವುವು."

(ತಝ್‌ಕಿರತುಶ್ಶಹಾದತೈನ್-ರೂಹಾನಿ ಖಝಾಯಿನ್, ಸಂಪುಟ 20, ಪುಟ 24)

ಅಲ್ಲಾಹನು ಈ ರಕ್ತಪಾತದ ನಂತರ ನಿಷ್ಕ್ರಿಯವಾಗಿ ಕುಳಿತುಕೊಳ್ಳಲಿಲ್ಲ ಎಂಬುದಕ್ಕೆ ಅಫ್‌ಘಾನಿಸ್ಥಾನದ ಚರಿತ್ರೆ ಸಾಕ್ಷ್ಯ ನೀಡುತ್ತಾ ಇದೆ!

ಅಫ್‌ಘಾನಿಸ್ಥಾನದ ಜನರು ಇಂದು ಅನುಭವಿಸುವ ಕಷ್ಟಗಳಿಗೆ ಕಾರಣ ಅವರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ವಿವರಿಸಿದ ನಿಜವಾದ ಜಿಹಾದನ್ನು ತಿರಸ್ಕರಿಸಿದುದಾಗಿದೆ. ಅವರು ಈ ಕಾಲಘಟ್ಟದಲ್ಲಿ ಆಗಮಿಸಿದ ಹಝ್ರತ್ ವಾಗ್ದತ್ತ ಮಸೀಹರ ಮುನ್ನೆಚ್ಚರಿಕೆಗಳನ್ನು ಲಕ್ಷಿಸಲಿಲ್ಲ. ಅವರು ಧರ್ಮದ ಹೆಸರಲ್ಲಿ ನಿರಪರಾಧಿ ಜನರ ರಕ್ತಪಾತ ಮಾಡುವುದಕ್ಕೆ ಹೊಣೆಯಾಗಿದ್ದಾರೆ.

## ಕೆಲವು ಕ್ರೈಸ್ತ ಬುದ್ಧಿಜೀವಿಗಳ ಮತ್ತು ಪಾಶ್ಚಿಮಾತ್ಯ ಕ್ರೈಸ್ತ ಲೇಖಕರ ಅತಿರೇಕ ವರ್ತನೆ

ಇಸ್ಲಾಮ್ ಭೀಕರವಾದಿ ಧರ್ಮವೆಂದೂ ಅದು ಜಿಹಾದ್ ಹೆಸರಿನಲ್ಲಿ ನಿರಪರಾಧಿಗಳ ರಕ್ತಪಾತ ಮಾಡಲು ಉಪದೇಶಿಸುತ್ತದೆ ಎಂದೂ ಧಾರ್ಮಿಕ ವ್ಯತ್ಯಾಸದ ಕಾರಣದಿಂದ ವಿದ್ರೋಹ ಮಾಡಲು ಪ್ರೋತ್ಸಾಹ ನೀಡುತ್ತದೆ ಎಂದೂ ಕೆಲವು ಕ್ರೈಸ್ತ ಧರ್ಮ ಪ್ರಚಾರಕರು ಮತ್ತು ಅವರ ಹಾಗೆ ಮನೋಭಾವ ಹೊಂದಿದ ಪಾಶ್ಚಿಮಾತ್ಯ ಕ್ರೈಸ್ತ ವಿದ್ವಾಂಸರು ಇಸ್ಲಾಮ್ ವಿರುದ್ಧ ಸುಳ್ಳು ಪ್ರಚಾರಗಳನ್ನು ಕೆಲವು ಸಾರಿ ಮಾಡುತ್ತಾರೆ. ಅವರು ತಮ್ಮ ಸುಳ್ಳು ವಾದವನ್ನು ಸಾಬೀತುಗೊಳಿಸಲು ಪವಿತ್ರ ಖುರ್‌ಆನಿನ ವಚನಗಳನ್ನು ಮತ್ತು ಸಾಬೀತಾಗಿರುವ ಚಾರಿತ್ರಿಕ ಘಟನೆಗಳನ್ನು ನಿರ್ಲಕ್ಷಿಸಿ ಎಲ್ಲಾ ರೀತಿಗಳಲ್ಲೂ ಜನರಿಗೆ ತಪ್ಪುಗ್ರಹಿಕೆಯಾಗುವಂತೆ ವಿವರಣೆಗಳನ್ನು ನೀಡುತ್ತಾರೆ. ಅವರು ಪವಿತ್ರ ಖುರ್‌ಆನಿನ ವಚನಗಳಿಗೆ ತಪ್ಪು ಅರ್ಥವನ್ನು ನೀಡಿ ಘೋರ ಅಪರಾಧ ಮಾಡುತ್ತಾರೆ. ಅವರು ತಮ್ಮ ಅಭಿಪ್ರಾಯಗಳಿಗೆ ಸಹಾಯಕವಾಗಿ ತಥಾಕಥಿತ ವಿದ್ವಾಂಸರ ವ್ಯಾಖ್ಯಾನಗಳನ್ನು ಉಲ್ಲೇಖಿಸುತ್ತಾರೆ. ಈ ತಥಾಕಥಿತ ವಿದ್ವಾಂಸರು ತಮ್ಮ ದುಷ್ಪ್ರೇರಕ ಆತ್ಮದ ಪ್ರೇರೇಪಣೆಗಳಿಗೆ ಈಡಾಗಿ ಅಧಿಕಾರಗಳಿಕೆಯನ್ನು ಹಂಬಲಿಸುತ್ತಾ ರಕ್ತಪಿಪಾಸು ಜಿಹಾದನ್ನು ಪ್ರತಿಪಾದಿಸುತ್ತಾರೆ. ಕ್ರೈಸ್ತ ಪ್ರಚಾರಕರ ಈ ಕ್ರಮವು ಸಾತ್ವಿಕತೆ ಮತ್ತು ನ್ಯಾಯಕ್ಕೆ ಖಂಡಿತವಾಗಿಯೂ ಅನುಯೋಜ್ಯವಾಗಿಲ್ಲ. ದಾರಿತಪ್ಪಿದ ಕೆಲವು ಜನರ ಕಪಟ ಕೃತ್ಯಗಳಿಗೆ ಇಸ್ಲಾಮ್ ಹೊಣೆಯಾಗಿದೆ ಎಂದು ಹೇಳುವುದು ಸರಿಯಾಗಲಾರದು. ಯೇಸುಕ್ರಿಸ್ತರು ಈ ಕೆಳಗಿನಂತೆ ಉಪದೇಶಿಸಿದುದು ನಮಗೆ ಗೊತ್ತಿದೆ:

"ನಾನು ನಿಮಗೆ ಹೇಳುವುದೇನೆಂದರೆ – ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು. ನಿನ್ನ ಸಂಗಡ ವ್ಯಾಜ್ಯಮಾಡಿ ನಿನ್ನ ಒಳಅಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು. ಒಬ್ಬನು – ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು. ನಿನ್ನನ್ನು ಬೇಡುವವನಿಗೆ ಕೊಡು. ನಿನ್ನಲ್ಲಿ ಕಡಾ ಈಸಿಕೊಳ್ಳ

ಬೇಕೆಂದು ಬಂದವನಿಗೆ ಮುಖ ತಿರುವಿಕೊಳ್ಳಬೇಡ. ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆ ಮಾಡಬೇಕೆಂದು ಹೇಳಿಯದೆ ಎಂಬುದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇ ನೆಂದರೆ – ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹಾಗೆ ಮಾಡಿದರೆ, ನೀವು ಪರಲೋಕ ದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಅವನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ."

(ಮತ್ತಾಯ 5:39-45)

ಆದರೆ ದೇವರ ಈ ಪ್ರವಾದಿಯ ಅನುಯಾಯಿಗಳೆಂದು ಹೇಳಿಕೊಳ್ಳುವವರು ಈ ಉಪದೇಶಕ್ಕೆ ಸಂಪೂರ್ಣ ವಿರೋಧವಾಗಿ ವರ್ತಿಸುವುದನ್ನು ನಾವು ಕಾಣುತ್ತೇವೆ. ಅವರು ತಮ್ಮ ವಿರೋಧಿಗಳನ್ನು ತಮ್ಮ ಹಿಂಸಾಚಾರಗಳಿಗೂ ದುರ್ವರ್ತನೆಗೂ ಗುರಿಯಾಗಿಸುತ್ತಾರೆ. ಅವರು ಅನ್ಯಾಯಭರಿತ ನ್ಯಾಯಬದ್ಧತೆಯನ್ನು ಪ್ರತಿಪಾದಿಸುತ್ತಾ ತಮ್ಮ ವಿರೋಧಿಗಳ ಮನೆಗಳನ್ನೂ ನೆಲವನ್ನೂ ನಾಶಮಾಡುತ್ತಾರೆ. ಅವರು ತಮ್ಮ ಯುದ್ಧ ಕೈದಿಗಳೊಂದಿಗೆ ಅನಾಗರಿಕವಾಗಿ ವರ್ತಿಸುತ್ತಾರೆ. ಈ ಜನರ ಕೆಟ್ಟ ವರ್ತನೆಗಳಿಗೆ ಯೇಸುಕ್ರಿಸ್ತರನ್ನು ಹೊಣೆಯನ್ನಾಗಿ ಮಾಡುವುದು ಸರಿಯಾಗುವುದೇ? ಅವರ ಪರಿಶುದ್ಧ ಉಪದೇಶಗಳನ್ನು ಉಲ್ಲೇಖಿಸಿ ಈ ಜನರ ಕೃತ್ಯಗಳನ್ನು ನ್ಯಾಯೀಕರಿಸಲು ಸಾಧ್ಯವೇ? ಇದೇ ರೀತಿ ತಥಾಕಥಿತ ಮುಸ್ಲಿಮರ ಭೀಕರ ಕೃತ್ಯಗಳಿಗೆ ಇಸ್ಲಾಮನ್ನೂ ಮುಹಮ್ಮದ್ ಪೈಗಂಬರರನ್ನೂ(ಸ) ಹೊಣೆಯನ್ನಾಗಿ ಮಾಡುವುದು ಸರಿಯಾಗಲಾರದು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಭೀಕರ ಕೃತ್ಯಗಳನ್ನು ಖಂಡಿಸುತ್ತಿದ್ದರು. ಪವಿತ್ರ ಖುರ್‌ಆನ್ ಹಲವು ಕಡೆಗಳಲ್ಲಿ ಮಹೋನ್ನತ ನಾದ ಅಲ್ಲಾಹನು ವಿದ್ರೋಹಕರ ಕೃತ್ಯಗಳನ್ನು ಇಷ್ಟಪಡುವುದಿಲ್ಲ ಎಂದು ಹೇಳಿದೆ. ಅನ್ಯಾಯಕರವಾಗಿ ವರ್ತಿಸುವವರನ್ನೂ ಅಸ್ತವ್ಯಸ್ತತೆ ಸೃಷ್ಟಿ ಸುವವರನ್ನೂ ಅಲ್ಲಾಹನು ಇಷ್ಟಪಡುವುದಿಲ್ಲ ಎಂದು ಸಹ ಪವಿತ್ರ ಖುರ್‌ಆನ್ ಹೇಳುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಕಲ ಲೋಕಗಳಿಗೂ ಮಂಗಳದಾಯಕರಾಗಿದ್ದರು. ಅವರ ನುಡಿಮುತ್ತುಗಳು ಮತ್ತು ಅವರ ಪರಿಶುದ್ಧ ವರ್ತನೆಗಳ ವಿವರಗಳು ಅನೇಕ ಚಾರಿತ್ರಿಕ ಗ್ರಂಥಗಳಲ್ಲಿ ಉಲ್ಲೇಖವಾಗಿವೆ. ಅವರ ಕಠಿಣ ಶತ್ರುಗಳು ಅನುಭವಿಸುವ ನೋವು ಕೂಡ ಅವರನ್ನು ಅಸ್ವಸ್ಥರನ್ನಾಗಿ ಮಾಡುತ್ತಿತ್ತೆಂದು ಉಲ್ಲೇಖಿಸಲಾಗಿದೆ. ಅವರು ಮಾನವೀಯ ಸಹಾನುಭೂತಿ, ನ್ಯಾಯ ಮತ್ತು ಇತರ ಸಾತ್ವಿಕ ಗುಣಗಳನ್ನು ಅತ್ಯುತ್ಕೃಷ್ಟ ರೀತಿಯಲ್ಲಿ ಹೊಂದಿದ್ದರು.

ಪೂರ್ವಗ್ರಹ ಪೀಡಿತರಾಗದ ಅನೇಕ ಪಾಶ್ಚಿಮಾತ್ಯ ಬುದ್ಧಿಜೀವಿಗಳು ಮತ್ತು ಸಂಶೋಧಕರು ಇಸ್ಲಾಮಿನ ಉಪದೇಶಗಳ ಶ್ರೇಷ್ಠತೆಯ ಬಗ್ಗೆ ಮತ್ತು ಹಝ್ರತ್ ಪ್ರವಾದಿಯವರ ನುಡಿಮುತ್ತುಗಳ ಬುದ್ಧಿ ವೈಭವದ ಕುರಿತು ಮೆಚ್ಚುಗೆಯ ಮಾತುಗಳನ್ನು ಹೇಳಿ ಇಸ್ಲಾಮ್ ಶಾಂತಿಯ ಧರ್ಮವೆಂದು ಸಾಕ್ಷ್ಯ ಹೇಳಿರುವರು.

ಇಂದಿನ ಕಾಲದಲ್ಲಿ ಕೆಲವು ಕ್ರೈಸ್ತ ಸರಕಾರಗಳ ಅಧಿಕಾರಿಗಳು ಕೆಲವು ತಥಾಕಥಿತ ಮುಸ್ಲಿಮ್ ಭೀಕರವಾದಿಗಳ ಕೃತ್ಯಗಳನ್ನು ನೆವನವಾಗಿಟ್ಟುಕೊಂಡು ಮುಸ್ಲಿಮ್ ದೇಶಗಳ ಮೇಲೆ ಬಾಂಬ್‌ಗಳನ್ನು ಸುರಿಸುತ್ತಾರೆ. ಇಂತಹ ಕ್ರೈಸ್ತ ಅಧಿಕಾರಿಗಳು ಸಹ ಮನಸ್ಸಿಲ್ಲದ ಮನಸ್ಸಿನಿಂದ, ಜಿಹಾದಿನ ಹೆಸರಿನಲ್ಲಿ ನಡೆಸಲಾಗುತ್ತಿರುವ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳ ದುರ್ವ್ಯಾಖ್ಯಾನದಿಂದ ಸಂಭವಿಸುತ್ತವೆ ಎಂದು ಹೇಳುತ್ತಾರೆ. ಈ ಭೀಕರವಾದಿಗಳು ಇಸ್ಲಾಮಿಗೆ ಕೆಟ್ಟಹೆಸರು ತರುತ್ತಿದ್ದಾರೆಂದು ಸಹ ಅವರು ಹೇಳುತ್ತಾರೆ. ಮುಸ್ಲಿಮರಲ್ಲಿ ಬಹುತೇಕ ಜನರು ಶಾಂತಿಯನ್ನು ಬಯಸುವವರೂ ಸ್ನೇಹಸ್ವಭಾವವುಳ್ಳವರೂ ಭೀಕರ ಕೃತ್ಯಗಳನ್ನು ದ್ವೇಷಿಸುವವರೂ ತಿರಸ್ಕರಿಸುವವರೂ ಆಗಿದ್ದಾರೆಂದು ಸಹ ಅವರು ಹೇಳುತ್ತಾರೆ.

ಆದರೆ ಬೇರೆ ಕೆಲವು ಸಂದರ್ಭಗಳಲ್ಲಿ ಇದಕ್ಕೆ ವಿರುದ್ಧವಾದ ಪ್ರಚಾರವನ್ನು ಅವರು ನಡೆಸುತ್ತಾರೆ. ಇಸ್ಲಾಮ್ ವಾಸ್ತವಿಕವಾಗಿ ಹಿಂಸಾಚಾರಿ, ರಕ್ತಪಿಪಾಸು ಮತ್ತು ಶಾಂತಿಗೆ ವಿರುದ್ಧವಾದ ಧರ್ಮ ಎಂದು ಅವರು ಹೇಳುತ್ತಾರೆ. ಇಂತಹ ವರ್ತನೆ ಸಾತ್ವಿಕತೆ ಮತ್ತು ನ್ಯಾಯಕ್ಕೆ ಅನುಯೋಜ್ಯವಾಗಿಲ್ಲ ಮತ್ತು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಸಹಕಾರಿಯಾಗಲಾರದು.

## ಕ್ರೈಸ್ತ ಮತಪ್ರಚಾರಕರಿಗೆ ಮತ್ತು ಕ್ರೈಸ್ತರಾದ ಆಡಳಿತಗಾರರಿಗೆ ನೀಡಲಾದ ಉಪದೇಶ

ಒಂದು ನೂರು ವರ್ಷಗಳಿಗಿಂತಲೂ ಹಿಂದೆ ಹಝ್ರತ್ ವಾಗ್ದತ್ತ ಮಸೀಹ್(ಅ) ಕ್ರೈಸ್ತ ಜನರು ಮತ್ತು ಅವರ ಸರಕಾರದ ಆಡಳಿತಗಾರರು ನ್ಯಾಯಬದ್ಧವಾಗಿ ವರ್ತಿಸಬೇಕೆಂದೂ ರೊಚ್ಚಿಗೆಬ್ಬಿಸುವ ಕೃತ್ಯಗಳಿಂದ ದೂರಸರಿಯಬೇಕೆಂದೂ ಉಪದೇಶಿಸಿದ್ದರು. ಅವರು ಹೀಗೆ ಬರೆದರು:

"ನಾವು ಪದೇ ಪದೇ ಬರೆದಿದ್ದೇವೆ. ಇಸ್ಲಾಮ್ ಜಿಹಾದಿನ ಉಪದೇಶ ನೀಡುತ್ತಾ ಇಲ್ಲ. ಇದರ ಬಗ್ಗೆ ವಾಸ್ತವಿಕ ವಿಷಯವೇನೆಂದರೆ, ಆರಂಭದ ಕಾಲದಲ್ಲಿ ಶತ್ರುಗಳು ಇಸ್ಲಾಮನ್ನು ಖಡ್ಗಬಲದಿಂದ ತಡೆಗಟ್ಟಲು ಮತ್ತು ನಾಶಮಾಡಲು ಬಯಸಿದ್ದರು. ಆಗ ಇಸ್ಲಾಮ್ ಸ್ವಯಂ ರಕ್ಷಣೆಗೋಸ್ಕರ ಅವರ ವಿರುದ್ಧ ಖಡ್ಗವೆತ್ತಿತು. ಅಂತಹ ಶತ್ರುಗಳ ಬಗ್ಗೆ ಅವರು ಕೊಲ್ಲಲ್ಪಡಬೇಕು ಅಥವಾ ಮುಸ್ಲಿಮರಾಗಬೇಕು ಎಂದು ಆಜ್ಞಾಪಿಸಲಾಯಿತು. ಈ ಆಜ್ಞೆ ಆ ಕಾಲಕ್ಕೆ ಸೀಮಿತವಾಗಿತ್ತು. ಎಲ್ಲಾ ಕಾಲಗಳಿಗೂ ಅನ್ವಯಿಸುವ ಆಜ್ಞೆ ಅದಾಗಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲಘಟ್ಟದ ನಂತರ ತಪ್ಪುಗ್ರಹಿಕೆ ಯಿಂದ ಅಥವಾ ಸ್ವಾರ್ಥ ಲಾಭದ ಗಳಿಕೆಗಾಗಿ ದೊರೆಗಳು ಮಾಡಿದ ಕೃತ್ಯಗಳಿಗೆ ಇಸ್ಲಾಮ್ ಹೊಣೆಯಾಗಲಾರದು. ಈಗ ತಿಳಿಗೇಡಿಯಾದ ಯಾರಾದರೂ ಮುಸ್ಲಿಮರನ್ನು ವಂಚಿಸಲು ಜಿಹಾದನ್ನು ಪದೇ ಪದೇ ನೆನಪಿಸುತ್ತಾ ಇದ್ದರೆ ಅವನು ಅವರ ವಿಷಮಯ ಸ್ವಭಾವ ಗುಣಗಳನ್ನು ಉತ್ತೇಜಿಸಲು ಯತ್ನಿಸುತ್ತಾನೆ. ಕ್ರೈಸ್ತ ಪಾದರಿಗಳು ಚರಿತ್ರೆಯ ಘಟನೆಗಳನ್ನು ಪರಿಶೀಲಿಸಿ ಇಸ್ಲಾಮ್‌ನಲ್ಲಿ ಜನರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡುವ ಜಿಹಾದ್ ಇಲ್ಲ ಎಂದು ಹೇಳುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಪವಿತ್ರ ಖುರ್‌ಅನ್‌ನಲ್ಲಿ ಈ ವಚನವಿದೆ:

'ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ' (2:257)

"ಇಂತಹ ಉಪದೇಶ ನೀಡುವ ಗ್ರಂಥ ಜಿಹಾದನ್ನು ಬೋಧಿಸುತ್ತದೆ ಎಂದು ಹೇಳಲು ಸಾಧ್ಯವೇ? ನಾವು ಮೌಲವಿಗಳನ್ನು ಮಾತ್ರ ದೂರುವುದಾದರೂ ಏಕೆ? ಪಾದರಿಗಳ ವಿರುದ್ಧ ಸಹ ಇದೇ ದೂರು ನೀಡಬಹುದಾಗಿದೆ. ಪಾದರಿಗಳು ಸತ್ಯವಾದ ಮತ್ತು ಸರಕಾರದ ವ್ಯವಸ್ಥೆಗೆ ಲಾಭಕರವಾದ ಮಾರ್ಗವನ್ನು ಅವಲಂಬಿಸಲಿಲ್ಲ."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಆ ಕಾಲಘಟ್ಟದಲ್ಲಿ ಅಧಿಕಾರದಲ್ಲಿದ್ದ ಬ್ರಿಟಿಷ್ ಸರಕಾರವನ್ನು ಉದ್ದೇಶಿಸಿ ಹಝ್ರತ್ ವಾಗ್ದತ್ತ ಮಸೀಹ್ ಹೀಗೆ ಹೇಳಿದರು:

"ಸರಕಾರವು ಪಾದರಿಗಳ ಅಪಾಯಕರ ಸುಳ್ಳು ಪ್ರಚಾರಗಳನ್ನು ತಡೆಯುವುದು ಅವಶ್ಯಕವಾಗಿದೆ. ಅವರು ಮಾಡುವ ಸುಳ್ಳು ಪ್ರಚಾರದ ಪರಿಣಾಮ ಅಶಾಂತಿ ಮತ್ತು ವಿದ್ರೋಹವಾಗಿದೆ. ಈ ಪಾದರಿಗಳ ಅಪಪ್ರಚಾರದಿಂದ ಮುಸ್ಲಿಮರು ಎಂದೂ ಇಸ್ಲಾಮನ್ನು ಬಿಡಲಾರರು. ಆದರೆ ಅವರು ಜಿಹಾದ್ ಬಗ್ಗೆ ನಡೆಸುವ ಪ್ರಚಾರದಿಂದ ಮುಸ್ಲಿರು ನಿದ್ರೆಯಿಂದ ಎಚ್ಚೆತ್ತುಕೊಳ್ಳುವರು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಹಝ್ರತ್ ವಾಗ್ದತ್ತ ಮಸೀಹ್ ಹೀಗೆ ಪುನಃ ಬರೆದರು:

"ಸ್ವಲ್ಪ ಕಾಲಾವಧಿಗೆ ಈ ರೀತಿಯ ವಾಗ್ವಾದವನ್ನು ತಡೆಯಬೇಕು. ಒಂದು ವಿಭಾಗದವರು ಇನ್ನೊಂದು ವಿಭಾಗದವರನ್ನು ಟೀಕಿಸುವುದನ್ನು ತಡೆಗಟ್ಟಬೇಕು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್-ಝುಮೀಮ)

ಹಝ್ರತ್ ವಾಗ್ದತ್ತ ಮಸೀಹ್ ಹೀಗೆ ಸಹ ಬರೆದರು:

"ನನ್ನ ಅಭಿಪ್ರಾಯದಲ್ಲಿ ಇತ್ತೀಚೆಗೆ ತುರ್ಕಿಯ ಉಸ್ಮಾನಿಯ ಸರಕಾರ ಕೈಗೊಂಡ ಕ್ರಮವು ಉತ್ತಮವಾಗಿದೆ. ಪ್ರತಿಯೊಂದು ಗುಂಪು ತನ್ನ ಬರಹಗಳಲ್ಲಿ ಮತ್ತು ಭಾಷಣಗಳಲ್ಲಿ ಅನ್ಯಧರ್ಮದವರನ್ನು ಬಹಿರಂಗವಾಗಿ ಅಥವಾ ಸೂಚ್ಯವಾಗಿ ಪ್ರಸ್ತಾಪಿಸುವುದನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕು. ಇದು ಕೆಲವು ವರ್ಷಗಳ ತನಕ ಪ್ರಯೋಗ ರೂಪದಲ್ಲಿ ಜಾರಿಯಲ್ಲಿರುವುದು. ಆದರೆ ಪ್ರತಿಯೊಂದು ಗುಂಪು ತನ್ನ ಸ್ವಂತ ಧರ್ಮದ ಒಳಿತುಗಳ ಕುರಿತು ವಿವರಿಸಬಹುದು. ಹೀಗೆ ಮಾಡುವುದರಿಂದ ಹೊಸ ದ್ವೇಷಗಳ ಬೀಜಬಿತ್ತುವಿಕೆ ನಿಂತು ಹೋಗುವುದು. ಹಳೆಯ ಕಥೆಗಳು ಮರೆತು ಹೋಗುವುವು. ಜನರು ಪ್ರೀತಿ ಮತ್ತು ಸೌಹಾರ್ದ ಕಡೆಗೆ ಮರಳುವರು. ಸಮುದಾಯಗಳ ಮಧ್ಯೆ ಇಷ್ಟು ಪರಸ್ಪರ ಪ್ರೀತಿ ವಿಶ್ವಾಸಗಳು ಇವೆ ಎಂದು ಗಡಿನಾಡಿನ ಅನಾಗರಿಕ ಜನರು ಅರಿತಾಗ ಅವರು ಪ್ರಭಾವಿತರಾಗುವರು. ಮುಸ್ಲಿಮರು ತಮ್ಮ ಸಹೋದರರನ್ನು ಸಹಾನುಭೂತಿಯಿಂದ ಕಾಣುವ ಹಾಗೆ ಕ್ರೈಸ್ತಧರ್ಮೀಯರನ್ನೂ ಸಹಾನುಭೂತಿಯಿಂದ ಕಾಣುವರು."

"ನಾನು ಸರಕಾರದ ಬಹುಮಾನ್ಯರೊಂದಿಗೆ ಅಪೇಕ್ಷಿಸುವುದೇನೆಂದರೆ, ಅನ್ಯಮತಗಳನ್ನು ಆಕ್ರಮಿಸುವುದನ್ನು ಐದು ವರ್ಷಗಳ ಕಾಲ ನಿಷಿದ್ಧಗೊಳಿಸಬೇಕು. ದೇಶದಲ್ಲಿ ಕಲಹಗಳು ವರ್ಧಿಸುತ್ತಾ ಇವೆ. ವಿವಿಧ ಧರ್ಮಕ್ಕೆ ಸೇರಿದವರ ಸ್ನೇಹಭರಿತ ಸಂದರ್ಶನಗಳು ಕೊನೆಗೊಂಡಿವೆ. ಕೆಲವು ಸಾರಿ ಒಂದು ಗುಂಪನ್ನು ತನ್ನ ಅಜ್ಞಾನದ ಕಾರಣದಿಂದ ಇನ್ನೊಂದು ಗುಂಪು ಆಕ್ಷೇಪಿಸುತ್ತದೆ. ಆ ಆಕ್ಷೇಪ ವಾಸ್ತವಿಕವಾಗಿ ಸರಿಯಾಗಿರುವುದಿಲ್ಲ. ಹೃದಯಗಳಿಗೆ ನೋವುಂಟಾಗಿ ಕೆಲವು ಸಾರಿ ಗಲಭೆಗೊಂದಲಗಳು ಉಂಟಾಗುತ್ತವೆ. ಉದಾಹರಣೆಗೆ, ಮುಸ್ಲಿಮರ ವಿರುದ್ಧ ಜಿಹಾದ್ ಬಗ್ಗೆ ಆಕ್ಷೇಪಿಸಲಾಗುತ್ತಿದೆ. ಕೆಲವು ಸಾರಿ ಆಕ್ಷೇಪಗಳು ಹಳೆಯ ನೆನಪುಗಳು ಮರುಕಳಿಸುವಂತೆ ಮಾಡುತ್ತವೆ ಮತ್ತು ಗಲಭೆ ಗೊಂದಲಗಳನ್ನು ಬಡಿದೆಬ್ಬಿಸುತ್ತವೆ. ನಮ್ಮ ಸರಕಾರ ಐದು ವರ್ಷಗಳ ಕಾಲ ಹೀಗೆ ಕಾನೂನು ಕಾಯಿದೆ ಜಾರಿಗೊಳಿಸಬೇಕು:

1) ಎಲ್ಲಾ ಪಂಗಡಗಳು-ಪಾದರಿಗಳು ಸಹಿತ ಅನ್ಯಧರ್ಮದವರನ್ನು ಆಕ್ರಮಿಸುವುದನ್ನು ತಡೆಗಟ್ಟಬೇಕು.

2) ಪ್ರೀತಿ ಮತ್ತು ಸುಸ್ವಭಾವದಿಂದ ಪರಸ್ಪರ ಭೇಟಿಯಾಗಬೇಕು.

3) ಪ್ರತಿಯೊಂದು ಗುಂಪು ತನ್ನ ಧರ್ಮದ ಉತ್ತಮ ಗುಣಗಳನ್ನು ಮಾತ್ರ ವಿವರಿಸಬೇಕು.

"ಹೀಗೆ ಮಾಡಿದರೆ ಒಡಕು ಮತ್ತು ದ್ವೇಷದ ವಿಷಕರವಾದ ಗಿಡವು ಒಳಗಿಂದೊಳಗೆ ಬೆಳವಣಿಗೆ ಹೊಂದುತ್ತಾ ಇದ್ದುದು ಅಪ್ರತ್ಯಕ್ಷವಾಗುವುದು. ಸರಕಾರದ ಇಂತಹ ಕ್ರಮವು ಮೆಚ್ಚುಗೆಗೆ ಪಾತ್ರವಾಗುವುದು ಮತ್ತು ಗಡಿನಾಡಿನ ಜನರ ಮೇಲೆ ನಿಸ್ಸಂದೇಹವಾಗಿ ಪ್ರಭಾವ ಬೀರುವುದು. ಶಾಂತಿ ಮತ್ತು ಸುವ್ಯವಸ್ಥೆಯು ಸ್ಥಾಪಿತವಾಗುವುದು."

"ಯಾವುದಾದರೂ ಧರ್ಮದಲ್ಲಿ ಸತ್ಯಾಂಶ ವಿದ್ದಲ್ಲಿ ಆ ಸತ್ಯಾಂಶವು ಪ್ರಕಟವಾಗಬೇಕು. ಅನ್ಯ ಧರ್ಮದ ಕುಂದು ಕೊರತೆಗಳನ್ನು ಎಣಿಸುತ್ತಾ ಇರಬಾರದು. ನನ್ನ ಸಲಹೆಯನ್ನು ಅಂಗೀಕರಿಸಿ ಕ್ರಮ ಕೈಗೊಳ್ಳುವುದು ಪ್ರತಿಯೊಬ್ಬ ಆಡಳಿತಗಾರನಿಗೆ ಸಾಧ್ಯವಾಗದು. ಅತ್ಯಂತ ಬುದ್ಧಿಶಾಲಿ ಆಡಳಿತಗಾರರು ನನ್ನ ಸಲಹೆಯನ್ನು ಮನವರಿಕೆ ಮಾಡಿಕೊಳ್ಳಬಲ್ಲರು."
(ಗವರ್ನ್‌ಮೆಂಟ್ ಅಂಗ್ರೇಝಿ ಔರ್ ಜಿಹಾದ್)

ದುರದೃಷ್ಟಕರವಾದ ವಿಷಯವೇನೆಂದರೆ, ಅವರ ದೂರದರ್ಶಿ ಸಲಹೆಯನ್ನು ಯಾರೂ ಕೃತಿರೂಪಕ್ಕೆ ಇಳಿಸಲಿಲ್ಲ. ಧಾರ್ಮಿಕ ಸಹನೆ, ಸಾಮಾಜಿಕ ಶಾಂತಿ ಮತ್ತು ಸ್ನೇಹ ಸಂಬಂಧವನ್ನು ವರ್ಧಿಸುವಂತಹ ಅವರ ಸಲಹೆಯನ್ನು ಕಡೆಗಣಿಸಿದುದರಿಂದ ಭೀಕರ ಕೃತ್ಯಗಳು ಇಂದು ನಿತ್ಯ ಸಂಭವಿಸುತ್ತವೆ. ಸಂಪೂರ್ಣ ಜಗತ್ತು ಒಡಕು ಮತ್ತು ಕಲಹದ

***(38ನೇ ಪುಟಕ್ಕೆ......)***

# ಬಾಡಿ ಹೋಗದಿರಲಿ ಆ ಮಸಣದ ಹೂವು !

☆ ಬಿ. ಎಸ್. ಮಂಜುನಾಥ್
bsmanjunath82@rediffmail.com

> *ನೋವು ಕೊಡುವ ಮುಳ್ಳಿನ ಮಧ್ಯೆಯೇ ಒಂದು ಸುಂದರ ಗುಲಾಬಿ ಅರಳಿ ನಿಲ್ಲುತ್ತದೆ. ಹಾಗೆಯೇ ನೋವನ್ನೇ ಉಸಿರಾಗಿಸಿಕೊಂಡಿರುವ ಪಾಕಿಸ್ಥಾನ ಎಂಬ ಪಾಪಿಗಳ ಆ ಸ್ಥಾನದಲ್ಲೂ ಗುಲಾಬಿಯಷ್ಟೇ ಸುಂದರವಾದಂತಹ ಒಂದು ಪಂಗಡವಿದೆ. ಹಾಗಂತ ಅವರೇನು ಮುಸ್ಲಿಮೇತರರಲ್ಲ. ಅವರೂ ಎಲ್ಲರಂತೆ ದಿನಕ್ಕೆ ಐದು ಬಾರಿ ನಮಾಜ್ ಮಾಡ್ತಾರೆ. ರಂಜಾನ್ ಆಚರಿಸುತ್ತಾರೆ. ಮೆಕ್ಕಾಗೆ ತೆರಳಿ ಪಾವನರಾಗ್ತಾರೆ. ಆದರೂ ಅವರು ಪಾಕ್ ನೆಲದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು. ಇದಕ್ಕೆ ಕಾರಣವೇನು ಗೊತ್ತೆ? ಅಹ್ಮದೀಯರು ಜಿಹಾದ್ ವಿರೋಧಿಗಳು, ರಕ್ತಕ್ರಾಂತಿ ನಂಬದವರು. ಹೀಗಾಗಿಯೇ ಇವರನ್ನು ಧರ್ಮವಿರೋಧಿ ಎಂಬ ಅಪವಾದ ಸುತ್ತಿಕೊಂಡಿದೆ. ಇವರ ವಿರುದ್ಧ ಹೊಸ ಹೊಸ ಕಾನೂನುಗಳೇ ಹುಟ್ಟಿಕೊಂಡಿವೆ. ಸರ್ಕಾರವೇ ಅಹ್ಮದೀಯರ ವಿರುದ್ಧ ಸಮರಕ್ಕೆ ಟೊಂಕ ಕಟ್ಟಿದೆ. ಪರಿಣಾಮ ಲಾಹೋರ್, ಇಸ್ಲಾಮಾಬಾದ್ ಬೀದಿಗಳಲ್ಲಿ ವಾರಕ್ಕೊಂದು ಹೆಣ ಉರುಳುತ್ತಿದೆ. ಅಹ್ಮದೀಯರ ಮಸೀದಿ ಸ್ಮಶಾನವಾಗುತ್ತಿದೆ....*

ಪಾಕಿಸ್ಥಾನ ಎಂಬ ನೆಲದಲ್ಲಿ ಮತಾಂಧರ ವಿರುದ್ಧ ನಿಂತು ಎದೆ ತಟ್ಟೋದುಂಟಾ? ಒಂದೊಮ್ಮೆ ಎದೆ ತಟ್ಟಿದರೂ ತಟ್ಟಿದ ಎದೆ ಉಳಿಯೋದುಂಟಾ? ಅಹ್ಮದೀಯ ಎಂಬ ಅಲ್ಪಸಂಖ್ಯಾತ ಜನಾಂಗವೊಂದು ದಶಕಗಳ ಹಿಂದೆ ಹೀಗೆ ಎದೆ ಸಟೆದು ನಿಂತಾಗ ಇಡೀ ಪಾಕಿಸ್ಥಾನವೇ ನಿಬ್ಬೆರಗಾಗಿತ್ತು. ಅಂದು ಇಡೀ ಊರಿಗೆ ಒಂದು ದಾರಿಯಾದರೆ, ಅಹ್ಮದೀಯರದ್ದೇ ಮತ್ತೊಂದು ದಾರಿ. ಸುನ್ನಿ, ಶಿಯಾ ಮುಸ್ಲಿಂ ಪಂಗಡಗಳು ಹಾವು ಮುಂಗುಸಿಯಂತೆ ಕಿತ್ತಾಡಿದರೂ ಅಹ್ಮದಿಯರ ವಿಚಾರಗಳು ಬಂದಾಗ ಈ ಶತ್ರುಗಳಿಬ್ಬರು ಒಂದಾಗುತ್ತಾರೆ. ಮನೆ, ಮಸೀದಿ ಎಂದೆನ್ನದೆ ಕಂಡ ಕಂಡಲ್ಲಿ ಅಹ್ಮದೀಯರನ್ನು ಹಿಡಿದು ಬಡಿದು ಹಾಕುತ್ತಾರೆ. ಮೊನ್ನೆ ಇಸ್ಲಾಮಾಬಾದ್‌ನಲ್ಲೂ ಮುಸ್ಲಿಂ ಮತಾಂಧರ ಬೆಂಬಲದಲ್ಲಿ ಅಹ್ಮದೀಯರ ಭಯಾನಕ ಬೇಟೆ ನಡೆದು ಹೋಯಿತು.

ಅಹ್ಮದಿಯರ 2 ಮಸೀದಿಗಳು 95 ಮಂದಿಯ ನೆತ್ತರ ಕೋಡಿಯಲ್ಲಿ ತೋಯ್ದು ಹೋಗಿತ್ತು.

ಉಗ್ರರ ಈ ಅಟ್ಟಹಾಸಕ್ಕೆ ವಿಶ್ವ ರಾಷ್ಟ್ರಗಳಿಂದ ವ್ಯಾಪಕ ಆಕ್ರೋಶ, ಅಸಮಾಧಾನದ ಟೀಕೆ ಕೇಳಿಬಂತು. ಆದರೂ ಅಹ್ಮದಿಗಳ ಆಕ್ರಂದನದ ಕೂಗು ಪಾಕ್ ಸರ್ಕಾರಕ್ಕೆ ಕೇಳಿಸಲೇ ಇಲ್ಲ. ಸತ್ತವರ ಅಂತ್ಯ ಸಂಸ್ಕಾರದಲ್ಲೂ ಪಾಕ್ ಸರ್ಕಾರ ಲಾಭ, ನಷ್ಟದ ಲೆಕ್ಕಾಚಾರ ಹಾಕಿತ್ತು. ಬಹುಸಂಖ್ಯಾತರ ಓಲೈಕೆಗಾಗಿ ಸರ್ಕಾರಕ್ಕೆ ಸರ್ಕಾರವೇ ಮೃತ ದೇಹಗಳ ಅಂತಿಮ ಸಂಸ್ಕಾರದಿಂದ ದೂರ ಉಳಿಯಿತು. ಇದಕ್ಕೂ ಮುನ್ನ ಇಸ್ಲಾಮಾಬಾದ್‌ನ ವಿವಿಧ ಆಸ್ಪತ್ರೆಗಳಲ್ಲಿದ್ದ ಗಾಯಾಳುಗಳಿಗೆ ಸರ್ಕಾರದ ಸಚಿವರು, ಗಣ್ಯರಿಂದ ಸಾಂತ್ವನ ದೊರೆತಿತ್ತು. ಖಂಡನಾ ಹೇಳಿಕೆಗಳು ಪುಂಕಾನು ಪುಂಕವಾಗಿ ಹೊರಬಿದ್ದಿದ್ದವು. ಆದರೆ ಇದು ನಾಲ್ಕು ಗೋಡೆಗಳ ನಡುವಿನ ನಾಟಕ ಎಂಬುದು ಬಯಲಾಗುವುದು ಬಹಳ ಸಮಯ ಹಿಡಿಯಲಿಲ್ಲ. ಸದ್ಯ ಅಹ್ಮದಿಗಳಿಗೀಗ ಪಾಕ್‌ನಲ್ಲಿ ಮುಸ್ಲಿಮೇತರರೆಂಬ ಸ್ಥಾನ ದೊರೆತಿದೆ. ಈ ವಿಚಾರ ಕಾನೂನು ಕಟಿಕಟೆಯನ್ನೂ ಹತ್ತಿದೆ. ಹೀಗಾಗಿ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡರೆ ತಮಗೆಲ್ಲಿ ಕಳಂಕ ಅಂಟುತ್ತದೆ ಎಂಬುದು ಇವರೆಲ್ಲರ ಭೀತಿ.

## ಹುತಾತ್ಮರೆಂದರೆ ಜೈಲು

ಪಾಕ್‌ನ ಕಾನೂನುಗಳ ಪೈಕಿ ಇಂದಿಗೂ ಹಲವು ಕಾನೂನುಗಳು ಅಹ್ಮದಿಯೇತರವಾಗಿವೆ. ಇವುಗಳ ಪ್ರಕಾರ ಮೃತ ಅಹ್ಮದಿಗಳನ್ನು ಹುತಾತ್ಮ ಎಂದು ಕರೆಯುವ ಹಾಗಿಲ್ಲ. ಒಂದೊಮ್ಮೆ ಕರೆದರೂ ಅಂತವರಿಗೆ ಮೂರು ವರ್ಷ ಜೈಲು ಶಿಕ್ಷೆ ಗ್ಯಾರೆಂಟಿ. ಇಂತಹ ಹತ್ತು, ಹಲವು ಧಾರ್ಮಿಕ ಸಂಗತಿಗಳಲ್ಲಿ ತೀರಾ ಸಂಕೀರ್ಣವಾಗಿವೆ. ಒಂದೆಡೆ ಅಹ್ಮದಿಗಳಿಗೆ ಧಾರ್ಮಿಕ ಬಂಡುಕೋರರ ಸ್ಥಾನ, ಮತ್ತೊಂದೆಡೆ, ಭಾರತ ಪ್ರೇಮಿಗಳೆಂಬ ಅಪವಾದ. ಒಟ್ಟಿನಲ್ಲಿ ತಾಯ್ನಾಡ ವಿರೋಧಿಗಳೆಂಬ ಹಣೆಪಟ್ಟಿ ಅಹ್ಮದಿಗಳ ಹಣೆಬರಹವನ್ನೇ ಬದಲಿಸಿಬಿಟ್ಟಿದೆ. ಅಷ್ಟಕ್ಕೂ ಈ ಅಹ್ಮದೀಯರ್‍ಯಾರು? ಇವರ ನೆರಳು ಕಂಡರೆ ಪಾಕಿಯರಿಗೇಕೆ ಅಷ್ಟು ಕೋಪ?

## ಹಳೇ ಬೇರು

ಅಹ್ಮದೀಯು ಜನಾಂಗ ಪಾಕಿಸ್ಥಾನದ ಹಳೇ ಬೇರು. ಮುಸ್ಲಿಮರಾದರೂ ಅದನ್ನು ಬಹಿರಂಗವಾಗಿ ಹೇಳಿಕೊಳ್ಳುವ ಪರಿಸ್ಥಿತಿಯಲ್ಲಿ ಅವರಿಲ್ಲ. ಪ್ರವಾದಿ ಮಹಮ್ಮದ್ ಇಸ್ಲಾಂ ಹುಟ್ಟುಹಾಕಿದ ಪ್ರವಾದಿ. ಅವರೇ ಅಂತಿಮ ಎಂಬ ಭಾವನೆ ಇಸ್ಲಾಂನದು. ಆದರೆ ಅಹ್ಮದೀಯರಿಗೆ ಮಾತ್ರ ಮುಹಮ್ಮದರೇ ಭವಿಷ್ಯ ನುಡಿದ ಪ್ರಕಾರ ಅಲ್ಲಾಹನು ಕಳುಹಿಸಿದ್ದಾನೆನ್ನುವ ಹದರತ್ ಮಿರ್ಜಾ ಗುಲಾಮ್ ಅಹಮದ್ ಎಂಬ ಮಹಾಪುರುಷನ ಮೇಲೆ ವಿಶೇಷ ಗೌರವ, ಭಕ್ತಿ, ಧಾರ್ಮಿಕ ಸಂಘರ್ಷ, ಹಿಂಸೆ, ರಕ್ತಪಾತ ಆಕ್ಷೇಪಿಸುವ ಇವರು ನ್ಯಾಯ, ಶಾಂತಿ, ಧರ್ಮಕ್ಕೆ ತಲೆಬಾಗುತ್ತಾರೆ. ಹಾಗೆಯೇ ಆಧೂನೀಕರಣಕ್ಕೂ ಮನಸೋತಿದ್ದಾರೆ. ಹೀಗಾಗಿಯೇ ಧರ್ಮ, ಜಿಹಾದ್ ಎನ್ನುವವರಿಗೆ ಅಹ್ಮದೀಯರು ಧರ್ಮ ವಿರೋಧಿಗಳಾಗಿ ಕಾಣುತ್ತಾರೆ. ವಿಶ್ವದ ಬಹುತೇಕ ಮುಸ್ಲಿಂ ರಾಷ್ಟ್ರಗಳು ಇಂದಿಗೂ ಅಹ್ಮದೀಯರನ್ನು ಧರ್ಮ ವಿರೋಧಿಗಳೆಂದೇ ಪರಿಗಣಿಸಿವೆ. ಜತೆ ಜತೆಗೆ ಈ ಜನಾಂಗದ ವಿರುದ್ಧ ಭಯೋತ್ಪಾದನಾ ದಾಳಿಗೂ ಕುಮ್ಮಕ್ಕು ನೀಡುತ್ತಿವೆ.

## ನಿತ್ಯ ಹಿಂಸೆ

ಪಾಕಿಸ್ಥಾನದಲ್ಲಂತೂ ಅಹ್ಮದೀಯರಿಗೆ ಪ್ರತಿನಿತ್ಯವೂ ಹಿಂಸೆಯೇ. ಕಳೆದ ಆರು ದಶಕಗಳಿಂದ ಪಾಕ್‌ನಲ್ಲಿ ಬದುಕು ಕಂಡುಕೊಂಡಿರುವ ಅಹ್ಮದೀಯರ ಸಂಖ್ಯೆಯೀಗ ನಾಲ್ಕು ದಶಲಕ್ಷಕ್ಕೆ ಇಳಿದಿದೆ. ಮತಾಂಧರ ದೌರ್ಜನ್ಯ ಹೆಚ್ಚಾಗುತ್ತಿದ್ದಂತೆ ಅಹ್ಮದೀಯರು ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಗಳಿಗೆ ಹಾರುತ್ತಿದ್ದಾರೆ. ಆಧುನಿಕತೆಯ ಮಂತ್ರ ಜಪಿಸುತ್ತಾ ವಿದೇಶಗಳಲ್ಲೇ ಜೀವನ ಕಂಡುಕೊಂಡಿದ್ದಾರೆ.

## ಸಮಾನರಲ್ಲ

ಅಹ್ಮದೀಯರು ಪಾಕ್‌ನಲ್ಲಿ ಬಹುಸಂಖ್ಯಾತ ಮುಸ್ಲಿಮರಿಗೆ ಸಮಾನರಲ್ಲ. 1974ರಲ್ಲಿ ಪಾಕ್ ಸಂವಿಧಾನ ಜಾರಿಗೆ ತಂದ ಕೆಲವು ಕಾನೂನು ಅಧಿಕೃತವಾಗಿಯೇ ಅಹ್ಮದೀಯರಿಂದ ಮುಸ್ಲಿಂ ಸ್ಥಾನ ಕಿತ್ತುಕೊಂಡಿವೆ. ಪಾಕ್‌ನ ಧರ್ಮನಿಂದನೆ ವಿರೋಧಿ ಸುಗ್ರೀವಾಜ್ಞೆಗೂ ಕೂಡ ಅಹ್ಮದೀಯ ಮುಸ್ಲಿಮ್ ಸಮುದಾಯವೇ ಟಾರ್ಗೆಟ್.

1984ರಲ್ಲಿ ಪಾಕ್ ಸಂಸತ್ತು ಅಂಗೀಕರಿಸಿದ್ದ ಸುಗ್ರೀವಾಜ್ಞೆಯ ಸಾರ ಅಂದು ಅಹ್ಮದೀಯರನ್ನು ಬೆಚ್ಚಿ ಬೀಳಿಸಿತ್ತು. ಈ ಹೊಸ ಕಾನೂನಿನಲ್ಲಿ ಬಹಿರಂಗವಾಗಿ ಅಹ್ಮದೀಯರು ಧರ್ಮದ ಮೇಲಿನ ಶ್ರದ್ಧೆ, ನಂಬಿಕೆಯನ್ನು ಹೊರಹಾಕುವಂತಿಲ್ಲ. ಹಾಗೆಯೇ ಪ್ರಚಾರ

ಮಾಡುವಂತಿಲ್ಲ. ಬಹುಸಂಖ್ಯಾತ ಮಸೀದಿಗಳಲ್ಲಿ ಅಹ್ಮದೀಯರಿಗೆ ಪ್ರವೇಶ ನಿಷಿದ್ಧ. ಸಾರ್ವಜನಿಕವಾಗಿ ಪ್ರಾರ್ಥನೆ ಸಲ್ಲಿಸಿದ್ದಲ್ಲಿ ಶಿಕ್ಷೆ ತಪ್ಪಿದ್ದಲ್ಲ. ಸರ್ಕಾರ ಸೂಚಿಸಿದ ಸ್ಥಳದಲ್ಲಿ ಮಸೀದಿ ನಿರ್ಮಾಣಕ್ಕೆ ಅವಕಾಶ. ಅನ್ಯಧರ್ಮೀಯರ ಜತೆ ವಿವಾಹ ನಿಷಿದ್ಧ. ಬಹುಸಂಖ್ಯಾತರ ಮುಸ್ಲಿಂ ಸಭೆಯಲ್ಲಿ ಇಂದಿಗೂ ಇವರಿಗಿದೆ ಬಹಿಷ್ಕಾರ. ಇಂತಹ ಹತ್ತು ಹಲವು ಕಠಿಣ ಕಾನೂನು ನಿಬಂಧನೆಗಳು ಅಹ್ಮದೀಯರ ಕೈಯನ್ನು ಕಟ್ಟಿಹಾಕಿದೆ. ಒಂದೊಮ್ಮೆ ಈ ರೀತಿ ರಿವಾಜುಗಳನ್ನು ಉಲ್ಲಂಘಿಸಿದಲ್ಲಿ ಕನಿಷ್ಠ ದಂಡ ಕಟ್ಟುವ ಶಿಕ್ಷೆ. ಗರಿಷ್ಠವಾದಲ್ಲಿ ಮರಣ ದಂಡನೆಯ ಪಾಶ. ಪಾಕಿ ಮುಸ್ಲಿಮರ ಕ್ರೌರ್ಯಕ್ಕೆ ಎಣೆಯೇ ಇಲ್ಲ.

### ಸರಳ, ಸಜ್ಜನರು

ಇತರೆಲ್ಲ ಮುಸ್ಲಿಂ ಜನಾಂಗಗಳಿಗೆ ಹೋಲಿಸಿದಲ್ಲಿ ಅಹ್ಮದಿಗಳು ಸರಳ, ಸಭ್ಯ, ಸಜ್ಜನರು. ಇವರು ಮನೆಯಿಂದ ಹೆಚ್ಚಾಗಿ ಹೊರಬರುವುದೇ ಕಡಿಮೆ. ಆಕ್ರೋಶವಿರಲಿ, ಅಸಮಾಧಾನವಿರಲಿ, ಇವರು ಪ್ರತಿಭಟನೆಗಾಗಿ ರಸ್ತೆಗಿಳಿಯುವುದು ಕಡಿಮೆಯೇ. ಒಂದೊಮ್ಮೆ ಇಳಿದರೂ, ಮೌನ ಮೆರವಣಿಗೆಗಷ್ಟೇ ಹೋರಾಟ ಸೀಮಿತ. ಆಸ್ತಿ ಪಾಸ್ತಿ ಹಾನಿಯಾಗಲಿ, ಜನಸಾಮಾನ್ಯರ ಮೇಲೆ ಹಲ್ಲೆ ನಡೆಸಿದಂತಹ ಘಟನೆಗಳು ಅಹ್ಮದೀಯರ ಇತಿಹಾಸದಲ್ಲೇ ಇಲ್ಲ. ತಮ್ಮ ಜನಾಂಗದ ನೂರಾರು ಅಮಾಯಕರನ್ನು ಉಗ್ರರು ಮಸೀದಿಯಲ್ಲಿ ಕೊಂದು ಹಾಕಿದರೂ ಇವರ ಸಹನೆಯ ಕಟ್ಟೆ ಒಡೆಯಲಿಲ್ಲ. ತಮ್ಮ ಬಂಧುಗಳ ಸಾವಿನ ಕುರಿತು ಪಾಕ್‌ನ ಅಹ್ಮದೀಯರು ತುಟಿ ಬಿಚ್ಚಿದಾಗ ಹೊರ ಬಿದ್ದ ಅಂತಿಮ ಮಾತಿಷ್ಟೇ: 'ಅಲ್ಲಾಹನೇ ಎಲ್ಲರನ್ನೂ ನೋಡಿಕೊಳ್ಳುತ್ತಾನೆ' ಎಂದು ಮೌನವಾಗೇ ಕಣ್ಣೀರು ಸುರಿಸುತ್ತಾರೆ.

ನಿತ್ಯ ರಕ್ತ ಹರಿಯುವ ಪಾಕಿಸ್ಥಾನ ಎಂಬ ಗಟಾರದಲ್ಲಿ ಅಹ್ಮದೀಯರು ಶಾಂತಿ, ಸಜ್ಜನಿಕೆಯ ಹೂವಾಗಿ ಅರಳಿದ್ದಾರೆ. ಆದರೆ ಈ ಮಸಣದ ಹೂವನ್ನು ಬಾಡಿ ಹೋಗದಂತೆ ಕಾಪಾಡುವವರ್‍ಯಾರು? ಬೇಲಿಯೇ ಎದ್ದು ಹೊಲ ಮೇಯುತ್ತಿರುವ ಪಾಕ್‌ನಲ್ಲಿ ಇದು ಸಾಧ್ಯವೇ?

– "ಹೊಸದಿಗಂತ" ದೈನಿಕ 04/06/2010

# ಪಾಕಿಸ್ತಾನಿ ಭೀಕರವಾದಕ್ಕೆ ಧಾರ್ಮಿಕ ಪಂಗಡಗಳ ವಿರುದ್ಧ ಹೊಸ ಆಯಾಮ

☆ ಅನಿತಾ ಜೋಶುವಾ

ಲಾಹೋರಿನ ಮೋಡೆಲ್ ಟೌನಿನ ಬೈತುಲ್ ನೂರ್ ಇಬಾದತ್ ಗಾಹ್ ಮತ್ತು ಗರ್‌ಹೀ ಶಾಹುನಲ್ಲಿರುವ ದಾರುಲ್ ಝಿಕ್ರ್ ಇಬಾದತ್ ಗಾಹ್‌ಗಳಿಂದ ಗುಂಡೇಟಿಗೆ ಗುರಿಯಾದ ಅಹ್ಮದಿಯರ ದೇಹಗಳನ್ನು ಹೊರತರುವ ದೃಶ್ಯಗಳನ್ನು ಟೆಲಿವಿಶನ್ ಕ್ಯಾಮೆರಾಗಳು ಪ್ರದರ್ಶಿಸುತ್ತಾ ಇದ್ದಾಗ ಅದು ನಿರ್ಲಕ್ಷಿಸಲಾರದಷ್ಟು ಘೋರವೂ ಕ್ರೌರ್ಯಭರಿತವೂ ಆಗಿತ್ತು. ಎರಡು ತಿಂಗಳ ನಂತರ ಭೀಕರತೆಯು ಲಾಹೋರನ್ನು ಆ ಶುಕ್ರವಾರ ಪುನಃ ಸಂದರ್ಶಿಸಿತು. ಎರಡು ಕಡೆಗಳಲ್ಲಿ ನಡೆದ ಭೀಕರ ಆಕ್ರಮಣಗಳಲ್ಲಿ 94 ಅಹ್ಮದಿಯರು ಮೃತರಾದಾಗ ಅಹ್ಮದಿಯರ ವಿಶ್ವಾಸಾದರ್ಶಗಳು ಬೆಳಕಿಗೆ ಬಂದುವು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೇಳುವ ಹಾಗೆ "ಪೋಲೀಸರ ತಡೆಯಿಲ್ಲದೆ ಪಾಕಿಸ್ತಾನದಲ್ಲಿ ಅನೇಕ ವರ್ಷಗಳಿಂದ ಮುಂದುವರಿದ ಹಿಂಸಾಚಾರ"ದ ಕಾರಣ ಅವರಲ್ಲಿ ಅನೇಕರು ತಮ್ಮ ವಿಶ್ವಾಸವನ್ನು ಬಹಿರಂಗಗೊಳಿಸದೆ ಇರಿಸಿದ್ದರು. ಕೊಲ್ಲಲ್ಪಟ್ಟ ಹೆಚ್ಚು ಪ್ರಖ್ಯಾತವಾದ ಹೆಸರುಗಳು ಬಹಿರಂಗಗೊಂಡಾಗ ಅನೇಕರು ಹೀಗೆ ಹೇಳಿದರು: "ಅವರು ಈ ವಾಸ್ತವಿಕಾಂಶವು ಬಹಿರಂಗಗೊಳ್ಳುವುದನ್ನು ಬಯಸಿರಲಿಲ್ಲ."

ಪಾಕಿಸ್ತಾನದಲ್ಲಿ ಅನೇಕ ದಶಕಗಳ ಕಾಲ ಅಹ್ಮದಿಯರು ತಮ್ಮ ವಿಶ್ವಾಸದೊಂದಿಗೆ ಜೀವಿಸಿದುದು ಹೀಗೆಯೇ ಆಗಿದೆ. ಹ್ಯೂಮನ್ ರೈಟ್ಸ್ ಕಮಿಶನ್ ಆಫ್ ಪಾಕಿಸ್ತಾನ್ (HRCP) ಪ್ರಕಾರ ಪಾಕಿಸ್ತಾನದಲ್ಲಿ ಹಿಂದೂಗಳ ಸಹಿತ ಅಲ್ಪ ಸಂಖ್ಯಾತ ಗುಂಪುಗಳಲ್ಲಿ ಅತ್ಯಂತ ಹೆಚ್ಚು ಆಕ್ರಮಿಸಲ್ಪಡಬಹುದಾದವರಲ್ಲಿ ಅಹ್ಮದಿಯರು ಸೇರಿದ್ದಾರೆ. ಶುಕ್ರವಾರ ನಡೆದ ಘಟನೆಯ ವಿರುದ್ಧ ತೀವ್ರ ಖಂಡನೆಯ ಕೊರತೆಯ ಕಾರಣ ಮತ್ತು 'ಅತ್ಯಂತ ನಿಷ್ಕರುಣ ಹಿಂಸಾಚಾರಗಳಿಗೆ ಬಲಿಯಾಗುವ' ಸಮುದಾಯ ಎಂದು ಮಾನವೀಯ ಹಕ್ಕುಗಳನ್ನು ಪ್ರತಿಪಾದಿಸುವ ಸಂಘಟನೆಗಳು ಹೆಸರಿಸುವ ಈ ಸಮುದಾಯದ ಮೇಲೆ ಅತ್ಯಂತ ದಾರುಣ ಆಕ್ರಮಣದ ವಿರುದ್ಧ ಸರಕಾರದ ಪ್ರತಿಕ್ರಿಯೆ ಬಹಳ ನಿರಾಶಾದಾಯಕವಾಗಿದೆ.

### ಮತಾಂಧತೆಯನ್ನು ಕಿತ್ತೆಸೆಯಬೇಕು

ಪಾಕಿಸ್ತಾನ್ ಮುಸ್ಲಿಮ್ ಲೀಗ್ (ನವಾಝ್) ಪಕ್ಷದ ಮಾಜಿ, ನೇಶನಲ್ ಅಸೆಂಬ್ಲಿ ಸದಸ್ಯ ಹೀಗೆ ಹೇಳಿದರು: "ಪಾಕಿಸ್ತಾನಿ ಭೀಕರವಾದಕ್ಕೆ ಧಾರ್ಮಿಕ ಪಂಗಡಗಳ ಕಡೆಗೆ ಹೊಸ ಆಯಾಮ ಪ್ರಾರಂಭವಾಗಿರುವುದರಿಂದ ಸರಕಾರ ಕಾಟಾಚಾರದ ಹೇಳಿಕೆಗೆ ತಮ್ಮ ಕೆಲಸವನ್ನು ಸೀಮಿತಗೊಳಿಸಬಾರದು. ಅದರಿಂದ ಕೊಲ್ಲಲ್ಪಟ್ಟವರ ಕುಟುಂಬಗಳಿಗೆ ಮತ್ತು ಇತರ ಅಹ್ಮದಿಯರಿಗೆ ಯಾವ ಸಮಾಧಾನವೂ ಲಭಿಸಲಾರದು. ವಿವೇಕ ರಹಿತ ಹಿಂಸಾಚಾರ ರೂಪದಲ್ಲಿ ಪ್ರಕಟವಾಗುತ್ತಿರುವ ಪರಮತ ವೈರವನ್ನು ಕಿತ್ತೆಸೆಯಲು ಹೆಚ್ಚು ಕಾರ್ಯಕ್ಷಮತೆಯಿಂದ ವರ್ತಿಸಬೇಕು."

ಹೀಗಿದ್ದರೂ, ಅಹ್ಮದಿಯರು ಲಾಹೋರಿನಲ್ಲಿ ಹೊಂದಿದ್ದ ಈ ಎರಡು ಆರಾಧನಾಲಯಗಳಲ್ಲಿ ಆಕ್ರಮಣಗಳು ನಡೆದ ನಂತರ 72 ತಾಸುಗಳು ದಾಟಿಹೋಗಿದ್ದರೂ ಕೇಂದ್ರ ಸರಕಾರವಾಗಲಿ, ಪ್ರಾಂತೀಯ ಸರಕಾರವಾಗಲಿ ಯಾವುದೇ ಪರಿಹಾರವನ್ನು ಘೋಷಿಸಿಲ್ಲ. ಅವರ ಮೌನವು ಕಿವಿಯನ್ನು ಕಿವುಡುಗೊಳಿಸುವಂತಹದ್ದಾಗಿದೆ.

ಪಾಕಿಸ್ತಾನದ ಪೀಪಲ್ಸ್ ಪಾರ್ಟಿ (PPP) ಸರಕಾರವು ಅವರ ಸ್ಥಾಪಕ ಝುಲ್‌ಫಿಕರ್ ಅಲಿ ಭುಟ್ಟೋ 'ಅಹ್ಮದಿಯರು ಅಮುಸ್ಲಿಮರು' ಎಂದು ಮಾಡಿದ ಘೋಷಣೆಯನ್ನು ರದ್ದುಗೊಳಿಸುವುದೆಂದು ಯಾರೂ ಪ್ರತೀಕ್ಷಿಸುವುದಿಲ್ಲವಾದರೂ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಒಂದು ರಾಜ್ಯಾಡಳಿತೆ ಅಹ್ಮದಿಯರಿಗೆ ಸುರಕ್ಷೆಯನ್ನು ನೀಡುವುದೆಂದು ಪ್ರತೀಕ್ಷಿಸಲಾಗಿದೆ. ಅಹ್ಮದಿಯರು ಭಾರತದ ಪಂಜಾಬಿನ ಖಾದಿಯಾನ್‌ನಲ್ಲಿದ್ದ ತಮ್ಮ ಕೇಂದ್ರವನ್ನು ವಿಭಜನೆಯ ನಂತರ ಧಾರ್ಮಿಕ ಹಿಂಸಾಚಾರಕ್ಕೆ ಗುರಿಯಾಗುವುದರಿಂದ ದೂರ ಸರಿಸಲ್ಪಡುವೆವು ಎಂಬ ಆಕಾಂಕ್ಷೆಯಿಂದ ಪಾಕಿಸ್ತಾನಕ್ಕೆ ವರ್ಗಾಯಿಸಿದ್ದರು.

ಅವರು ತಮ್ಮನ್ನು ಅಹ್ಮದಿಯರೆಂದು ಕರೆಯುತ್ತಾರಾದರೂ ಪಾಕಿಸ್ತಾನದಲ್ಲಿ ಅವರನ್ನು ಖಾದಿಯಾನಿಗಳೆಂದು ಕರೆಯಲಾಗುತ್ತಿದೆ. ಈ ಸಮುದಾಯವನ್ನು ಹೀನೈಸಲು ಹೀಗೆ ಹೇಳಲಾಗುತ್ತಿದೆ. ಧರ್ಮಭ್ರಷ್ಟರು ಎಂದು ಇತರ ಮುಸ್ಲಿಮರಿಂದ ಗಣಿಸಲ್ಪಡುವ ಇವರೊಂದಿಗಿರುವ ಮುಖ್ಯ ಅಭಿಪ್ರಾಯ ವ್ಯತ್ಯಾಸವೇನೆಂದರೆ, ಅವರು

ತಮ್ಮ ಜಮಾಅತಿನ ಸ್ಥಾಪಕರಾದ ಮಿರ್ಝಾ ಗುಲಾಮ್ ಅಹ್ಮದ್ ಅವರನ್ನು ಒಬ್ಬ ಪ್ರವಾದಿ ಎಂದು ನಂಬುತ್ತಾರೆ. ಮುಸ್ಲಿಮೇತರರ ವಿರುದ್ಧ ಜಿಹಾದ್ ನಡೆಸಬೇಕೆಂಬ ನಿಲುವನ್ನು ಅವರು ಅಂಗೀಕರಿಸುವುದಿಲ್ಲ. ಯುನಿವರ್ಸಿಟಿ ಆಫ್ ಮೇರಿಲ್ಯಾಂಡ್ ಅಲ್ಪ ಸಂಖ್ಯಾತರ ಬಗ್ಗೆ ನಡೆಸಿದ ಅಧ್ಯಯನದಲ್ಲಿ ಅಹ್ಮದಿಯರ ಬಗ್ಗೆ ಹೀಗೆ ಹೇಳಲಾಗಿದೆ: ಅಹ್ಮದಿಯರು ಇಸ್ಲಾಮ್ ಧರ್ಮದ ರಾಜಕೀಕರಣವನ್ನು ವಿರೋಧಿಸುತ್ತಾರೆ. ಆದುದರಿಂದ ಅವರು ಇಸ್ಲಾಮೀ ರಾಜ್ಯ ಎಂಬ ಕಲ್ಪನೆಯನ್ನು ಅಂಗೀಕರಿಸುವುದಿಲ್ಲ.

ಪಾಕಿಸ್ತಾನದಲ್ಲಿ ಅದರ ಸ್ಥಾಪನೆಯ ಕಾಲದಿಂದಲೇ ಅಹ್ಮದಿಯರು ವಿರೋಧವನ್ನು ಎದುರಿಸಬೇಕಾಯಿತು. ಪ್ರಥಮ ಸಂಘರ್ಷ 1953ರಲ್ಲಿ ಅವರನ್ನು ಮುಸ್ಲಿಮೇತರರೆಂದು ಘೋಷಿಸಬೇಕೆಂಬ ಚಳುವಳಿಯು ಗಲಭೆಗೊಂದಲಗಳಿಂದ ಲಾಹೋರಿನಲ್ಲಿ ನಡೆಯಿತು. ಹೊಸದಾಗಿ ರೂಪಿಸಲ್ಪಟ್ಟ ಆ ದೇಶದಲ್ಲಿ ಅಹ್ಮದಿಯರು ಅಭಿವೃದ್ಧಿ ಹೊಂದುತ್ತಿದ್ದುದರಿಂದ ಅವರ ವಿರುದ್ಧ ದ್ವೇಷಕ್ಕೆ ಕಾರಣವಾಗಿ ಅವರನ್ನು ಸರಕಾರಿ ಉದ್ಯೋಗಗಳಿಂದ ದೂರವಿರಿಸ ಬೇಕೆಂಬ ರಹಸ್ಯ ಬೇಡಿಕೆಗಳು ಪ್ರಾರಂಭವಾದುವು. ಅವರ ಆಕ್ರಮಣ ಗಳ ಪ್ರಥಮ ಗುರಿ ಚೌಧುರಿ ಮುಹಮ್ಮದ್ ಝುಫರುಲ್ಲಾ ಖಾನ ರಾಗಿದ್ದರು. ಪಾಕಿಸ್ತಾನದ ವಿದೇಶ ಮಂತ್ರಿಯಾಗಿದ್ದ ಅವರು ಅಹ್ಮದಿ ಯಾಗಿದ್ದರು. ಅವರು ಮುಸ್ಲಿಮ್ ಲೀಗಿನ ಪರವಾಗಿ ಬೌಂಡರಿ ಕಮಿಶನ್ ಮುಂದೆ ವಾದಿಸಿದ್ದರು.

1953ರ ಬಿರುಗಾಳಿಯು ಸೈನ್ಯವನ್ನು ಶಾಂತಿಸ್ಥಾಪನೆ ಮಾಡಲು ಕರೆಸಿದ ಕಾರಣ ಶಾಂತವಾಯಿತು. 1970ರಲ್ಲಿ ಝುಡ್. ಎ. ಭುಟ್ಟೋರಿಗೆ ಚುನಾವಣೆಯ ಕಾಲದಲ್ಲಿ ಅಹ್ಮದಿಯರು ಬೆಂಬಲ ನೀಡಿದರೂ ಅವರನ್ನು ಮುಸ್ಲಿಮೇತರರೆಂದು 1974ರಲ್ಲಿ ಸಂವಿಧಾನಕ್ಕೆ ಎರಡನೆಯ ತಿದ್ದುಪಡಿಯ ಮೂಲಕ ಆತ ಘೋಷಿಸುವುದನ್ನು ತಡೆಯಲಾಗಲಿಲ್ಲ. ಆ ಸಂವಿಧಾನ ತಿದ್ದುಪಡಿ ಅನೇಕ ಉದಾರ ಮನೋಭಾವದ ಜನರ ಪ್ರಕಾರ "ಅಸಹಿಷ್ಣುತೆ ಮತ್ತು ಧಾರ್ಮಿಕ ನಿರಂಕುಶಾಧಿಕಾರಕ್ಕೆ" ಅಸ್ತಿಭಾರ ಹಾಕಿತು.

ಝಿಯಾಉಲ್‌ಹಖ್ ಕಾಲದಲ್ಲಿ ನಡೆದ ಇಸ್ಲಾಮೀಕರಣವು ಅಹ್ಮದಿಯರಿಗೆ ಶಾರೀರಿಕವಾಗಿ ಹೊಡೆತ ನೀಡಿತು. ಅವರಿಗೆ ಪ್ರಚಾರ ಸ್ವಾತಂತ್ರ್ಯ ನಿಷಿದ್ಧಗೊಳಿಸಲಾಯಿತು. ಅವರು ತಮ್ಮ ಆರಾಧನಾ ಲಯಗಳನ್ನು ಮಸ್‌ಜಿದ್ ಎಂದು ಕರೆಯುವ ಹಾಗಿಲ್ಲ. ಅಝಾನ್ ಕರೆ ನೀಡುವುದನ್ನು ತಡೆಯಲಾಯಿತು. ಅವರ ಆರಾಧನಾ ಯಲಯಗಳನ್ನು ಇಬಾದತ್‌ಗಾಹ್ ಎಂದು ಕರೆಯಲಾಯಿತು. ಅವರ ಮೃತ ಶರೀರಗಳನ್ನು ದಫನು ಮಾಡಲು ಬೇರೆಯೇ ಖಬರಸ್ಥಾನಗಳಿವೆ. ಮುಸ್ಲಿಮೇತರರೆಂದು ಹೆಸರು ನೋಂದಣಿ ಮಾಡದವರನ್ನು ಮತದಾನದಿಂದ ತಡೆಯಲಾಯಿತು. ಝಿಯಾರ ಕಾಲದಲ್ಲಿ ಕಲಿಮ (ಇಸ್ಲಾಮಿನ ವಿಶ್ವಾಸದ ಮೂಲತತ್ವ) ಉಚ್ಚರಿಸಿದರೆ ಬಂಧಿಸಲಾಗುತ್ತಿತ್ತು. ಅವರು ಪ್ರಕಟಿಸಿದ ಪವಿತ್ರ ಖುರ್‌ಆನ್ ನಾಶಗೊಳಿಸಲ್ಪಟ್ಟಿತು. ಮದುವೆ ಆಮಂತ್ರಣ ಪತ್ರಿಕೆಗಳಲ್ಲಿ ಇಸ್ಲಾಮಿಕ ಸಾಂಕೇತಿಕ ಪದಗಳನ್ನು ಬಳಸುವುದರಿಂದ ತಡೆಯಲಾಯಿತು.

ಅನಂತರ ಅಹ್ಮದಿಯರು ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲೆಂಡ್ ಮತ್ತು ಕೆನಡಕ್ಕೆ ವಲಸೆ ಹೋಗತೊಡಗಿದರು. ಹೀಗಿದ್ದರೂ 40 ಲಕ್ಷ ಅಹ್ಮದಿಯರು ಪಾಕಿಸ್ತಾನದಲ್ಲಿದ್ದು ಲಾಹೋರಿನಲ್ಲಿ ಅವರ ಜನಸಂಖ್ಯೆ ಹೆಚ್ಚಿಗೆ ಇದೆ. ಝಿಯಾ ಆಡಳಿತೆ ಕೊನೆಗೊಂಡ ನಂತರ ಪಾಕಿಸ್ತಾನದಲ್ಲಿ ಅಹ್ಮದಿಯರ ಸ್ಥಿತಿ ಸುಧಾರಣೆಗೊಂಡರೂ ಉದ್ಯೋಗ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಅವರ ವಿರುದ್ಧ ಗುಪ್ತ ತಾರತಮ್ಯ ಮನೋಭಾವ ಮುಂದುವರಿಯಿತು. ಇದರ ಕಾರಣ ಅನೇಕ ಜನರು ತಮ್ಮ ವಿಶ್ವಾಸವನ್ನು ಮರೆಮಾಡಿಟ್ಟಿದ್ದರು. ಅವರಿಗೆ ತಮ್ಮ ಜಮಾಅತಿನ ಪತ್ರಿಕೆಯಾದ ಅಲ್‌ಫಝ್ಲ್‌ನಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಪ್ರಕಟಿಸಲು ಅನುಮತಿ ಇಂದಿಗೂ ಇಲ್ಲ. ಅಹ್ಮದಿಯರು ವಾಜಿಬುಲ್ ಖತ್‌ಲ್ (ವಧಾರ್ಹರು) ಆಗಿದ್ದಾರೆಂದು ಅಲ್ಲಿ ಗಣಿಸಲಾಗುತ್ತದೆ.

ಸಂವಿಧಾನಕ್ಕೆ ತಂದ 18ನೇ ತಿದ್ದುಪಡಿ ಝಿಯಾ ಮತ್ತು ಇತರ ಮಾರ್ಶಲ್ ಲಾ ಆಡಳಿತೆಗಾರರ ಕುರುಹುಗಳನ್ನು ಸರಿಪಡಿಸಲು ಪ್ರಯತ್ನಿಸಿದರೂ ಝಿಯಾ ರಚಿಸಿದ ಭಯಾನಕ ದೇವನಿಂದೆ ನಿಯಮ ಯಾವುದೇ ಬದಲಾವಣೆಗೊಳಗಾಗದೆ ಮುಂದುವರಿದಿದೆ. ಅದನ್ನು ಅಹ್ಮದಿಯರ ವಿರುದ್ಧ ಹೆಚ್ಚು ಹೆಚ್ಚಾಗಿ ಜಾರಿಗೊಳಿಸಲಾಗುತ್ತಿದೆ ಎಂದು ಇತ್ತೀಚೆಗೆ ಪಾಕಿಸ್ತಾನದ ಮಾನವ ಹಕ್ಕುಗಳ ಆಯೋಗ HRCP ವರದಿ ಸಲ್ಲಿಸಿದೆ. 1984ರಲ್ಲಿ ಇಪ್ಪತ್ತನೇ ಆರ್ಡಿನೆನ್ಸ್ ಜಾರಿಗೊಂಡ ನಂತರ ಕಳೆದ 25 ವರ್ಷಗಳಲ್ಲಿ ನೂರು ಅಹ್ಮದಿಯರನ್ನು ಉದ್ದೇಶ ಪೂರ್ವಕ ವಾಗಿ ಕೊಲ್ಲಲಾಗಿದೆ ಎಂದು ಆಯೋಗ ವರದಿ ಮಾಡಿದೆ.

ಕೆಲವೇ ಗಂಟೆಗಳ ಸಮಯದಲ್ಲಿ ಈ ಸಂಖ್ಯೆ ಶುಕ್ರವಾರ ಮಧ್ಯಾಹ್ನದ ಹೊತ್ತು ಇಮ್ಮಡಿಯಾಯಿತು.

- "The Hindu" Daily, 2/06/2010

# ಅವರ ಮಾನವ ಹಕ್ಕುಗಳಿಗೆ ಬೆಲೆಯಿಲ್ಲವೇ?

★ *ಹಮೀದ್ ಚೇನ್ನಮಂಗಲೂರ್*

ಇದೇ ಕಳೆದ ಮೇ 28ರಂದು ಪಾಕಿಸ್ತಾನದ ಲಾಹೋರ್‌ನಲ್ಲಿ ಅಹ್ಮದೀ ಮುಸ್ಲಿಮರ ಎರಡು ಮಸೀದಿಗಳಲ್ಲಿ ಪಾಕ್ ತಾಲಿಬಾನ್ ಮಾಡಿದ ಆಕ್ರಮಣಗಳಲ್ಲಿ ಸುಮಾರು ನೂರು ಮಂದಿ ಕೊಲ್ಲಲ್ಪಟ್ಟರು. ಇದು ಅಹ್ಮದಿಯರ ವಿರುದ್ಧ ಪಾಕಿಸ್ತಾನದಲ್ಲಿ ನಡೆಯುವ ಮೊದಲಿನ ಧಾಳಿಯಲ್ಲ. 1953ರಲ್ಲಿ ಅವರ ವಿರುದ್ಧ ಒಂದು ದೊಡ್ಡ ಗಲಭೆ ಉಂಟಾಗಿತ್ತು. ಜಮಾಅತೆ ಇಸ್ಲಾಮಿ ಸಹಿತವಿರುವ ಮುಖ್ಯಧಾರೆಯ ಮುಸ್ಲಿಂ ಪಂಗಡಗಳು ಒಟ್ಟು ಸೇರಿ ನಡೆಸಿದ ಆ ಗಲಭೆಯಲ್ಲಿ ಎರಡು ಸಾವಿರಕ್ಕೂ ಮಿಕ್ಕಿದ ಅಹ್ಮದೀ ಮುಸ್ಲಿಮರು ಕೊಲ್ಲಲ್ಪಟ್ಟರು ಎಂದು ಲೆಕ್ಕಹಾಕಲಾಗಿದೆ.

19ನೇ ಶತಮಾನದ ಕೊನೆಯಲ್ಲಿ ಪಂಜಾಬಿನ ಖಾದಿಯಾನ್ ನಲ್ಲಿ ಮಿರ್ಝಾ ಗುಲಾಂ ಅಹ್ಮದ್, ಪ್ರವಾದಿ ಪರಂಪರೆ ಕೊನೆ ಗೊಂಡಿಲ್ಲವೆಂಬ ತತ್ವ ಸಾರುತ್ತಾ ಹೊಸ ಮುಸ್ಲಿಂ ಪಂಗಡಕ್ಕೆ ರೂಪ ಕೊಟ್ಟರು. ಮುಹಮ್ಮದ್ ಅಂತ್ಯ ಪ್ರವಾದಿಯೆಂದು ನಂಬುವ ಮುಖ್ಯ ಧಾರಾ ಮುಸ್ಲಿಮರು ಅಂದಿನಿಂದಲೇ ಅಹ್ಮದೀ ಮುಸ್ಲಿಮರನ್ನು ಶತ್ರು ಗಳೆಂದು ವೀಕ್ಷಿಸುತ್ತಿದ್ದಾರೆ. ಪಾಕಿಸ್ತಾನ ಅಸ್ತಿತ್ವಕ್ಕೆ ಬಂದಾಗ ಪಂಜಾಬಿನ ಅಹ್ಮದೀ ಮುಸ್ಲಿಮರಲ್ಲಿ ಬಹುಸಂಖ್ಯಾತರು ಹೊಸ ರಾಷ್ಟ್ರದ ಪ್ರಜೆ ಗಳಾದರು. ಪಾಕಿಸ್ತಾನದ ಪ್ರಥಮ ವಿದೇಶ ಮಂತ್ರಿ ಚೌಧರಿ ಝುಫರುಲ್ಲಾ ಖಾನ್ ಅಹ್ಮದೀ ಮುಸ್ಲಿಮರಾಗಿದ್ದರು. ಅವರಂಥ ಬೇರೆ ಕೆಲವು ಅಹ್ಮದಿಯರು ಸಹ ಆದಿಕಾಲದಲ್ಲಿ ಪಾಕಿಸ್ತಾನದ ಉನ್ನತ ಸ್ಥಾನ ಗಳಲ್ಲಿದ್ದರು. ಅವರನ್ನೆಲ್ಲ ಕೆಳಗಿಳಿಸಬೇಕೆಂದೂ ಅಹ್ಮದೀ ಮುಸ್ಲಿಮರನ್ನು ಅಮುಸ್ಲಿಮರೆಂದು ಘೋಷಿಸಬೇಕೆಂದೂ 1953ರಲ್ಲಿ ಮುಖ್ಯಧಾರಾ ಮುಸ್ಲಿಮರು ಬೇಡಿಕೆ ಇಟ್ಟುಕೊಂಡು ಗಲಭೆ ಸೃಷ್ಟಿಸಿದ್ದರು.

ತಮ್ಮ ಗುರಿ ಸಾಧಿಸಲಿಕ್ಕೆ ಗಲಭೆಕೋರರಿಗೆ ಆಗ ಸಾಧ್ಯವಾಗದಿದ್ದರೂ ಅವರು ಸುಮ್ಮನಾಗಲಿಲ್ಲ. ಇತರರ ಧರ್ಮವಿಶ್ವಾಸದ ಸ್ವಾತಂತ್ರ್ಯವನ್ನು ಅಂಗೀಕರಿಸಿಕೊಡಲು ಸಿದ್ಧರಿಲ್ಲದ ಅವರು ಅಹ್ಮದೀ ಮುಸ್ಲಿಮರ ವಿರುದ್ಧ ಆಕ್ರಮಣ ಪ್ರಚಾರಗಳನ್ನು ಮುಂದುವರಿಸಿದರು. ಧಾರ್ಮಿಕ ಫಾಸಿಸಮಿನಲ್ಲಿ ಅಭಿರಮಿಸುವ ಜಮಾಅತೆ ಇಸ್ಲಾಮಿ ಆಚಾರ್ಯ ಮೌಲಾನ ಮೌದೂದಿ, ಅಹ್ಮದಿಯರು ಮುರ್ತದ್ದ್ (ಧರ್ಮ ತ್ಯಾಗಿ)ಗಳೆಂದೂ ಇಸ್ಲಾಮಿಕ ಕಾನೂನು ಪ್ರಕಾರ ಅವರು ವಧಾರ್ಹರೆಂದೂ ತೋರಿಸಿಕೊಟ್ಟರು. ಎರಡು ದಶಾಬ್ದಕ್ಕಿಂತ ಹೆಚ್ಚು ಕಾಲ ಮುಂದುವರಿದ ಈ ಯಕ್ಷಿಬೇಟೆ 1974ರಲ್ಲಿ ಸಂವಿಧಾನ ತಿದ್ದುಪಡಿ ತನಕ ತಲಪಿತು. ಮೌದೂದಿಯ ನಾಯಕತ್ವದಲ್ಲಿ ಬಿರುಸುಗೊಂಡ ಪ್ರಚಾರ ಯುದ್ಧದ ಮುಂದೆ ಮಂಡಿಯೂರಿ ಜುಲ್‌ಫಿಕರ್ ಅಲಿ ಭುಟ್ಟೋ ಸರಕಾರ ಅಹ್ಮದಿಯರನ್ನು ಇಸ್ಲಾಂ ಧರ್ಮದಿಂದ ಹೊರದೂಡಲು ತಕ್ಕುದಾದ ತಿದ್ದುಪಡಿಯನ್ನು ಸಂವಿಧಾನದಲ್ಲಿ ತಂದಿತು. ಮುಹಮ್ಮದ್ ಪೈಗಂಬರ್ ಅಂತ್ಯ ಪ್ರವಾದಿಯೆಂದು ನಂಬುವವರನ್ನು ಮಾತ್ರ ಮುಸ್ಲಿಮರನ್ನಾಗಿ ಪರಿಗಣಿಸಲಾಗುವುದು ಎಂದಾಗಿತ್ತು ತಿದ್ದುಪಡಿಯ ಸಾರ. ಅದಕ್ಕನುಸಾರ ಅಹ್ಮದೀ ಮುಸ್ಲಿಮರನ್ನು ಅಮುಸ್ಲಿಮರೆಂದು ಘೋಷಿಸುವ ಕಾನೂನು ಪಾರ್ಲಿಮೆಂಟ್‌ನಿಂದ ಅಂಗೀಕರಿಸಲ್ಪಟ್ಟಿತು.

ಮೌದೂದಿಸ್ಟರು ಒಳಗೊಂಡಿರುವ ಮುಖ್ಯಧಾರಾ ಮುಸ್ಲಿಮರು ಅದರಿಂದಲೂ ತೃಪ್ತರಾಗಲಿಲ್ಲ. ಇನ್ನೂ ಹೆಚ್ಚು ಕಠಿಣ ಕಾನೂನು ಮೂಲಕ ಅಹ್ಮದಿಯರನ್ನು ಸಂಪೂರ್ಣವಾಗಿ ಸದೆಬಡಿಯುವ ಕೃತ್ಯಗಳನ್ನು ಅವರು ಮಾಡಿದರು. ಧರ್ಮಾಂಧರನ್ನು ದಾರಿಬಿಟ್ಟು ಸಂಪ್ರೀತಗೊಳಿಸುವ ಜನರಲ್ ಝಿಯಾವುಲ್ ಹಖ್ ಪ್ರೆಸಿಡೆಂಟ್ ಆಗಿದ್ದಾಗ ಹೊಸ ಕಾನೂನುಗಳು ಜಾರಿಗೆ ಬಂದವು. 1984 ಎಪ್ರಿಲ್‌ನಲ್ಲಿ ಓರ್ಡಿನೆನ್ಸ್ ಮೂಲಕ ಜನರಲ್ ಹಖ್ ಅಹ್ಮದಿಯರನ್ನು ಅಕ್ಷರಾರ್ಥದಲ್ಲಿ ಗಳಚ್ಛೇದ ಮಾಡಿದರು. ಮುಸ್ಲಿಮರೆಂದು ಹೇಳಲಿಕ್ಕಾಗಲಿ ತಮ್ಮ ಧಾರ್ಮಿಕ ವಿಶ್ವಾಸಗಳನ್ನು ಪ್ರಚಾರ ಮಾಡಲಿಕ್ಕಾಗಲಿ ತಮ್ಮ ಮಸ್ಜಿದ್‌ಗಳನ್ನು ಮಸ್ಜಿದ್‌ಗಳೆಂದು ಕರೆಯಲಿಕ್ಕಾಗಲಿ ಬಾಂಗ್ ಕರೆ ನೀಡಲಿಕ್ಕಾಲಿ ಖುರ್‌ಆನ್ ವಚನಗಳನ್ನು ಉಲ್ಲೇಖಿಸಲಿಕ್ಕಾಗಲಿ ಹಕ್ಕನ್ನು ಅವರಿಂದ ಕಸಿಯಲಾಯಿತು.

ಇಂದು ಪಾಕಿಸ್ತಾನದಲ್ಲಿ 40 ಲಕ್ಷ ಅಹ್ಮದೀ ಮುಸ್ಲಿಮರಿದ್ದಾರೆ. ಆದರೆ ಮುಸ್ಲಿಮರಿಗೋಸ್ಕರ ಪ್ರತ್ಯೇಕವಾಗಿ ಸೃಷ್ಟಿಸಲ್ಪಟ್ಟ ರಾಷ್ಟ್ರದಲ್ಲಿ ಅವರು ಅಮುಸ್ಲಿಂ ಅಲ್ಪ ಸಂಖ್ಯಾತರೆಂದು ಘೋಷಿಸಲ್ಪಟ್ಟಿದ್ದಾರೆ. ಇತರ ಅಲ್ಪ ಸಂಖ್ಯಾತರಿಗೆ ಲಭಿಸುವ ಪರಿಗಣನೆ ಕೂಡ ಅವರಿಗೆ 'ಪರಿಶುದ್ಧ ನಾಡು' ಎಂಬರ್ಥವಿರುವ ಪಾಕಿಸ್ತಾನದಲ್ಲಿ ಲಭಿಸುವುದಿಲ್ಲ. ಜಮಾಅತೆ ಇಸ್ಲಾಮಿ, ಲಷ್ಕರೆ ತಯ್ಯಿಬ, ಜೈಶೆ ಮುಹಮ್ಮದ್, ಲಷ್ಕರೆ ಜಂಗ್ವಿ, ಸಿಪಾಹೆ ಸಹಾಬ, ಪಾಕ್ ತಾಲಿಬಾನ್ ಮೊದಲಾದ ಭೀಕರವಾದಿ ಸಂಘಟನೆಗಳು ಅವರನ್ನು ವಧಾರ್ಹರೆಂದು ವೀಕ್ಷಿಸುತ್ತವೆ. ಧರ್ಮ ವಿಶ್ವಾಸಿಗಳ ಹೆಸರಿನಲ್ಲಿ ಒಂದು ಜಾತಿಯವರನ್ನು ಮೂಲೋತ್ಪಾಟನೆ ಮಾಡಬೇಕೆಂದು ಪ್ರಚಾರ ಮಾಡಿ ಅವರ ವಿರುದ್ಧ ಆಕ್ರಮಣಗಳನ್ನು ಮಾಡಲು ಪ್ರೇರೇಪಿಸುವ ಸಂಘಟನೆಗಳ ವಿರುದ್ಧ ಏನಾದರೂ ಕ್ರಮ ಕೈಗೊಳ್ಳಲು ಪಾಕ್ ಸರಕಾರ ಮುಂದೆ ಬರುವುದಿಲ್ಲವೆಂಬುದು ಪರಿಸ್ಥಿತಿಯನ್ನು ಇನ್ನೂ ಹಾಳುಗೊಳಿಸುತ್ತದೆ. ಇಂದು ಲೋಕದಲ್ಲಿ ಅತ್ಯಂತ ಅಸುರಕ್ಷಿತ ಜನರು ಪಾಕಿಸ್ತಾನದಲ್ಲಿರುವ ಅಹ್ಮದೀ ಮುಸ್ಲಿಮರಾಗಿದ್ದಾರೆ. ಮಾನವ ಹಕ್ಕುಗಳು ಇಷ್ಟರ ಮಟ್ಟಿಗೆ ನಿಷೇಧಿಸಲ್ಪಟ್ಟ ಬೇರೊಂದು ಜನ ಸಮೂಹವನ್ನು ಕಾಣಲು ಪ್ರಯಾಸಕರ.

*ವಿಚಿತ್ರವೇನೆಂದರೆ, ಅಹ್ಮದೀ ಮುಸ್ಲಿಮರ ವಿರುದ್ಧ ಹಲವು ದಶವರ್ಷಗಳಿಂದ ನಡೆದು ಬರುತ್ತಿರುವ ಮಾನವ ಹಕ್ಕು ಉಲ್ಲಂಘನೆಗಳನ್ನು ಅರ್ಹ ರೀತಿಯಲ್ಲಿ ತೆರೆದು ತೋರಿಸಲು ನಮ್ಮ ನಾಡಿನಲ್ಲಿ ಹಲವರು ಮುಂದೆ ಬರುವುದಿಲ್ಲ. ಫೆಲಸ್ತೀನ್, ಚೆಚ್ನಿಯಾ, ಸಿಂಗಿಲಾಂಗಿಲ, ಕಾಶ್ಮೀರ್, ಬೋಸ್ನಿಯಾ, ಇರಾಖ್, ಅಫ್‌ಘಾನಿಸ್ತಾನ್, ಗ್ವಾಂಡನಾಮೋ ಮೊದಲಾದ ಕಡೆಗಳಲ್ಲಿ ನಡೆಯುವ ಮಾನವ ಹಕ್ಕು ಧ್ವಂಸನಗಳನ್ನು ಸಂಪೂರ್ಣವಾಗಿ ನ್ಯಾಯಯುತವಾಗಿ ತೋರಿಸಲಾಗಿದೆ.* ಅವುಗಳ ವಿರುದ್ಧ ಉಚ್ಚಸ್ವರದಲ್ಲಿ ಖಂಡಿಸಲು ನಮ್ಮ ಪ್ರಾಂತ್ಯದಲ್ಲೂ ಹೊರಗೂ ಹಲವು ಸಂಘಟನೆಗಳು ಮುಂದೆ ಬಂದಿವೆ. ಖಂಡಿತವಾಗಿಯೂ ಅದು ಅಗತ್ಯವೂ ಆಗಿದೆ. ಆದರೆ ಅಷ್ಟೇ ಗಂಭೀರವಾಗಿ, ಪಾಕಿಸ್ತಾನದಲ್ಲಿ ದಶಾಬ್ದಗಳಿಂದ ಅಹ್ಮದಿಯರು ಅನುಭವಿಸುವ ದುರಿತಗಳನ್ನೂ ಮಾನವ ಹಕ್ಕು ಉಲ್ಲಂಘನೆಗಳನ್ನೂ ವೀಕ್ಷಿಸಬೇಕಾಗಿದೆ. ಈ ನಾಡಿನ ಮುಸ್ಲಿಂ ಮುಖ್ಯಧಾರ ಸಂಘಟನೆಗಳಲ್ಲಿ ಯಾವುದು ಕೂಡ ನೆರೆರಾಷ್ಟ್ರದಲ್ಲಿ ಅಹ್ಮದಿಗಳ ಧಾರ್ಮಿಕ ಸ್ವಾತಂತ್ರ್ಯ ಧ್ವಂಸನದ ವಿರುದ್ಧವಾಗಿಯಾಗಲಿ, ಅವರ ವಿರುದ್ಧ ಹಲವು ವರ್ಷಗಳಿಂದ ಸರಕಾರ ಮತ್ತು ಸಿವಿಲ್ ಸಮೂಹದಲ್ಲಿ ನಡೆದು ಬರುತ್ತಿರುವ ನಿಂದನೀಯವೂ ಕ್ರೂರವೂ ಆದ ನರಬೇಟೆಗೆ ವಿರುದ್ಧವಾಗಿಯಾಗಲಿ ಎರಡು ಮಾತು ಆಡಲಿಕ್ಕೆ ಇಂದಿನ ತನಕ ಸಿದ್ಧರಾಗಿಲ್ಲ. ಅವರ ಮಾನವ ಹಕ್ಕುಗಳು ಸಂರಕ್ಷಿಸಲ್ಪಡಬೇಕಾಗಿಲ್ಲವೆಂದೇ? ತಾವು ಇಷ್ಟಪಡದ ಜನ ಸಮುದಾಯವನ್ನು ಯಾರು ಹೇಗೆ ಪೀಡಿಸಿದರೂ ತಮಗೆ ಆಕ್ಷೇಪವಿಲ್ಲವೆಂಬ ನಿಲುವು ಕೈಗೊಳ್ಳುವವರಿಗೆ, ಮಾನವ ಹಕ್ಕು ಕುರಿತು ಮಾತನಾಡುವ ಹಕ್ಕೇ ನಷ್ಟವಾಗುತ್ತದೆ.

("ಜನಶಕ್ತಿ" ಮಲಯಾಳಂ ವಾರಪತ್ರಿಕೆ,
ತಿರುವನಂತಪುರ ಜೂನ್ 19-26, 2010)

# ಭೀಕರ ತಾಂಡವದ ಮುಂದೆ ಅಹ್ಮದೀ ಯುವಕರ ಧೀರತೆ

ಲಾಹೋರಿನ ಮಾಡೆಲ್ ಟೌನಿನ ಬೈತುನ್ನೂರ್‌ನಲ್ಲಿ ಘಟಿಸಿದ ಉಗ್ರರ ಭಯಾನಕವಾದ ಆಕ್ರಮಣಾ ವೇಳೆಯಲ್ಲಿ ಅಹ್ಮದಿಯಾ ಯುವಜನ ಸಂಘಟನೆಯಾದ "ಖುದ್ದಾಮುಲ್ ಅಹ್ಮದಿಯಾ" ಸದಸ್ಯರಾದ ಇಬ್ಬರು ಯುವಕರು ತೋರಿಸಿದ ಧೀರತೆ ವಿಸ್ಮಯಕರವಾಗಿದೆ. ಮಸೀದಿಯೊಳಗೆ ನುಗ್ಗಿ ದುಷ್ಕೃತ್ಯದಲ್ಲಿ ತೊಡಗಿದ ಭಯೋತ್ಪಾದಕನನ್ನು ಇವರು ಸಾಹಸಿಕವಾಗಿ ಸೆರೆಹಿಡಿದರು. ಭಯೋತ್ಪಾದಕರನ್ನು ಸೆರೆಹಿಡಿಯುವ ಪ್ರಯತ್ನದಲ್ಲಿ ಅವರ ಆತ್ಮಹತ್ಯಾ ಜ್ಯಾಕೆಟ್ ಸ್ಫೋಟಿಸಿ ಹುತಾತ್ಮರಾದ ಯುವಕರೂ ಇದ್ದರು. ಆ ಸಾಹಸ ಕಾರ್ಯ ಇಪ್ಪತ್ತು ವರ್ಷ ಪ್ರಾಯದ ನಬಿಲ್ ಮತ್ತು ಇಪ್ಪತ್ತೊಂದು ವರ್ಷ ಪ್ರಾಯದ ಬಿಲಾಲ್ ವಿವರಿಸುತ್ತಾರೆ.

ನಬಿಲ್ ವಿವರಿಸುತ್ತಾರೆ: ಮಧ್ಯಾಹ್ನ 1.30ಕ್ಕೆ ಜುಮಾ ನಮಾಝಿಗೆ ನಾನು ಮಸೀದಿ ಪ್ರವೇಶಿಸಿದ್ದೆ. 1.45ಕ್ಕೆ ಜನರು ಮಸೀದಿಯಲ್ಲಿ ತುಂಬಿದರು. ಆಗ ಮೊದಲ ಗುಂಡಿನ ಶಬ್ದ ಕೇಳಿಸಿತು. ನಾನು ತಿರುಗಿ ನೋಡಿದಾಗ ಒಬ್ಬ ಭಯೋತ್ಪಾದಕನ ತಲೆಯ ಹಿಂಭಾಗ ಕಾಣಿಸಿತು. ಅವನು ಸೆಕ್ಯುರಿಟಿ ಗಾರ್ಡ್ ಅನ್‌ವರ್ ಸಾಹೇಬರಿಗೆ ಗುಂಡೆಸೆಯಲು ಪ್ರಯತ್ನಿಸುತ್ತಿದ್ದನು. ಅವನು ಮಸೀದಿಯೊಳಗೆ ಬರಲು ಪ್ರಯತ್ನಿಸುತ್ತಿದ್ದಾನೆಂದು ನಾನು ತಿಳಿದುಕೊಂಡೆನು. ನಾನು ಕೂಡಲೇ ಪ್ರವೇಶ ದ್ವಾರದ ಗೇಟ್ ಮುಚ್ಚಲು ಓಡಿದೆನು. ಅಷ್ಟರಲ್ಲಿ

ಅವನು ಮಸೀದಿ ಪ್ರವೇಶಿಸಿಬಿಟ್ಟಿದ್ದನು. ಮಸೀದಿಯ ಕೆಳ ಅಂತಸ್ತಿಗೆ ಹೋಗಿ ಪಾರಾಗಲು ಮಸೀದಿಯೊಳಗೆ ಇದ್ದವರೊಡನೆಲ್ಲ ನಾನು ಉಚ್ಚಸ್ವರದಲ್ಲಿ ಕೂಗಿ ಹೇಳಿದೆ. ವೃದ್ಧರಿಗೆ ಪಕ್ಕನೆ ಓಡಿ ಪಾರಾಗಲಿಕ್ಕೆ ಸಾಧ್ಯವಾಗಲಿಲ್ಲ.

ಇಪ್ಪತ್ತು ವರ್ಷ ಪ್ರಾಯ ತೋರುವ ಒಬ್ಬ ಭಯೋತ್ಪಾದಕ ಮಸೀದಿಯ ಮುಖ್ಯ ಹಾಲ್‌ಗೆ ಪ್ರವೇಶಿಸಿ ಸಿಕ್ಕಾಬಟ್ಟೆ ಗುಂಡೆಸೆಯಲು ತೊಡಗಿದನು. ಕೂಡಲೇ ಅವನ ಕೈಯಲ್ಲಿದ್ದ ಹ್ಯಾಂಡ್ ಗ್ರೆನೇಡ್ ಎಸೆದಾಗ ದೊಡ್ಡ ಒಂದು ಸ್ಫೋಟವಾಯಿತು. ಕೆಳ ಅಂತಸ್ತಿಗೆ ಹೋಗಲು ಸಾಧ್ಯವಾಗದೆ ಹಾಲ್‌ನಲ್ಲಿದ್ದ ಎಲ್ಲರಿಗೂ ಈ ಸ್ಫೋಟದಿಂದ ಘಾಸಿಯಾಯಿತು. ನಾವು ಅಡಗಿದ್ದ ಸ್ಥಳದಿಂದ ಮಸೀದಿಯ ಮುಖ್ಯ ಹಾಲ್‌ನಲ್ಲಿ ನಡೆಯುವ ಭೀಕರ ದೃಶ್ಯಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿತ್ತು. ಗ್ರೆನೇಡ್ ಸ್ಫೋಟಿಸಿದ ನಂತರ ಗಾಯಗೊಂಡ ಅಹ್ಮದಿಯರ ಮೇಲೆ ದುಷ್ಕರ್ಮಿಗಳು ನಿರಂತರವಾಗಿ ಗುಂಡೆಸೆದರು.

ನಬಿಲ್ ವಿವರಿಸುತ್ತಾರೆ: ಆಗ ಆ ದುಷ್ಕರ್ಮಿಯ ತಲೆಗೆ ಗಾಯವಾಗಿ ರಕ್ತ ಸುರಿಯುವುದು ನನಗೆ ಕಾಣಿಸುತ್ತಿತ್ತು. ಹನ್ನೆರಡು ಮಂದಿಯ ಮೇಲೆ ಗುಂಡೆಸೆದು ಅವನು ನೆಲಕ್ಕೆ ಬಿದ್ದನು. ಈ ಸಂದರ್ಭವನ್ನು ನಾನು ಉಪಯೋಗಿಸಿದೆನು. ಅವನನ್ನು ನೆಲಕ್ಕೆ ಅದುಮಿ ಹಿಡಿದೆನು. ದುಷ್ಕರ್ಮಿ ಗ್ರೆನೇಡ್ ಜೋಡಿಸಿದ್ದ ಆತ್ಮಾಹುತಿ ಜ್ಯಾಕೆಟ್ ಧರಿಸಿದ್ದನು. ಅವನ ಜ್ಯಾಕೆಟ್ ಬಿಚ್ಚಲು ಇಬ್ಬರು ನನಗೆ ನೆರವಾದರು. ಅವನನ್ನು ನಾನು ಬಲವಾಗಿ ಅದುಮಿಟ್ಟಿದ್ದೆನು. ನನ್ನ ಕಾಲು ಅವನ ಕೊರಳನ್ನು ಒತ್ತಿಟ್ಟ ಸ್ಥಿತಿಯಲ್ಲಿತ್ತು. ಆ ಸ್ಥಿತಿಯಲ್ಲಿ ಸುಮಾರು 35 ನಿಮಿಷಗಳ ಕಾಲ ನಾನು ಚಲಿಸಲು ಬಿಡದೆ ಅವನನ್ನು ಕಾಲಿನಡಿಯಲ್ಲಿಟ್ಟೆನು. ಆಗ ತನಗೆ ತುಂಬಾ ನೋವಾಗುತ್ತದೆಂದು ದುಷ್ಕರ್ಮಿ ಬೊಬ್ಬೆ ಹಾಕಿ ಹೇಳುತ್ತಿದ್ದನು. ನನ್ನ ಕಾಲನ್ನು ಅಲ್ಲಿಂದ ತೆಗೆಯಲು ಅವನು ಕೇಳಿದನು. ನಾನು ಕಾಲನ್ನು ಸ್ವಲ್ಪ ಸಡಿಲಿಸಿದೆನು. ನಾನು ಆಗ ಅವನೊಡನೆ, ನೀನು ಯಾಕೆ ನಿರಪರಾಧಿಗಳಾದವರನ್ನು ಕೊಲ್ಲುತ್ತೀ? ಎಂದು ಕೇಳಿದೆನು. ಆಗ ಅವನು, ಎಲ್ಲ ಅವಿಶ್ವಾಸಿಗಳನ್ನು ಪಾಕಿಸ್ತಾನದಿಂದ ನಿರ್ಮೂಲನ ಮಾಡುವುದು ತನ್ನ ಕರ್ತವ್ಯವೆಂದು ಹೇಳಿದನು. ಅವನ ಬಾಯಿಂದ ಇದನ್ನು ಕೇಳಿದಾಗ ನನಗೆ ಮತ್ತೆ ಮಾತನಾಡಲಾಗಲಿಲ್ಲ.

ಇಪ್ಪತ್ತು ವರ್ಷ ಪ್ರಾಯದ ಖುದ್ದಾಮುಲ್ ಅಹ್ಮದಿಯಾ ಸದಸ್ಯ ಬಿಲಾಲ್ ಮತ್ತೊಬ್ಬ ಭಯೋತ್ಪಾದಕನನ್ನು ಹಿಡಿಯಲು ನೆರವಾದರು. ಬಿಲಾಲ್ ಬೈತುನ್ನೂರ್‌ನ ಎರಡನೇ ಮಾಳಿಗೆಯಲ್ಲಿದ್ದರು. ಮಸೀದಿಯ ಮುಂದೆ ನಡೆಯುತ್ತಿರುವ ಘಟನೆಗಳನ್ನು ಅವರಿಗೆ ಸ್ಪಷ್ಟವಾಗಿ ಕಾಣಲು ಸಾಧ್ಯವಾಗಿತ್ತು. ಭಯೋತ್ಪಾದಕರು ಮಸೀದಿಯೊಳಗೆ ಓಡಿ ಬರುವುದನ್ನು ಅವರು ಕಂಡರು. ಅವರು ಈ ದೃಶ್ಯವನ್ನು ವಿವರಿಸುತ್ತಾರೆ:

"ಅವನು ಸುಮಾರು ಹದಿನೇಳು ವರ್ಷ ಪ್ರಾಯದ ಭಯೋತ್ಪಾದಕನಾಗಿದ್ದನು. ಆ ದುಷ್ಕರ್ಮಿ ಎಸೆದ ಹ್ಯಾಂಡ್ ಗ್ರೆನೇಡ್ ಸ್ಫೋಟಿಸಿ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಚೌಧರಿ ನಾಸಿರ್ ಅಹ್ಮದ್ ಸಾಹೇಬ್ ಅಸುನೀಗಿದರು. ನಂತರ ಅವನು ಮಸೀದಿಯ ಮುಂಬಾಗಿಲ ಕಡೆಗೆ ಓಡಿಬಂದನು. ಅವನು ಎರಡನೇ ಅಂತಸ್ತಿನ ಮೆಟ್ಟಿಲಿನ ಕಡೆಗೆ ಓಡಿ ಬಂದನು. ನಾನು ಒಂದೆಡೆ ಅಡಗಿದ್ದೆ. ದುಷ್ಕರ್ಮಿ ನಿರಂತರ ಗುಂಡು ಹಾರಿಸುತ್ತಿದ್ದನು. ಎಲ್ಲವೂ ಅಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಭಾಗ್ಯವಶಾತ್ ದುಷ್ಕರ್ಮಿ ನನ್ನನ್ನು ಕಾಣಲಿಲ್ಲ.

"ಹದಿನೇಳು ವರ್ಷ ವಯಸ್ಸಿನ ದುಷ್ಕರ್ಮಿ ಆಗ ಸಹ ಗುಂಡು ಹಾರಿಸುತ್ತಿದ್ದನು. ಹಿಂದೆ ನಿಂತಿದ್ದ ನಾನು ಇದೊಂದು ಸುಸಂದರ್ಭವೆಂದು ಬಗೆದೆನು. ನಾನು ಅವನ ಮೇಲೆ ಬಿದ್ದು ಹಿಡಿದುಕೊಂಡೆನು. ಸಹಾಯಕ್ಕಾಗಿ ಇತರರನ್ನು ಬೊಬ್ಬಿಟ್ಟು ಕರೆದೆನು. ಆ ದುಷ್ಕರ್ಮಿ ಸೆರೈಕಿ ಭಾಷೆಯಲ್ಲಿ ಮಾತನಾಡುತ್ತಿದ್ದನು. ಬಾಯಾರಿಕೆಯಿಂದ ಕಂಗಾಲಾಗಿದ್ದ ದುಷ್ಕರ್ಮಿ ಒಂದು ಗ್ಲಾಸ್ ನೀರಿಗೆ ಯಾಚಿಸುತ್ತಿದ್ದನು. ಇತರರ ಸಹಾಯದಿಂದ ನಾನು ಅವನ ಆತ್ಮಹತ್ಯಾ ಜ್ಯಾಕೆಟನ್ನು ಬಿಚ್ಚಿದೆನು. ನನಗೆ ಸ್ವಲ್ಪ ಸ್ವಲ್ಪ ಸೆರೈಕಿ ಭಾಷೆ ಗೊತ್ತು. ಅವನನ್ನು ಹಿಡಿದುದಕ್ಕೆ ಅವನು ನಮ್ಮನ್ನು ಬೈಯ್ಯುತ್ತಲೂ ಶಾಪಹಾಕುತ್ತಲೂ ಇದ್ದನು. ಪೊಲೀಸ್ ಅಧಿಕಾರಿಗಳು ಬರುವ ತನಕ ಸುಮಾರು ಅರ್ಧ ಗಂಟೆ ಕಾಲ ನಾನು ಅವನನ್ನು ಅದೇ ಸ್ಥಿತಿಯಲ್ಲಿ ಹಿಡಿದಿಟ್ಟಿದ್ದೆನು. ಆ ಬಳಿಕ ಅವನನ್ನು ಪೊಲೀಸ್ ಕೈಗೆ ಒಪ್ಪಿಸಲಾಯಿತು.

**(Express Tribune, Pakistan 29-5-2010)**

# ಲಾಹೋರ್ ಮಸೀದಿಯಲ್ಲಿ ಘಟಿಸಿದ್ದು

ಅಹ್ಮದಿಯರನ್ನು ತಹ್‌ರೀಕೆ ತಾಲಿಬಾನ್‌ನಿಂದ ಕಾಪಾಡಲು ಪಾಕಿಸ್ತಾನ್ ವಿಶೇಷ ತರಬೇತಿ ಪಡೆದ ಪೋಲೀಸರನ್ನು ಕಳುಹಿಸಿರಬಹುದೆಂದು ನೀವು ನಂಬುತ್ತೀರಾ? ಆದರೆ ಪಾಕಿಸ್ತಾನದಲ್ಲಿ ಘಟಿಸಿದ್ದು ಅದಲ್ಲ.

ಮಧ್ಯಾಹ್ನ ಒಂದು ಗಂಟೆ ಕಳೆದು ಮೂವತ್ತು ನಿಮಿಷವಾದಾಗ ಮಾಡೆಲ್ ಟೌನ್‌ನಲ್ಲಿರುವ ಮಸೀದಿಗೆ ಮೂವರು ಉಗ್ರರು ಪ್ರವೇಶಿಸಿದರು. ಆತ್ಮಾಹುತಿ ಜ್ಯಾಕೆಟ್ ಧರಿಸಿದ್ದ ಅವರ ಕೈಗಳಲ್ಲಿ ಮೆಶಿನ್ ಗನ್‌ಗಳಿದ್ದವು. ಮೊದಲೊಬ್ಬ ದುಷ್ಕರ್ಮಿ ಮಸೀದಿ ಪ್ರವೇಶಿಸಿದ ಕೂಡಲೇ ಇಮಾಮ್ ಮತ್ತು ಪ್ರೆಸಿಡೆಂಟ್ ಸಾಹೇಬರ ಮೇಲೆ ಗುಂಡು ಹಾರಿಸಿದನು. ಅವರಿಬ್ಬರೂ ಮುಂದಿನ ಸಾಲಿನಲ್ಲಿದ್ದರು. ಮೊದಲಿನ ಗುಂಡು ಸ್ಫೋಟಿಸಿದಾಗ ಜನರು ನಾಲ್ದೆಸೆಗಳಿಗೂ ಓಡಿ ಚದುರಿದರು.

ಆಗ ಅಲ್ಲಿ ಸೆಕ್ಯೂರಿಟಿ ಡ್ಯೂಟಿಯಲ್ಲಿ ಓರ್ವ ನಿವೃತ್ತ ಆರ್ಮಿ ಆಫೀಸರ್ ಇದ್ದರು. ಅವರ ಕೈಯಲ್ಲಿ ಒಂದು ಕೋವಿ ಮಾತ್ರವಿತ್ತು. ಅದರಿಂದ ಅವರು ದುಷ್ಕರ್ಮಿಗಳ ಕಡೆಗೆ ಗುಂಡು ಹೊಡೆದರು. ಅವರು ಪ್ರತಿಯಾಗಿ ಗುಂಡು ಹೊಡೆದು ಅವರನ್ನು ಕೊಂದರು. ಒಬ್ಬ ದುಷ್ಕರ್ಮಿ ಮಸೀದಿಯ ಮಿನಾರದ ಮೇಲೆ ಹತ್ತಿದನು. ಮನ ಬಂದಂತೆ ಗುಂಡು ಹಾರಿಸಿ ಜನರನ್ನು ಕೊಲ್ಲಲು ಅವನು ಮೇಲೆ ಹತ್ತಿದ್ದನು.

ನಾಸಿರ್ ಬಾಜ್‌ವಾ ಸಾಹೇಬ್ 50 ವರ್ಷ ಪ್ರಾಯದವರಾಗಿದ್ದರು. ಸಹಾಯಕ್ಕೆ ಆಯುಧವಿಲ್ಲವೆಂದೂ ಪೊಲೀಸ್ ಬರಲಿಕ್ಕಿಲ್ಲವೆಂದೂ ಅವರಿಗೆ ಗೊತ್ತಿತ್ತು. ದುಷ್ಕರ್ಮಿಯನ್ನು ಹಿಡಿಯಲು ಬಾಜ್‌ವಾ ಸಾಹೇಬ್ ನಿರ್ಧರಿಸಿದರು. ದುಷ್ಕರ್ಮಿಯ ಹಿಂದಿನಿಂದ ಅವರು ಅವನನ್ನು ಸಮೀಪಿಸಿದರು. ಮೆಷಿನ್ ಗನ್ ಹಿಡಿದು ಸುಮಾರು 100 ಅಡಿ ದೂರದಲ್ಲಿ ದುಷ್ಕರ್ಮಿ ಇದ್ದನು. ತಾನು ಹೇಗೆ ದುಷ್ಕರ್ಮಿಯ ಸಮೀಪಕ್ಕೆ ತಲಪಿದೆನೆಂದು ತನಗೆ ತಿಳಿಯದೆಂದು ಬಾಜ್‌ವಾ ಸಾಹೇಬ್ ಹೇಳಿದರು. ಅವರ ಕಾಲಿಗೆ ಮೊದಲೇ ಗಾಯವಾಗಿತ್ತು. ನಾನು ಹೇಗಾದರೂ ಮೆಲ್ಲ ಮೆಲ್ಲನೆ ಚಲಿಸಿ ದುಷ್ಕರ್ಮಿಯ ಸಮೀಪಕ್ಕೆ ಬಂದು ಅವನನ್ನು ಹಿಡಿದು ಅವನ ಮೇಲೇರಿ ಕುಳಿತೆನು. ಇತರ ಅಹ್ಮದಿಯರು ಸಹ ಅಷ್ಟರಲ್ಲಿ ಸಹಾಯಕ್ಕೆ ಬಂದಿದ್ದರು – ಬಾಜ್‌ವಾ

ಸಾಹೇಬ್ ಹೇಳಿದರು.

ದುಷ್ಕರ್ಮಿಗೆ, ನರಹತ್ಯೆ ಮುಂದುವರಿಸಲು ಸಾಧ್ಯವಿಲ್ಲವೆಂದು ಮನವರಿಕೆಯಾಯಿತು. ಅವನು ತನ್ನ ಆತ್ಮಹತ್ಯಾ ಜ್ಯಾಕೇಟ್‌ನ ಮುಂದೆ ಜೋಡಿಸಿದ್ದ ಗ್ರೆನೇಡ್‌ಗೆ ಕೈಹಾಕಿದನು. ಮಧ್ಯವಯಸ್ಕ ಬಾಜ್‌ವಾ ಸಾಹೇಬ್‌ರಿಗೆ ವಿಷಯ ಗೊತ್ತಾಯಿತು. ದುಷ್ಕರ್ಮಿ ಸ್ವಯಂ ಸ್ಫೋಟಿಸುವ ಪ್ರಯತ್ನದಲ್ಲಿದ್ದನು. ಅವರು ಅವನ ಕೈಯನ್ನು ಗ್ರೆನೇಡ್‌ನಿಂದ ಬಿಡಿಸಿದರು.

ಮೇಲೆ ಇದ್ದ ಬಂದೂಕುಧಾರಿಯಾದ ಉಗ್ರನ ಬಂದೂಕು ಪಕ್ಕನೆ ನಿಷ್ಕ್ರಿಯಗೊಂಡಿತು. ಈ ಸಂದರ್ಭವನ್ನು ಉಪಯೋಗಿಸಿ ಮೂವರು ಯುವಕರು ಅವನನ್ನು ದೂಡಿ ನೆಲಕ್ಕೆ ಬೀಳಿಸಿದರು. ತಾನು ಹಿಡಿಯಲ್ಪಟ್ಟಿದ್ದೇನೆಂದು ಅವನಿಗೆ ಮನವರಿಕೆಯಾಯಿತು. ನಿರ್ಭಾಗ್ಯಕರವಾಗಿ, ಅವನನ್ನು ಹಿಡಿದ ಯುವಕರಿಗೆ ಆತ್ಮಹತ್ಯಾ ಜ್ಯಾಕೇಟ್‌ನೊಳಗಿನ ಗ್ರೆನೇಡಿನ ಕುರಿತು ತಿಳಿದಿರಲಿಲ್ಲ. ದುಷ್ಕರ್ಮಿ ಗ್ರೆನೇಡಿನ ಪಿನ್ ಎಳೆದು ತೆಗೆಯುವುದರಲ್ಲಿ ಸಫಲನಾದನು. ಆ ಮೂವರು ಯುವಕರೂ ದುಷ್ಕರ್ಮಿಯೊಂದಿಗೆ ಸ್ಫೋಟನದಲ್ಲಿ ಹುತಾತ್ಮರಾದರು.

ಮಾಡೆಲ್ ಟೌನ್ ಮಸೀದಿಯ ಗುಂಡು ಹಾರಾಟ ಕಳೆದು 4 ಗಂಟೆಗಳ ನಂತರ ಕೂಡ ಪೋಲೀಸ್ ಮಸೀದಿಗೆ ತಲುಪಿರಲಿಲ್ಲ. ವಿಚಿತ್ರವೇನೆಂದರೆ ಪಾಕಿಸ್ತಾನದ ಯಾವುದೇ ಮಾಧ್ಯಮ ಅಹ್ಮದಿಯಾ ಮಸೀದಿಯನ್ನು 'ಮಸ್ಜಿದ್' ಎಂದು ಹೇಳುವುದಿಲ್ಲ. ಬದಲಿಗೆ, ಆರಾಧನಾಲಯ ಎಂದು ವಾರ್ತೆಗಳಲ್ಲೆಲ್ಲ ಹೇಳಲಾಗಿದೆ. ಮಾಧ್ಯಮಗಳು ಮುಖ್ಯ ವಾರ್ತೆಯಾಗಿ ಘಟನೆಯನ್ನು ವರದಿ ಮಾಡಿದ್ದರೂ ಅಹ್ಮದಿಯರೊಡನೆ ತೋರಿಸುವ ಪೂರ್ವಗ್ರಹ ಮತ್ತು ಪಕ್ಷಪಾತವನ್ನು ಇದು ಸೂಚಿಸುತ್ತದೆ. ಅದೇ ಪ್ರಕಾರ ಯಾವುದೇ ಮಾಧ್ಯಮ, ಅಹ್ಮದಿಯರು ಪ್ರಾರ್ಥಿಸುವಾಗ ಅಥವಾ ಜುಮಾ ನಮಾಝ್ ನಿರ್ವಹಿಸುವಾಗ ಆಕ್ರಮಣ ನಡೆಯಿತೆಂದು ಹೇಳಲಿಲ್ಲ; ಬರೆಯಲಿಲ್ಲ. ಇದು ಅಹ್ಮದಿಯೇತರ ಮುಸ್ಲಿಮರು ಉಗ್ರಗಾಮಿಗಳಿಗೆ ಹೆದರುತ್ತಾರೆ ಎಂದು ಸಾಬೀತುಪಡಿಸುತ್ತದೆ. ತಾಲಿಬಾನ್‌ಗೆ ಬೆಂಬಲ ನೀಡುವ ಸಂಘಟನೆಗಳು ಅಹ್ಮದಿಯರ ವಿರುದ್ಧ ಅತ್ಯಂತ ಹಿಂಸೆ ಪ್ರಚೋದಕ ಭಿತ್ತಿ ಪತ್ರಗಳನ್ನು ಪಾಕಿಸ್ತಾನದ ಹಲವೆಡೆಗಳಲ್ಲಿ ಹಚ್ಚಿವೆ ಎಂದು ಓರ್ವ ಅಹ್ಮದಿ ವಕ್ತಾರ ಹೇಳಿದರು.

**(Neighbour Newspaper.com)**

## ಲಾಹೋರ್‌ನಲ್ಲಿ ಎರಡು ಭೀಕರ ಆಕ್ರಮಣಗಳು

*("ಜಂಗ್" ಪತ್ರಿಕೆ ಪ್ರಕಟಿಸಿದ ಸಂಪಾದಕೀಯ)*

ಲಾಹೋರಿನಲ್ಲಿ ಶುಕ್ರವಾರದಂದು ಅತ್ಯಾಧುನಿಕ ಆಯುಧಗಳನ್ನು ಹೊಂದಿದ ಭೀಕರರು ಮಾಡೆಲ್ ಟೌನ್ ಮತ್ತು ಗಢೀ ಶಾಹೂ ಎಂಬ ಜನ ನಿಬಿಡ ಬಡಾವಣೆಗಳಲ್ಲಿರುವ ಖಾದಿಯಾನಿಗಳ ಆರಾಧನಾಲಯಗಳಲ್ಲಿ ಜನರು ಆರಾಧನೆಯಲ್ಲಿ ಮಗ್ನರಾಗಿದ್ದಾಗ ಅಚಾನಕವಾಗಿ ಆಕ್ರಮಣ ಮಾಡಿದರು. ಭೀಕರರು ಒಂದೇ ಸಮಯದಲ್ಲಿ ಎರಡು ಆರಾಧನಾಲಯಗಳನ್ನು ಪ್ರವೇಶಿಸಿ ಮುಖ್ಯ ಸ್ಥಳಗಳನ್ನು ವಶಪಡಿಸಿ ಗುಂಡು ಹಾರಿಸಲು ತೊಡಗಿದುದು ಮತ್ತು ಕೈಬಾಂಬುಗಳನ್ನು ಎಸೆಯಲು ಪ್ರಾರಂಭಿಸಿದುದರಿಂದ ಸ್ಪಷ್ಟವಾಗುವುದೇನೆಂದರೆ, ಅವರ ಈ ಕೃತ್ಯವು ಪೂರ್ಣ ಕಾರ್ಯಯೋಜನೆಯನ್ನು ರೂಪಿಸಿ ಪ್ರಾರಂಭಿಸಿದುದಾಗಿದೆ.

ಈ ಲೇಖನ ಬರೆಯುವುದರೊಳಗೆ ಲಭಿಸಿದ ವರದಿಗಳ ಪ್ರಕಾರ ಮಾಡೆಲ್ ಟೌನ್ ಮತ್ತು ಗಢೀ ಶಾಹುನಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ ಕನಿಷ್ಠ 57 ಮತ್ತು ಗಾಯಗೊಂಡವರ ಸಂಖ್ಯೆ 45 ಆಗಿದೆ. (ಈಗ ಮೃತರ ಸಂಖ್ಯೆ 86 ಮತ್ತು ಗಾಯಗೊಂಡವರ ಸಂಖ್ಯೆ ಸುಮಾರು 150–ಸಂ.) ಮಾಡೆಲ್ ಟೌನ್‌ನಲ್ಲಿ ಸೆರೆಹಿಡಿಯಲ್ಪಟ್ಟ ಒಬ್ಬ ಆತ್ಮಾಹತ್ಯಾ ದಾಳಿಕೋರನ ಜ್ಯಾಕೆಟನ್ನು ನಿಷ್ಕ್ರಿಯಗೊಳಿಸಲಾಗಿದೆ. ಒಬ್ಬ ದಾಳಿಕೋರನನ್ನು ಕೊಂದುದಾಗಿಯೂ ಮೂವರು ಸಂಶಯಾಸ್ಪದ ವ್ಯಕ್ತಿಗಳನ್ನು ಬಂಧಿಸಿದುದಾಗಿಯೂ ವರದಿಯಾಗಿದೆ. ಗಢೀ ಶಾಹೂನಲ್ಲಿ ಎಲೈಟ್ ಫೋರ್ಸ್‌ಗೆ ಸೇರಿದ ಕಮಾಂಡೋಗಳು ಆರಾಧನಾಲಯವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಭೀಕರರ ಬಂಧನಕ್ಕೆ ಅಧೀನರಾದವರನ್ನು ಬಿಡುಗಡೆಗೊಳಿಸಿದರು. ಪಂಜಾಬಿನ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಸ್ವತಃ ಹೋಗಿ ಭದ್ರತಾ ಸಿಬ್ಬಂದಿಗಳಿಗೆ ನಿರ್ದೇಶನಗಳನ್ನು ನೀಡಿ ಭೀಕರರಿಂದ ಒತ್ತೆಯಾಳಾಗಿ ಇರಿಸಲ್ಪಟ್ಟ ಜನರನ್ನು ಬಿಡುಗಡೆಗೊಳಿಸಿದುದರಿಂದ ಕಾನೂನು ಕಾಯಿದೆಗಳನ್ನು ಜಾರಿಗೊಳಿಸುವ ಸಂಸ್ಥೆಗಳು ಮನುಷ್ಯರ ಜೀವವನ್ನು ಕಾಪಾಡುವ ಪರಿಶ್ರಮಕ್ಕೆ ಆದ್ಯತೆ ನೀಡುತ್ತಾ ಇರುವುದು ಒಂದು ಸಂತೋಷಕರವಾದ ವಿಷಯವಾಗಿದೆ. ಆದರೆ ಅತ್ಯಂತ ಆತಂಕಕಾರಿ ಮತ್ತು ಚಿಂತಾಜನಕ ವಿಷಯವೇನೆಂದರೆ, ನಮ್ಮ ಗೂಢಚಾರ ಸಂಸ್ಥೆಗಳಿಗೆ ಮತ್ತು ಭೀಕರರ ಚಲನೆಗಳಮೇಲೆ ಕಣ್ಣಿಟ್ಟಿರುವ ವಿಭಾಗಗಳಿಗೆ ಭೀಕರರು ಯಾವ ಕಟ್ಟಡಗಳನ್ನು ಆಕ್ರಮಿಸಲಿರುವರು, ಅವರು ಯಾವೆಲ್ಲಾ ಅಲ್ಪಸಂಖ್ಯಾತರ ಆರಾಧನಾಲಯಗಳ ಮೇಲೆ ಆಕ್ರಮಣಗಳನ್ನು ಮಾಡಲು ಸಾಧ್ಯತೆ ಇವೆ ಎಂದು ಮುಂಚಿತವಾಗಿ ತಿಳಿದಿರುತ್ತದೆ; ಆದರೆ ಇವುಗಳ ಬಗ್ಗೆ ತಿಳಿದಿದ್ದರೂ ಭೀಕರರು ಆಕ್ರಮಣ ಮಾಡುವ ಮೊದಲೇ ಅವರನ್ನು ಹಿಡಿಗೂಡಲು ಈ ಸರಕಾರಿ ಸಂಸ್ಥೆಗಳಿಗೆ ಇಂದಿನ ತನಕ ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಈ ಸರಕಾರಿ ಸಂಸ್ಥೆಗಳನ್ನು ಸಂಪೂರ್ಣವಾಗಿ ದುರಸ್ತಿಗೊಳಿಸಬೇಕೆಂಬುದು ಆವಶ್ಯಕವಾಗಿದೆ. ಲಾಹೋರಿನ ಘಟನೆಗೆ ಮೊದಲು ಕೆಲವು ಸ್ಥಳಗಳಲ್ಲಿ ಕ್ರೈಸ್ತರ ಮತ್ತು ಹಿಂದೂಗಳ ಆರಾಧನಾಲಯಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವುಗಳ ಮೇಲೆ ದಾಳಿ ಮಾಡಿದ ಸಂಭವಗಳು ನಡೆದಿವೆ. ಆ ಘಟನೆಗಳು ನಡೆದ ಬಳಿಕ ಪಾಕಿಸ್ತಾನದಲ್ಲಿ ಒಂದು ಮುಸ್ಲಿಮೇತರ ಅಲ್ಪಸಂಖ್ಯಾತ ಸಮುದಾಯವನ್ನು ಭೀಕರ ದಾಳಿಗೆ ಗುರಿಯನ್ನಾಗಿ ಮಾಡಿದುದು ಅತ್ಯಂತ ಖೇದಕರ ವಿಷಯವಾಗಿದೆ. ಈ ಘಟನೆಯನ್ನು ಎಷ್ಟು ಖಂಡಿಸಿದರೂ ಅದು ಕಡಿಮೆಯೇ ಆಗಿರುವುದು. ಏಕೆಂದರೆ ನಮ್ಮ ರಾಷ್ಟ್ರಪಿತ ಖಾಯಿದೇ ಆಝಮ್ ಮುಹಮ್ಮದ್ ಅಲಿ ಜಿನ್ನಾ ಹೇಳಿದ ಪ್ರಕಾರ ಪಾಕಿಸ್ತಾನದಲ್ಲಿರುವ ಪ್ರತಿಯೊಂದು ಧರ್ಮದ ಅನುಯಾಯಿಗಳಿಗೆ ತಮ್ಮ ಮನಸ್ಸಿಗೆ ತೃಪ್ತಿಕರವಾದ ರೀತಿಯಲ್ಲಿ ಆರಾಧನೆ ನಡೆಸುವ ಸಂಪೂರ್ಣ ಸ್ವಾತಂತ್ರ್ಯವಿದೆ. ಆದುದರಿಂದ ಅವರು ನಡೆಸುವ ಆರಾಧನೆಯ ಮಾರ್ಗದಲ್ಲಿ ಯಾವುದಾದರೂ ರೀತಿಯಲ್ಲಿ ಅಡ್ಡಿಯನ್ನು ಉಂಟುಮಾಡುವುದು ಪಾಕಿಸ್ತಾನದ ಸ್ಥಾಪಕರ ಆದೇಶಗಳು ಮತ್ತು ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಲಾಹೋರಿನಲ್ಲಿ ನಡೆದ ಭೀಕರ ಆಕ್ರಮಣಗಳ ಸಂದರ್ಭದಲ್ಲಿ ಕಾನೂನು ಕಾಯಿದೆಗಳನ್ನು ಜಾರಿಗೊಳಿಸುವ ಸಂಸ್ಥೆಗಳು ಮನುಷ್ಯರ ಜೀವವನ್ನು ರಕ್ಷಿಸುವುದಕ್ಕೆ ಆದ್ಯತೆ ನೀಡಿದ ರೀತಿ ಬಹಳ ಸಮಾಧಾನಕರವಾಗಿದೆ.

ಇಂತಹ ದುರ್ಘಟನೆಗಳು ನಡೆದಾಗ ಅದರಿಂದ ಪ್ರಭಾವಿತರಾಗುವವರ ಹೃದಯಗಳು ಅತ್ಯಂತ ದುಃಖಭರಿತವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಅವರು ಯಾವುದಾದರೂ ರೀತಿ ಕಟುವಾಗಿ ಮಾತನಾಡಿದರೂ ಅದನ್ನು ಕಡೆಗಣಿಸಬೇಕಾಗಿದೆ. ಆದರೆ ಮಾಡೆಲ್ ಟೌನಿನ ಆರಾಧನಾಲಯದೊಳಗೆ ಪ್ರವೇಶಿಸಲು ಭದ್ರತಾ ಸಿಬ್ಬಂದಿಗಳಿಗೆ (ಮೇಲಧಿಕಾರಿಗಳು) ಕೂಡಲೆ ಅನುಮತಿ ನೀಡದೆ ಇದ್ದುದು ಯಾವುದೇ ರೀತಿಯಲ್ಲಿಯೂ ಸರಿಯಾದ ಉಪಕ್ರಮವೆಂದು ಗಣಿಸಲಾಗದು. ಏಕೆಂದರೆ ಕಾನೂನು ಕಾಯಿದೆ ಗಳನ್ನು ಜಾರಿಗೊಳಿಸಲು ನೇಮಿಸಲ್ಪಟ್ಟವರಿಗೆ ತಕ್ಷಣ ತಮ್ಮ ಕೆಲಸ ಪ್ರಾರಂಭಿಸಲು ಅನುಮತಿ ನೀಡಿರುತ್ತಿದ್ದರೆ ಪ್ರಾಯಶಃ ಇಷ್ಟು ಜೀವನಾಶವಾಗುತ್ತಿರಲಿಲ್ಲ ಮತ್ತು ಭೀಕರರಿಂದ ಬೇಗನೆ ಮುಕ್ತರಾಗಲು ಸಾಧ್ಯವಿತ್ತು.

ಭೀಕರವಾದವು ಅತ್ಯಂತ ಕೊಳಕು ಕುರುವಾಗಿದೆ. ತಮ್ಮ ನಿಲುವಿನ ಬಗ್ಗೆ ಅತ್ಯಂತ ಹೆಚ್ಚು ತೀವ್ರವಾಗಿ ವಾದಿಸಿ ಅದನ್ನು ಶಕ್ತಿ ಪ್ರಯೋಗದ ಮೂಲಕ ಅನ್ಯರ ಮೇಲೆ ಹೇರುವ ಮನೋಭಾವದ ಗರ್ಭದಿಂದ ಅದು ಜನಿಸುತ್ತದೆ. ಆದುದರಿಂದ ಸಮಾಜದ ಎಲ್ಲಾ ವಿಭಾಗಗಳಿಗೆ ಸೇರಿದವರು ಪರಸ್ಪರ ಪ್ರೀತಿ ಸೌಹಾರ್ದದಿಂದ ಜೀವಿಸುವ ಅಭ್ಯಾಸ ಹೊಂದಿದರೆ ಶಾಂತಿಯನ್ನು ಸ್ಥಾಪಿಸುವ ಶಕ್ತಿಗಳಿಗೆ ಬಲ ಸಿಗುವುದು. ದ್ವೇಷ, ಹಠ ಮತ್ತು ಭೀಕರತೆ ಮೊದಲಾದ ವಿಪತ್ತುಗಳಿಂದ ದೇಶಕ್ಕೆ ಮುಕ್ತಿ ಸಿಗುವುದು.

("ಜಂಗ್" ದೈನಿಕ, ಲಾಹೋರ್ 29-5-2010)

# ಲಾಹೋರ್‌ನಲ್ಲಿ ಭೀಕರ ಆಕ್ರಮಣಗಳ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ತೀವ್ರ ಖಂಡನೆ

*(ಬಿ.ಬಿ.ಸಿ. ವರದಿ)*

ಶುಕ್ರವಾರ ಲಾಹೋರ್‌ನಲ್ಲಿ ಅಹ್ಮದಿಯರ ಆರಾಧನಾಲಯಗಳನ್ನು ಭೀಕರರು ಆಕ್ರಮಣ ಮಾಡಿದುದನ್ನು ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಬಾನ್ ಕೀ ಮೂನ್ ಮತ್ತು ಮಾನವ ಹಕ್ಕುಗಳ ಪ್ರತಿಪಾದಕರು ತೀವ್ರವಾಗಿ ಖಂಡಿಸಿದರು. ಈ ಆಕ್ರಮಣಗಳಲ್ಲಿ ಹತರಾದ ಮತ್ತು ಗಾಯಗೊಂಡವರ ಸಂಬಂಧಿಕರಲ್ಲಿ ಅನೇಕರು ಅಮೇರಿಕದಲ್ಲಿ ವಾಸಿಸುತ್ತಿದ್ದಾರೆ. ಅವರು ತೀವ್ರ ಸಂತಾಪ ಮತ್ತು ಕ್ರೋಧ ಹೊಂದಿರುವರು.

ನ್ಯೂಯಾರ್ಕ್‌ನಿಂದ ನಮ್ಮ ವರದಿಗಾರ ಹಸನ್ ಮುಜ್ತಬಾ ಹೀಗೆ ಹೇಳುತ್ತಾರೆ: ಸಂಯುಕ್ತ ರಾಷ್ಟ್ರ ಸಂಘದ ಕೇಂದ್ರ ಕಾರ್ಯಾಲಯದಿಂದ ಸೆಕ್ರೆಟರಿ ಜನರಲ್ ಬಾನ್ ಕೀ ಮೂನ್‌ರವರ ವತಿಯಿಂದ ಜಾರಿಗೊಳಿಸಲಾದ ಹೇಳಿಕೆಯಲ್ಲಿ ಲಾಹೋರ್‌ನಲ್ಲಿ ಅಹ್ಮದೀ ಅಲ್ಪ ಸಂಖ್ಯಾತರ ಆರಾಧನಾಲಯಗಳ ಮೇಲೆ ನಡೆದ ದಾಳಿಯನ್ನು ತೀವ್ರವಾಗಿ ಖಂಡಿಸಲಾಯಿತು. ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಬಾನ್ ಕೀ ಮೂನ್‌ರವರ ಪರವಾಗಿ ಅವರ ವಕ್ತಾರ ಮಾರ್ಟಿನ್ ನಸ್ರೀಕಿ ಪ್ರಕಟಿಸಿದ ಖಂಡನೆಯ ಹೇಳಿಕೆಯಲ್ಲಿ ಲಾಹೋರ್‌ನಲ್ಲಿ ಹತರಾದವರ ಸಂಬಂಧಿಕರಿಗೆ ಸಂತಾಪವನ್ನೂ ಗಾಯಗೊಂಡವರಿಗೆ ಹೃತ್ಪೂರ್ವಕ ಸಹಾನುಭೂತಿಯನ್ನೂ ಸೂಚಿಸಲಾಗಿದೆ.

ಶುಕ್ರವಾರ ಮಧ್ಯಾಹ್ನ ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಬಾನ್ ಕೀ ಮೂನ್‌ರವರು ನೀಡಿದ ಖಂಡನೆಯ ಹೇಳಿಕೆಯೊಂದಿಗೆ ಸಂಯುಕ್ತ ರಾಷ್ಟ್ರ ಸಂಘದ ಮಾನವ ಹಕ್ಕುಗಳ ವಕ್ತಾರರ ಹೇಳಿಕೆಯಲ್ಲಿ ಹೀಗೆ ಹೇಳಲಾಗಿದೆ: ಪಾಕಿಸ್ತಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಅಹ್ಮದಿಯಾ ಸಮುದಾಯದ ಜನರು ಬಹಳ ಕಾಲದಿಂದ ದೌರ್ಜನ್ಯ, ಭೇದ ಭಾವ ಭರಿತ ವರ್ತನೆ ಮತ್ತು ಅಪಾಯಗಳಿಗೆ ಗುರಿಯಾಗುತ್ತಿದ್ದಾರೆ.

ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ವಕ್ತಾರರು ಪಾಕಿಸ್ತಾನದ ಸರಕಾರದೊಂದಿಗೆ ಅಪರಾಧಿಗಳನ್ನು ನ್ಯಾಯಾಲಯದ ಕಟಕಟೆಗೆ ಕೂಡಲೇ ತರಬೇಕೆಂದು ಆಗ್ರಹಪಡಿಸಿದರು. ಅಹ್ಮದಿಯರ ವಿರುದ್ಧ ಸಂಭಾವ್ಯ ಆಕ್ರಮಣಗಳ ಬಗ್ಗೆ ಭಯವನ್ನು ಪದೇ ಪದೇ ಪಾಕಿಸ್ತಾನದ ಸರಕಾರಕ್ಕೆ ಸೂಚಿಸಲಾಗಿದ್ದರೂ ಪಾಕಿಸ್ತಾನ ಸರಕಾರ ಧಾರ್ಮಿಕ ಅಲ್ಪಸಂಖ್ಯಾತರಾದ ಅಹ್ಮದಿಯರ ಆರಾಧನಾಲಯಗಳಿಗೆ ಸಂರಕ್ಷಣೆ ನೀಡಲು ಅಸಮರ್ಥವಾದುದರ ಬಗ್ಗೆ ತೀವ್ರ ಅತೃಪ್ತಿಯನ್ನು ಸೂಚಿಸಲಾಯಿತು.

ಸಂಯುಕ್ತ ರಾಷ್ಟ್ರ ಸಂಘದ ಮಾನವ ಹಕ್ಕುಗಳ ಪ್ರತಿಪಾದಕರು ಹೀಗೆ ತಮ್ಮ ಸಂದೇಹವನ್ನು ಪ್ರಕಟಿಸಿದರು: ನಂಬಿಕೆಗಳನ್ನು ಆಧಾರವಾಗಿಟ್ಟುಕೊಂಡ ಭೇದ ಭಾವ ಭರಿತ ವರ್ತನೆ, ದೌರ್ಜನ್ಯ ನಡೆಸಲು ಉತ್ತೇಜನ ನೀಡುವುದಕ್ಕಾಗಿ ಧಾರ್ಮಿಕ ದ್ವೇಷ ಭಾವನೆಯ ಪ್ರಚಾರ ಮೊದಲಾದವುಗಳನ್ನು ಹತೋಟಿಗೆ ತರುವ ತನಕ ಲಾಹೋರ್‌ನ ಹಾಗಿರುವ ನಗರಗಳಲ್ಲಿ ಇನ್ನಷ್ಟು ಭೀಕರ ಕೃತ್ಯಗಳು ಸಂಭವಿಸುವ ಸಾಧ್ಯತೆಗಳು ಇವೆ.

ಲಾಹೋರಿನಲ್ಲಿ ನಡೆದ ಹಾಗೆ ಇರುವ ಘಟನೆಗಳನ್ನು ತಡೆಗಟ್ಟಲು ಪಾಕಿಸ್ತಾನ ಸರಕಾರ ಧಾರ್ಮಿಕ ಅಲ್ಪ ಸಂಖ್ಯಾತರಿಗೆ ಮತ್ತು ಅವರ ಆರಾಧನಾಲಯಗಳಿಗೆ ಸಂರಕ್ಷಣೆಯನ್ನು ನೀಡುವ ಕ್ರಮಗಳನ್ನು ಖಾತರಿ ಪಡಿಸಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ ಮಾನವ ಹಕ್ಕುಗಳ ವಕ್ತಾರರು ಒತ್ತಿ ಹೇಳಿದರು.

ಸಂಯುಕ್ತ ರಾಷ್ಟ್ರ ಸಂಘದ ಮಾನವೀಯ ಹಕ್ಕುಗಳ ವಕ್ತಾರರು ಪ್ರಕಟಿಸಿದ ಜಂಟಿ ಹೇಳಿಕೆಗೆ ಸಹಿ ಹಾಕಿದವರು: ಸೆಕ್ರೆಟರಿ ಜನರಲ್ ಬಾನ್ ಕೀ ಮೂನ್‌ರವರ ಪರವಾಗಿ ಧಾಮಿಕ ಸ್ವಾತಂತ್ರ್ಯಕ್ಕೆ ವಿಶಿಷ್ಟ ರಾಯಭಾರಿಯಾಗಿರುವ ಆಸಿಮ ಜಹಾಂಗೀರ್, ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ವಕ್ತಾರ ಕೆ. ಮೆಕ್‌ಡೂಗಲ್, ನ್ಯಾಯಾಲಯೇತರ ಹತ್ಯೆಯ ಬಗ್ಗೆ ವಿಶಿಷ್ಟ ರಾಯಭಾರಿ ಯಾರ್ ಪೋರ್ಟಿಯಾರ್ ಫಿಲಿಪ್ ಆಲ್‌ಸ್ಟನ್. ಸಂಯುಕ್ತ ರಾಷ್ಟ್ರ ಸಂಘದ ಮಾನವ ಹಕ್ಕುಗಳ ಈ ಪ್ರತಿಪಾದಕ ಜಿನೀವಾದಲ್ಲಿ ಮಾನವ ಹಕ್ಕುಗಳ ಕೌನ್ಸಿಲ್‌ನಲ್ಲಿ ಯಾವುದೇ ಪ್ರತಿಫಲ ಪಡೆಯದೆ ಸೇವೆ ಸಲ್ಲಿಸುತ್ತಿದ್ದಾರೆ.

ಅಮೇರಿಕದ ಕ್ಯಾಲಿಫೋರ್ನಿಯಾದಲ್ಲಿ ಜಮಾಅತ್ ಅಹ್ಮದಿಯಾದ ಮುಖ್ಯ ಪ್ರತಿನಿಧಿ ಇಮಾಮ್ ಶಮ್‌ಶಾದ್ ನಾಸಿರ್‌ರವರು ಜಮಾಅತೆ ಅಹ್ಮದಿಯಾದ ಆಧ್ಯಾತ್ಮಿಕ ನಾಯಕ ಅಥವಾ ಖಲೀಫರಾದ ಮಿರ್ಝಾ ಮಸ್ರೂರ್ ಅಹ್ಮದ್‌ರವರ ಪರವಾಗಿ ಒಂದು ಹೇಳಿಕೆಯನ್ನು ಜಾರಿಗೊಳಿಸಿದರು. ಆ ಹೇಳಿಕೆಯಲ್ಲಿ ಹೀಗೆ ಹೇಳಲಾಗಿದೆ:

"ಪಾಕಿಸ್ತಾನದಲ್ಲಿ ಸರಕಾರಿ ಮಂಜೂರಾತಿಯಿಂದ ಪ್ರಾರಂಭಿಸಲಾದ ಉಗ್ರವಾದವನ್ನು ಆರಂಭದ ಕಾಲದಲ್ಲಿಯೇ ತಡೆಗಟ್ಟುತ್ತಿದ್ದರೆ ಅಹ್ಮದಿಯಾ ಜಮಾಅತ್ ವಿರುದ್ಧ ಇಂತಹ ಭೀಕರ ಆಕ್ರಮಣಗಳು ನಡೆಯುತ್ತಿರಲಿಲ್ಲ."

*(30ನೇ ಪುಟಕ್ಕೆ.....)*

# ಅಹ್ಮದಿಯಾ ಖಲೀಫರ ಆಧ್ಯಾತ್ಮಿಕ ಪಂಥಾಹ್ವಾನ

## ಮುಸ್ಲಿಮ್ ಲೋಕಕ್ಕೆ ಚಿಂತಾರ್ಹವಾದ ವಿಷಯ

☆ ಸಿದ್ದೀಖ್ ಅಶ್ರಫ್ ಅಲೀ

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗಿ 2008ರಲ್ಲಿ ನೂರು ವರ್ಷಗಳು ಪೂರ್ಣಗೊಂಡಿವೆ. ಮುಸ್ಲಿಮ್ ಲೋಕದಲ್ಲಿ ಇಂದು ಖಿಲಾಫತ್ ವ್ಯವಸ್ಥೆ ಅಹ್ಮದಿಯಾ ಜಮಾಅತಿನಲ್ಲಿ ಮಾತ್ರ ಇದೆ. ಇದು ಅಹ್ಮದಿಯಾ ಜಮಾಅತಿನ ಸತ್ಯತೆಗೆ ವೈಭವಶಾಲಿ ದೃಷ್ಟಾಂತವಾಗಿದೆ. ಪವಿತ್ರ ಖುರ್‌ಆನಿನ ಸೂರತುನ್ನೂರ್ ವಚನ 56ರಲ್ಲಿ ಅಲ್ಲಾಹನು ವಾಗ್ದಾನ ನೀಡಿದ ಪ್ರಕಾರ ಇಮಾಮ್ ಮಹ್‌ದಿಯವರು ನಿಧನ ಹೊಂದಿದ ನಂತರ ಈ ವ್ಯವಸ್ಥೆ ಸ್ಥಾಪಿಸಲ್ಪಟ್ಟಿತು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೀಗೆ ಭವಿಷ್ಯ ನುಡಿದಿದ್ದರು: ತನ್ನ ನಿಧನದ ನಂತರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಸ್ಥಾಪಿತವಾಗುವ ಖಿಲಾಫತ್ ಅಥವಾ ಖಿಲಾಫತ್ ರಾಶಿದ) ಸ್ಥಾಪಿತವಾಗುವುದು. ಅಲ್ಲಾಹನು ಬಯಸುವ ತನಕ ಅದು ಜಾರಿಯಾಗಿರುವುದು. ಅನಂತರ ದೊರೆಗಳ ಆಡಳಿತೆ ಜಾರಿಗೊಳ್ಳುವುದು. ಅಂತಿಮ ಕಾಲಘಟ್ಟದಲ್ಲಿ ಪುನಃ ಮುಸ್ಲಿಮರಲ್ಲಿ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಖಿಲಾಫತ್) ಸ್ಥಾಪಿತವಾಗುವುದು. ಸೂರತುಲ್ ಬಖರದಲ್ಲಿ ಅಲ್ಲಾಹನು ಖಿಲಾಫತ್ ತನ್ನಿಂದ ಸ್ಥಾಪಿತವಾಗುವ ಬಗ್ಗೆ ದೃಢಪಡಿಸಿರುವನು. ಅಲ್ಲಾಹನು "ಇನ್ನೀ ಜಾಇಲುನ್ ಫಿಲ್ ಅರ್‌ಝಿ ಖಲೀಫ" (ನಾನು ಭೂಮಿಯಲ್ಲಿ ನನ್ನ ಪ್ರತಿನಿಧಿಯನ್ನು ನೇಮಿಸುವೆನು ಅಥವಾ ನೇಮಿಸುತ್ತಾ ಹೋಗುವೆನು) ಎಂದು ಹೇಳಿರುವನು. ಅಹ್ಮದಿಯಾ ಜಮಾಅತಿನಲ್ಲಿ ಸ್ಥಾಪಿತವಾಗಿರುವ ಖಿಲಾಫತ್ ಅಲ್ಲಾಹನೇ ನೇಮಿಸಿದ ಖಿಲಾಫತ್ ಆಗಿದೆ. ಈ ಖಿಲಾಫತ್ ವಿರುದ್ಧ ಬೇರೆ ಒಂದು ಖಿಲಾಫತ್ ಸ್ಥಾಪಿಸುವುದು ಅಸಾಧ್ಯವಾಗಿದೆ.

ವಾಚಕರೇ, ಅಹ್ಮದಿಯಾ ಜಮಾಅತಿನ ಬೇರೆ ಬೇರೆ ಕಾಲದ ಖಲೀಫರು ಇಸ್ಲಾಮೀ ಲೋಕದ ಮುಂದೆ ಇರಿಸಿದ ಒಂದು ಆಧ್ಯಾತ್ಮಿಕ ಪಂಥಾಹ್ವಾನವನ್ನು ನಿಮ್ಮ ಮುಂದಿಡುತ್ತೇನೆ. ಅಲ್ಲಾಹನ ಇಚ್ಛಾನುಸಾರವಾಗಿ ವಿವಿಧ ಸಂದರ್ಭಗಳಲ್ಲಿ ಈ ಪಂಥಾಹ್ವಾನವನ್ನು ನೀಡಲಾಯಿತು.

1. ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ ಖಲೀಫ) ಹೀಗೆ ಹೇಳಿದರು:

"ಖಲೀಫ ಪದವಿಗೆ ನನ್ನನ್ನು ನೇಮಿಸಿದುದು ಅಲ್ಲಾಹನೇ ಆಗಿರುವನು. ನನ್ನನ್ನು ಎದುರಿಸಬಲ್ಲವನು ಯಾರೂ ಇಲ್ಲ. ನಿಮ್ಮ ಪೈಕಿ ಯಾರಾದರೂ ನನ್ನನ್ನು ಎದುರಿಸುವ ಉತ್ಸಾಹವನ್ನು ತನ್ನ ಹೃದಯದಲ್ಲಿ ಹೊಂದಿದ್ದರೆ ಅಂತಹ ವ್ಯಕ್ತಿ ನನ್ನ ವಿರುದ್ಧ ಎದ್ದು ನಿಂತು ನೋಡಲಿ. ಅಲ್ಲಾಹನು ಅವನನ್ನು ಅಪಮಾನಕ್ಕೆ ಗುರಿಪಡಿಸುವನು. ಅವನನ್ನು ಮಾತ್ರವಲ್ಲ, ಲೋಕದ ಎಲ್ಲ ಶಕ್ತಿಗಳು ಒಗ್ಗೂಡಿ ನನ್ನ ಖಿಲಾಫತನ್ನು ನಾಶಗೊಳಿಸಲು ಬಯಸುವುದಾದರೆ ಅಲ್ಲಾಹನು ಅವರನ್ನು ಸೊಳ್ಳೆಗಳ ಹಾಗೆ ಅಮುಕಿ ಬಿಡುವನು. ನನ್ನ ವಿರುದ್ಧ ಎದ್ದು ನಿಲ್ಲುವವನನ್ನು ಅಲ್ಲಾಹನು ಬೀಳಿಸಿ ಬಿಡುವನು. ನನ್ನ ವಿರುದ್ಧ ಮಾತನಾಡುವವನು ಮೌನವನ್ನವಲಂಬಿಸುವಂತೆ ಮಾಡುವನು. ಯಾರು ನನ್ನನು ಹೀನೈಸಲು ಪ್ರಯತ್ನಿಸುತ್ತಾನೋ ಅವನು ಸ್ವತಃ ಹೀನೈಸಲ್ಪಡುವನು.

"ಆದುದರಿಂದ ಸತ್ಯ ವಿಶ್ವಾಸಿಗಳೇ, ಜಮಾಅತಿಗೆ ಸೇರಿದವರೇ, ಸತ್ಕೃತ್ಯಗಳನ್ನು ಮಾಡುವ ಜನರೇ, ನಾನು ನಿಮ್ಮೊಂದಿಗೆ ಹೀಗೆ ಹೇಳಬಯಸುತ್ತೇನೆ: ಖಿಲಾಫತ್ ಬಹಳ ದೊಡ್ಡ ಅನುಗ್ರಹವಾಗಿದೆ. ನೀವು ಅದಕ್ಕೆ ಅರ್ಹವಾದ ಗೌರವಾದರಗಳನ್ನು ನೀಡಿರಿ"

ಅವರು ಇನ್ನೊಮ್ಮೆ ಹೀಗೆ ಹೇಳಿದರು:

"ನೀವು ಅಲ್ಲಾಹನ ಸನ್ನಿಧಿಯಲ್ಲಿ ದುಆ ಮಾಡುವುದರಲ್ಲಿ ಮಗ್ನರಾಗಿರಿ. ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ನಿಮ್ಮಲ್ಲಿ ಖಿಲಾಫತ್ ಜಾರಿಯಲ್ಲಿರುವಾಗ ಲೋಕದ ಯಾವುದೇ ಸಮುದಾಯ ನಿಮ್ಮ ಮೇಲೆ ಜಯಗಳಿಸಲು ಶಕ್ತವಾಗಲಾರದು. ನೀವು ಪ್ರತಿಯೊಂದು ಕ್ಷೇತ್ರದಲ್ಲಿ ಜಯಶಾಲಿಗಳೂ ನೆರವು ನೀಡಲ್ಪಟ್ಟವರೂ ಆಗುವಿರಿ." (ತಾರೀಖೆ ಅಹ್ಮದಿಯ್ಯತ್ ಸಂಪುಟ 7, ಪುಟ 608-609)

2. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ಚತುರ್ಥ ಖಲೀಫ) ಹೀಗೆ ಹೇಳಿದರು:

"ಲೋಕವೆಲ್ಲಾ ಸೇರಿ ಪ್ರಯತ್ನಿಸಿದರೂ ಖಲೀಫರನ್ನು ಮಾಡಿ ತೋರಿಸಲು ಸಮರ್ಥವಾಗಲಾರರು. ಅವರಿಗೆ ಯಾರನ್ನಾದರೂ ಖಲೀಫರನ್ನಾಗಿ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಖಿಲಾಫತ್ ಅಲ್ಲಾಹನ ಇಚ್ಛೆಯೊಂದಿಗೆ ಸಂಬಂಧವನ್ನು ಹೊಂದಿದೆ. ಯಾರನ್ನು ಅಲ್ಲಾಹನು ಭಯಭಕ್ತಿಯುಳ್ಳವನು ಎಂದು ನಿರ್ಧರಿಸುತ್ತಾನೋ ಅವನ ಮೇಲೆಯೇ ಅಲ್ಲಾಹನ ಇಚ್ಛೆಯ ಬೆರಳು ಇರಿಸಲ್ಪಡುತ್ತದೆ. ಅನಂತರ ಆ ಖಲೀಫ ತನ್ನ ಸುತ್ತಲೂ ಭಯಭಕ್ತಿ ಹೊಂದಿದವರ ಒಂದು ಗುಂಪನ್ನು ಸೃಷ್ಟಿಸುತ್ತಾರೆ." (ಖುತುಬ ಜುಮುಅ 2-4-1993)

ಅವರು ಪುನಃ ಹೇಳುತ್ತಾರೆ:

"ನೀವು ನೆನಪಿಡಿರಿ, ನಿಮ್ಮ ಐಕ್ಯತೆಯು ಖಿಲಾಫತ್‌ನೊಂದಿಗೆ ಸಂಬಂಧಿಸಿದೆ. ಏಕ ಸಮುದಾಯವನ್ನಾಗಿ ರೂಪಿಸುವ ಕೆಲಸ ಅಹ್ಮದಿಯಾ ಖಿಲಾಫತ್‌ಗೆ ವಹಿಸಿಕೊಡಲಾಗಿದೆ. ಬೇರೆ ಯಾರೂ ಈ ಕೆಲಸ ಮಾಡಲಾರರು. ನಾನು ಅಲ್ಲಾಹನ ಹೆಸರಿನಲ್ಲಿ ಪ್ರಮಾಣ ಮಾಡಿ ಈ ಮಸ್‌ಜಿದ್‌ನಲ್ಲಿ ಪ್ರಕಟಿಸುತ್ತೇನೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ದಾಸರನ್ನು ಏಕ ಸಮುದಾಯವನ್ನಾಗಿ ಮಾಡುವ ಕೆಲಸವನ್ನು ಅಲ್ಲಾಹನು ಈಗಿನ ಕಾಲಘಟ್ಟದಲ್ಲಿ ಅಹ್ಮದಿಯಾ ಖಿಲಾಫತ್‌ಗೆ ವಹಿಸಿಕೊಟ್ಟಿರುವನು. ಯಾರು ಖಿಲಾಫತ್‌ನೊಂದಿಗಿರುವ ಸಂಬಂಧವನ್ನು ಮುರಿದುಹಾಕುತ್ತಾನೋ ಅವನ ಯಾವುದೇ ಪ್ರಯತ್ನ ಅದು ಒಳಿತಿನ ಹೆಸರಿನಲ್ಲಿ ಮಾಡಲ್ಪಡುವುದಾದರೂ ಅದು ಎಂದೂ ಜಯಗಳಿಸಲಾರದು." (ಖುತುಬ ಜುಮುಅ 16-7-1993)

ಹಝ್ರತ್ ಅಮೀರುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ನಾಯಕ) ಖಲೀಫತುಲ್ ಮಸೀಹ್ ಖಾಮಿಸ್(ಪಂಚಮ ಖಲೀಫ) ರವರು ಜಮಾಅತ್ ಅಹ್ಮದಿಯಾದ ಶತವಾರ್ಷಿಕ ಜೂಬಿಲಿಯ ಸಂದರ್ಭದಲ್ಲಿ 27-5-2008ರಂದು ತನ್ನ ಚಾರಿತ್ರಿಕ ಪ್ರವಚನದಲ್ಲಿ ಹೀಗೆ ಹೇಳಿದರು:

"ಅಹ್ಮದಿಯತಿನ ಶತ್ರುಗಳೇ, ನಾನು ನಿಮಗೆ ಸ್ಪಷ್ಟವಾಗಿ ಹೀಗೆ ಹೇಳಲು ಬಯಸುತ್ತೇನೆ: ಖಿಲಾಫತ್ ಸ್ಥಾಪಿಸಬೇಕೆಂಬ ಉತ್ತಮ ಇಚ್ಛೆ ನಿಮಗೆ ಇರುವುದಾದರೆ ನೀವು ಬನ್ನಿರಿ. ಮುಹಮ್ಮದೀ ಮಸೀಹರ ದಾಸ್ಯವನ್ನು ಅಂಗೀಕರಿಸಿ ಅವರ ಖಿಲಾಫತ್ ಜಾರಿಯಾಗಿರುವ ಶಾಶ್ವತ ವ್ಯವಸ್ಥೆಯಲ್ಲಿ ಭಾಗವಹಿಸುವವರಾಗಿರಿ. ಹಾಗೆ ಮಾಡದಿದ್ದರೆ ಖಿಲಾಫತ್ ಸ್ಥಾಪಿಸುವ ಪ್ರಯತ್ನ ಮಾಡುತ್ತಾ ಮಾಡುತ್ತಾ ನೀವು ಸತ್ತುಹೋಗುವಿರಿ.

ಖಿಲಾಫತ್ ಸ್ಥಾಪಿಸಲು ನಿಮಗೆ ಸಾಧ್ಯವಾಗಲಾರದು. ನಿಮ್ಮ ಸಂತಾನಗಳು ಸಹ ನಿಮ್ಮ ಹಾಗೆಯೇ ಪ್ರಯತ್ನ ಮುಂದುವರಿಸಿದರೆ ಅವರು ಕೂಡ ಯಾವುದೇ ಖಿಲಾಫತ್ ಸ್ಥಾಪಿಸಲು ಶಕ್ತರಾಗಲಾರರು. ಲೋಕಾಂತ್ಯದ ತನಕ ನಿಮ್ಮ ಸಂತಾನ ಪರಂಪರೆ ತಮ್ಮ ಪ್ರಯತ್ನವನ್ನು ಮುಂದುವರಿಸಿದರೂ ಖಿಲಾಫತ್ ಸ್ಥಾಪಿಸಲು ಅವರಿಗೆ ಸಾಧ್ಯವಾಗಲಾರದು. ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅಲ್ಲಾಹನ ವಿರುದ್ಧ ಹೋರಾಡಬೇಡಿರಿ. ನಿಮ್ಮನ್ನೂ ನಿಮ್ಮ ಸಂತತಿಗಳನ್ನೂ ಬಾಕಿಯುಳಿಸಲು ಪ್ರಯತ್ನಿಸಿರಿ."

ಅವರು ಪುನಃ ಹೀಗೆ ಹೇಳಿದರು: "ನಾವು ಪ್ರವೇಶಿಸಿರುವ ಖಿಲಾಫತಿನ ಹೊಸ ಶತಮಾನದಲ್ಲಿ ಅಹ್ಮದಿಯತ್ ಅಭಿವೃದ್ಧಿ ಮತ್ತು ವಿಜಯವನ್ನು ಗಳಿಸುವುದು. (ಇನ್‌ಶಾಲ್ ಅಲ್ಲಾಹ್). ಅಲ್ಲಾಹನ ನೆರವುಗಳ ಅಂತಹ ಬಾಗಿಲು ತೆರೆಯಲ್ಪಟ್ಟಿವೆ ಮತ್ತು ತೆರೆಯಲ್ಪಡುತ್ತಲಿವೆ ಯೆಂದು ನಾನು ನಿಮಗೆ ಭರವಸೆ ನೀಡುತ್ತೇನೆ. ಬರಲಿರುವ ಪ್ರತಿದಿನ ಜಮಾಅತಿನ ವಿಜಯದ ದಿನವನ್ನು ಸಮೀಪಗೊಳಿಸುತ್ತದೆ... ನಾನು ಪೂರ್ಣ ವಿಶ್ವಾಸದೊಂದಿಗೆ ಹೇಳುತ್ತೇನೆ: ಅಲ್ಲಾಹನು ಈ ಕಾಲಘಟ್ಟವನ್ನು ತನ್ನ ಅಪಾರವಾದ ನೆರವು ಮತ್ತು ಸಹಾಯದಿಂದ ಅನುಗ್ರಹಿಸಿ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವನು. (ಇನ್‌ಶಾಲ್ ಅಲ್ಲಾಹ್). ಅಹ್ಮದಿಯತಿನ ಅಭಿವೃದ್ಧಿಯನ್ನು ತಡೆಗಟ್ಟಲು ಈ ಕಾಲಘಟ್ಟದಲ್ಲಿ ಯಾರಿಗೂ ಸಾಧ್ಯವಿಲ್ಲ. ಇನ್ನು ಮುಂದೆ ಸಹ ಅಹ್ಮದಿಯತಿನ ಅಭಿವೃದ್ಧಿ ನಿಂತು ಹೋಗಲಾರದು. ಖಲೀಫರ ಸರಣಿ ಮುಂದುವರಿಯುವುದು. ಅಹ್ಮದಿಯತಿನ ಹೆಜ್ಜೆ ಇನ್‌ಶಾಲ್‌ಅಲ್ಲಾಹ್ ಮುಂದೆ ಮುಂದೆ ಸಾಗುತ್ತಾ ಹೋಗುವುದು." (ಅಲ್‌ಫಝ್ಲ್ ಇಂಟರ್‌ನೇಶನಲ್ - ಖಿಲಾಫತ್ ಅಹ್ಮದಿಯಾ ಶತವಾರ್ಷಿಕ ಜೂಬಿಲಿ ಸಂಚಿಕೆ 2008)

ಅಹ್ಮದಿಯಾ ಜಮಾಅತಿನ ಆಯಾ ಕಾಲದ ಖಲೀಫರು ಮುಸ್ಲಿಮ್ ಲೋಕದ ಮುಂದೆ ಇರಿಸಿದ ಆಧ್ಯಾತ್ಮಿಕ ಪಂಥಾಹ್ವಾನವು ಮುಸ್ಲಿಮ್ ಸಹೋದರರಿಗೆ ಚಿಂತಾರ್ಹವಾಗಿದೆ. ಲೋಕದಲ್ಲಿ ಎಷ್ಟೆಲ್ಲಾ ಮುಸ್ಲಿಮ್ ಸರಕಾರಗಳು ಇದ್ದರೂ ಎಷ್ಟೆಲ್ಲಾ ಮುಸ್ಲಿಮ್ ಪಂಗಡಗಳು ಇದ್ದರೂ ಮುಸ್ಲಿಮ್ ಜನಸಂಖ್ಯೆ ಬಹಳ ಹೆಚ್ಚು ಇದ್ದರೂ ಖಿಲಾಫತ್ ವ್ಯವಸ್ಥೆ ಸ್ಥಾಪಿಸಲು ಅವರಿಗೆ ಏಕೆ ಸಾಧ್ಯವಾಗಲಿಲ್ಲ? ಇದಕ್ಕೆ ಒಂದೇ ಒಂದು ಕಾರಣವಿದೆ. ಅಹ್ಮದಿಯಾ ಜಮಾಅತ್ ಅಲ್ಲಾಹನು ಸ್ಥಾಪಿಸಿದ ಜಮಾಅತಾಗಿದೆ. ಅದು ಎಂತಹ ಜಮಾಅತ್ ಆಗಿದೆ ಎಂದರೆ ಮುಸ್ಲಿಮರ 73 ಪಂಗಡಗಳ ಪೈಕಿ ಈ ಪಂಗಡವನ್ನು ಅಲ್ಲಾಹನ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ಸಲ್ಲಮರು ಮೋಕ್ಷಾರ್ಹವಾದ ಪಂಗಡ ಎಂದು ವಿಧಿಸಿರುವರು. ಇಂದು ಈ ಒಂದು ಪಂಗಡದಲ್ಲಿ ಮಾತ್ರ ಖಿಲಾಫತ್ ವ್ಯವಸ್ಥೆ ಜಾರಿಯಲ್ಲಿದೆ. ■

*ಲಾಹೋರ್ ಆಕ್ರಮಣ..... (9ನೇ ಪುಟದಿಂದ)*

ಲಾಹೋರಿನಲ್ಲಿ ಹುತಾತ್ಮರಾಗಿದ್ದಾರೆ. ಕೊಲೆಗಾರನನ್ನು ಹಿಡಿಯಲಾಗಿದೆ. ಅವನು ತಹಫ್ಫುಝು ಖತ್‌ಮುನ್ನುಬುವ್ವತ್ ಪಂಥಕ್ಕೆ ಸೇರಿದವನಾಗಿದ್ದಾನೆ. ಒಂದು ಕಡೆಯಲ್ಲಿ ಲಾಹೋರ್‌ನಲ್ಲಿ ನಡೆದ ಘಟನೆ ಬಹಳ ನಿಂದನೀಯವೆಂದು ಹೇಳುತ್ತಾರೆ. ಆದರೆ ಇವರು ಈಗಲೂ ತಮ್ಮ ಜನರನ್ನು ಅಹ್ಮದಿಯರನ್ನು ಕೊಲ್ಲಲಿಕ್ಕೆ ಪ್ರೇರೇಪಿಸಿ ಬಿಡುತ್ತಾರೆ. ಅಹ್ಮದಿಯರನ್ನು ಕೊಂದು ಸ್ವರ್ಗದಲ್ಲಿ ಪ್ರವೇಶಿಸಿರಿ ಎಂದು ಇವರು ಪ್ರಚಾರ ಮಾಡುತ್ತಾರೆ. ಕೊಲೆಗಾರ ಹೇಳಿದನು: "ಅಹ್ಮದಿಯರನ್ನು ಕೊಂದರೆ ಪುಣ್ಯ ಲಭಿಸುತ್ತದೆಂದು ನಮ್ಮ ಧರ್ಮಪಂಡಿತರು ಹೇಳಿಕೊಡುತ್ತಾರೆ. ಆದುದರಿಂದ ಲಾಹೋರ್ ಘಟನೆ ನನಗೆ ಪ್ರೇರಣೆ ನೀಡಿತು. ಹಾಗೆ ಪುಣ್ಯ ಲಭಿಸಲಿಕ್ಕಾಗಿ ನಾನು ಕೊಂದೆನು. ಈ ಪ್ರದೇಶದಲ್ಲಿ ಒಬ್ಬ ಅಹ್ಮದಿಯನ್ನು ಕೂಡ ನಾವು ಜೀವಂತವಾಗಿಡಲಿಕ್ಕಿಲ್ಲ." ಇದು ಇವರ ಅವಸ್ಥೆಯಾಗಿದೆ. ತಮ್ಮನ್ನು ಲೋಕದ ಮುಂದೆ ಅಪಕೀರ್ತಿಗೊಳಿಸಲಾಗುತ್ತದೆಂದು ಅವರು ಹೇಳುತ್ತಾರೆ. ಲೋಕದಲ್ಲಿ ಅವರೇ ಸ್ವಯಂ ಅಪಕೀರ್ತಿಗೆ ಗುರಿಯಾಗುತ್ತಿದ್ದಾರೆ.

ಅಲ್ಲಾಹನು ಎಲ್ಲ ಅಹ್ಮದಿಯರನ್ನು ಎಲ್ಲ ಕೆಡುಕುಗಳಿಂದ ರಕ್ಷಿಸಲಿ. ಅಧಿಕವಾಗಿ ದುಆ ಮಾಡಿರಿ. ಗಾಯಗೊಂಡವರಿಗೆ ವಿಶೇಷವಾಗಿ ದುಆ ಮಾಡಿರಿ. ಅಲ್ಲಾಹನು ಅವರಿಗೆ ಬೇಗನೆ ಪೂರ್ಣ ಸೌಖ್ಯವನ್ನು ದಯಪಾಲಿಸಲಿ. (ಆಮೀನ್) ●

(ಭಾಷಾಂತರ : ಮುಹಮ್ಮದ್ ಯೂಸುಫ್)

*ಲಾಹೋರಿನಲ್ಲಿ ಭೀಕರ ಆಕ್ರಮಣಗಳ ಬಗ್ಗೆ..... (28ನೇ ಪುಟದಿಂದ)*

ಇಮಾಮ್ ಶಮ್‌ಶಾದ್ ನಾಸಿರ್ ಹೀಗೆಯೂ ಹೇಳಿಕೆ ನೀಡಿದ್ದಾರೆ: "ಲಾಹೋರಿನಲ್ಲಿ ಅಹ್ಮದಿಯರ ಆರಾಧನಾಲಯಗಳ ಮೇಲೆ ನಡೆದ ಆಕ್ರಮಣಗಳ ಬಗ್ಗೆ ನಿಖರವಾದ ವರದಿ ಇನ್ನೂ ಲಭಿಸಿಲ್ಲವಾದರೂ ಹಲವಾರು ವರ್ಷ ಗಳಿಂದ ಪಾಕಿಸ್ತಾನದಲ್ಲಿ ಅಹ್ಮದಿಯರ ಮತ್ತು ಅವರ ಆರಾಧನಾಲಯಗಳ ಮೇಲೆ ನಡೆಯುತ್ತಿರುವ ಆಕ್ರಮಣಗಳ ಸರಣಿಯ ಮುಂದುವರಿಕೆ ಇದಾಗಿದೆ. ಈ ಆಕ್ರಮಣ ಹೆಚ್ಚು ದೌರ್ಜನ್ಯಭರಿತವೂ ಬರ್ಬರವೂ ಆಗಿದೆ."

ಇಮಾಮ್ ಶಮ್‌ಶಾದ್ ಅಹ್ಮದ್ ನಾಸಿರ್ ತಮ್ಮ ಹೇಳಿಕೆ ಹೀಗೆ ಮುಂದುವರಿಸಿದರು: "ಲಾಹೋರಿನಲ್ಲಿ ನಡೆದ ಆಕ್ರಮಣ ಅಹ್ಮದೀ ಸಮುದಾಯ ಸಮೇತ ಎಲ್ಲಾ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಸರಕಾರದ ಸಹಾಯದೊಂದಿಗೆ ಜಾರಿಗೊಳಿಸಲ್ಪಡುವ ಹಿಂಸಾಚಾರ ಮತ್ತು ತಾರತಮ್ಯ ವರ್ತನೆಯ ಮುಂದುವರಿಕೆ ಆಗಿದೆ."

ಅವರು ಹೀಗೆಯೂ ಹೇಳಿದರು: "ಅಹ್ಮದಿಯರ ವಿರುದ್ಧ ನಿರಂತರ ದೌರ್ಜನ್ಯ, ಭೇದ ಭಾವ ಮತ್ತು ಪ್ರಚೋದನೆಯನ್ನು ತಡೆಗಟ್ಟದೆ ಸರಕಾರವು ಅವುಗಳಿಗೆ ಅನುಮತಿ ನೀಡಿದುದರ ಪರಿಣಾಮವಾಗಿ ಅಲ್‌ಖಾಯಿದ ಮತ್ತು ತಾಲಿಬಾನ್ ಹಾಗಿರುವ ಉಗ್ರವಾದಿ ಗುಂಪುಗಳು ಬೆಳವಣಿಗೆಯನ್ನು ಪಡೆದಿವೆ. ಅಹ್ಮದಿಯರ ಸಹಿತ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರದಲ್ಲಿ ತೀವ್ರತೆ ಉಂಟಾಗಿದೆ." ಇಮಾಮ್ ಶಮ್‌ಶಾದ್ ಅಹ್ಮದ್ ನಾಸಿರ್ ಪ್ರಕಾರ ಅಹ್ಮದಿಯರು ವಿಶ್ವದ 195 ದೇಶಗಳಲ್ಲಿ ವಾಸಿಸುತ್ತಿರುವ ಶಾಂತಿಪ್ರಿಯರಾದ ಜನರಾಗಿದ್ದಾರೆ. ಹೀಗಿದ್ದರೂ ಪಾಕಿಸ್ತಾನದ ಹಾಗಿರುವ ದೇಶಗಳಲ್ಲಿ ಧಾರ್ಮಿಕ ಉಗ್ರವಾದಿಗಳ ಕೈಗಳಿಂದ ತೀವ್ರ ಮೃಗೀಯ ಹಿಂಸಾಚಾರವನ್ನು ನಿರಂತರ ಅನುಭವಿಸುತ್ತಿದ್ದಾರೆ." ಇಮಾಮ್ ಶಮ್‌ಶಾದ್ ನಾಸಿರ್ ಬಿ.ಬಿ.ಸಿ. ಉರ್ದು ವರದಿಗಾರರೊಂದಿಗೆ ಹೀಗೆ ಹೇಳಿದರು: ಅಹ್ಮದಿಯಾ ಸಮುದಾಯಕ್ಕೆ ಸೇರಿದ ಅಂದಾಜು ಹದಿನಾಲ್ಕರಿಂದ ಹದಿನೈದು ಸಾವಿರದಷ್ಟು ಜನರು ಅಮೇರಿಕದಲ್ಲಿ ವಾಸಿಸುತ್ತಿದ್ದಾರೆ.

ಲಾಹೊರ್‌ನಲ್ಲಿ ಉಗ್ರರಿಂದ ಹತ್ಯೆಗೊಳಿಸಲ್ಪಟ್ಟವರಿಗೋಸ್ಕರ ನ್ಯೂಯಾರ್ಕ್, ನ್ಯೂಜೆರ್ಸೀ ಮತ್ತು ಕ್ಯಾಲಿಫೋರ್ನಿಯಾದಲ್ಲಿ ನಮಾಝುಲ್ ಜನಾಝ ಗಾಯಿಬ್ ಸಾಮೂಹಿಕವಾಗಿ ಅನುಷ್ಠಿಸಲಾಯಿತು. ಇದರಲ್ಲಿ ಹತ್ಯೆಗೊಂಡವರ ಸಂಬಂಧಿಕರು ಮತ್ತು ಜಮಾಅತಿನ ಇತರ ಸದಸ್ಯರು ಮಾತ್ರವಲ್ಲ, ಇತರ ಪಂಗಡಗಳಿಗೆ ಸೇರಿದ, ಮೂಲತಃ ಪಾಕಿಸ್ತಾನದಿಂದ ವಲಸೆ ಬಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ●

**(ಬಿ.ಬಿ.ಸಿ. ಉರ್ದು ಸರ್ವೀಸ್, ಲಂಡನ್ ಎಡಿಶನ್, ಪಾಕಿಸ್ತಾನ್ 29-5-2010)**

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಜಮಾಅತಾಗಿ ಮಾಡುವ ನಮಾಝ್

ಒಬ್ಬರಿಗಿಂತ ಹೆಚ್ಚು ಜನ ಸೇರಿ ಮಾಡುವ ನಮಾಝ್ ಸಲಾತುಲ್ ಜಮಾಅತ್ ಆಗಿದೆ. ಒಬ್ಬ ಇಮಾಮ್ ಮತ್ತು ಒಬ್ಬ ಮಅ್‌ಮೂಮ್ (ಹಿಂಬಾಲಕ) ಇರಬೇಕು. ಐದು ಸಲದ ಪ್ರಾರ್ಥನೆಗಳನ್ನು ಜಮಾಅತಾಗಿ ಅನುಷ್ಠಿಸಬೇಕು. ಫರ್ಝ್ ಪ್ರಾರ್ಥನೆಗಳನ್ನು ಜಮಾಅತಾಗಿ ನಿರ್ವಹಿಸಬೇಕೆಂದು ಹಝ್ರತ್ ಪೈಗಂಬರರು(ಸ) ಒತ್ತಿ ಹೇಳಿರುವರು. ಜಮಾಅತಾಗಿ ನಮಾಝ್ ಮಾಡಲು ಹೋಗದವರ ಬಗ್ಗೆ ಹಝ್ರತ್ ಪೈಗಂಬರರು(ಸ) ಬಹಳ ಅತೃಪ್ತಿಯನ್ನು ಪ್ರಕಟಿಸಿದ್ದರು. ವಿಶಿಷ್ಟವಾಗಿ ಫಜ್‌ರ್ (ಸುಬ್‌ಹ್) ಮತ್ತು ಇಶಾಅ್ ನಮಾಝ್ ಜಮಾಅತಾಗಿ ನಿರ್ವಹಿಸದವರಿಗೆ ಪೈಗಂಬರರು(ಸ) ಎಚ್ಚರಿಕೆ ನೀಡಿದ್ದರು.

ಜಮಾಅತಾಗಿ ನಮಾಝ್ ಮಾಡುವುದು ಹೀಗೆ: ಇಮಾಮ್ ನಮಾಝ್‌ಗಾಗಿ ಬಂದು ನಿಂತರೆ ಮುಖ್ತದೀ (ಹಿಂದೆ ನಿಲ್ಲುವವರು) ಸಫ್ಫು (ಸಾಲು)ಗಳನ್ನು ಸರಿಪಡಿಸಬೇಕು. ಇಮಾಮ್ ಅಲ್ಲಾಹು ಅಕ್‌ಬರ್ ಎಂದು ಹೇಳಿ ಕೈ ಕಟ್ಟಿದಾಗ ಅವರ ಹಿಂದೆ ಇರುವವರು ಮೆಲ್ಲಗೆ ಅಲ್ಲಾಹು ಅಕ್‌ಬರ್ ಎಂದು ಹೇಳಿ ಕೈ ಕಟ್ಟಬೇಕು. ಅನಂತರ "ಸುಬ್‌ಹಾನಕಲ್ಲಾಹುಮ್ಮ", "ಅಊಧು" ಮತ್ತು "ಬಿಸ್ಮಿ" ಓದಬೇಕು. ಇಮಾಮ್ ಸೂರತುಲ್ ಫಾತಿಹ ಓದುವಾಗ ಅವರ ಹಿಂದೆ ಇರುವವರು ಸೂರತುಲ್ ಫಾತಿಹ ಮೆಲ್ಲಗೆ ಓದಬೇಕು. ಇಮಾಮ್ ಪವಿತ್ರ ಖುರ್‌ಆನಿನ ಇತರ ವಚನಗಳನ್ನು ಓದುವಾಗ ಇಮಾಮರ ಹಿಂದೆ ಇರುವವರು ಆ ವಚನಗಳನ್ನು ಆಲಿಸುತ್ತಾ ಇದ್ದರೆ ಸಾಕು. ಇಮಾಮ್ ಅಲ್ಲಾಹು ಅಕ್‌ಬರ್ ಎಂದು ಹೇಳಿ ರುಕೂಅ್ ಮಾಡಿದಾಗ ಅವರ ಹಿಂದೆ ಇರುವವರು ಅಲ್ಲಾಹು ಅಕ್‌ಬರ್ ಎಂದು ಹೇಳಿ ರುಕೂಅ್ ಮಾಡಿ "ಸುಬ್‌ಹಾನ ರಬ್ಬಿಯಲ್ ಅಝೀಮ್" ಎಂದು ಹೇಳಬೇಕು. ಇಮಾಮ್ ಸಮಿಅಲ್ಲಾಹು ಲಿಮನ ಹಮಿದ ಎಂದು ಹೇಳಿ ರುಕೂಅ್‌ನಿಂದ ಎಂದು ನಿಂತಾಗ ಅವರ ಹಿಂದೆ ಇರುವವರು ರುಕೂಅ್‌ನಿಂದ ಎದ್ದು "ರಬ್ಬನಾ ಲಕಲ್‌ಹಮ್ದು ಹಮ್‌ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ" ಎಂದು ಹೇಳಬೇಕು. ಇಮಾಮ್ ಅಲ್ಲಾಹು ಅಕ್‌ಬರ್ ಎಂದು ಹೇಳಿ ಸುಜೂದ್ ಮಾಡಿದಾಗ ಅವರ ಹಿಂದೆ ಇರುವವರೂ ಸುಜೂದ್ ಮಾಡಿ "ಸುಬ್‌ಹಾನ ರಬ್ಬಿಯಲ್ ಅಅ್‌ಲಾ" ಎಂದು ಹೇಳಬೇಕು. ಇಮಾಮ್ ಎದ್ದು ಕುಳಿತಾಗ ಅವರ ಹಿಂದೆ ಇರುವವರೂ ಎದ್ದು ಕುಳಿತು ದುಆ ಹೇಳಬೇಕು. ಇದೇ ಪ್ರಕಾರ ನಮಾಝಿನ ಉಳಿದ ಭಾಗಗಳನ್ನು ಇಮಾಮರನ್ನು ಅನುಸರಿಸುತ್ತಾ ಪೂರ್ಣಗೊಳಿಸಬೇಕು. ಇಮಾಮ್ ಸಲಾಮ್ ಹೇಳಿದ ನಂತರ ಅವರ ಹಿಂದೆ ಇರುವವರೂ ಸಲಾಮ್ ಹೇಳಿ ನಮಾಝ್ ಕೊನೆಗೊಳಿಸಬೇಕು.

ನಮಾಝ್ ಮಾಡುವಾಗ ಇಮಾಮ್ ಏನಾದರೂ ಮರೆತುಹೋದರೆ ಅಥವಾ ಬೇರೆ ಏನಾದರೂ ಹೆಚ್ಚುಕಮ್ಮಿಯಾದರೆ ಸಲಾಮ್ ಮಾಡುವ ಮೊದಲು ಅಥವಾ ಅನಂತರ ಸಹ್‌ವಿನ ಎರಡು ಸುಜೂದ್ ಮಾಡಿ "ಸುಬ್‌ಹಾನಲ್ಲಿಧೀ ಲಾ ಯನಾಮು ವಲಾ ಯಸ್‌ಹೂ" (ಅರ್ಥ: ಎಂದೂ ನಿದ್ರಿಸದ ಮತ್ತು ಎಂದೂ ಮರೆತುಹೋಗದವನಾದ ಅಲ್ಲಾಹನೇ ಪರಿಶುದ್ಧನು) ಎಂದು ಆ ಸುಜೂದ್‌ಗಳಲ್ಲಿ ಹೇಳಬೇಕು.

ಇಮಾಮ್ ಜೊತೆ ಅವರ ಹಿಂದೆ ನಿಂತು ಪ್ರಾರ್ಥಿಸುವವರೂ ಈ ಸುಜೂದ್' ಮಾಡಬೇಕು. ಇಮಾಮ್ ಇಂತಹ ಸುಜೂದ್ ಮಾಡದಿದ್ದರೆ ಅವರ ಹಿಂದೆ ನಿಂತವರು ಈ ಸುಜೂದ್ ಮಾಡಬೇಕೆಂದಿಲ್ಲ.

ಜಮಾಅತ್ ಪ್ರಾರ್ಥನೆಗೆ ಒಬ್ಬ ವ್ಯಕ್ತಿ ತಡವಾಗಿ ಬಂದು ಸೇರಿದರೆ ಇಮಾಮ್ ಸಲಾಮ್ ಹೇಳುವಾಗ ಆ ವ್ಯಕ್ತಿ ಸಲಾಮ್ ಹೇಳದೆ ಎದ್ದು ನಿಂತು ಬಿಟ್ಟುಹೋದ ರಕ್‌ಅತ್‌ಗಳನ್ನು ಪೂರ್ಣಗೊಳಿಸಬೇಕು.

## ಕೆಲವು ಪ್ರಧಾನ ಸಂಗತಿಗಳು

ಹೆಚ್ಚು ಧಾರ್ಮಿಕ ಅರಿವು ಉಳ್ಳ ಒಬ್ಬರನ್ನು ಇಮಾಮ್ ಆಗಿ ನಿಶ್ಚಯಿಸಬೇಕು. ಅರಿವಿನಲ್ಲಿ ಎಲ್ಲರೂ ಸಮಾನರಾಗಿದ್ದರೆ ಎಲ್ಲರಿಗಿಂತಲೂ ಚೆನ್ನಾಗಿ ಪವಿತ್ರ ಖುರ್‌ಆನ್ ಓದಬಲ್ಲವರನ್ನು ಇಮಾಮ್ ಆಗಿ ನಿಶ್ಚಯಿಸಬೇಕು. ಪವಿತ್ರ ಖುರ್‌ಆನ್ ಎಲ್ಲರೂ ಚೆನ್ನಾಗಿ ಓದಬಲ್ಲವರಾಗಿದ್ದರೆ ಹೆಚ್ಚು ಭಯಭಕ್ತಿಯುಳ್ಳ ಒಬ್ಬರನ್ನು ಇಮಾಮ್ ಆಗಿ ನಿಶ್ಚಯಿಸಬೇಕು. ಅದರಲ್ಲೂ ಎಲ್ಲರೂ ಸಮಾನರಾಗಿದ್ದರೆ ಅವರ ಪೈಕಿ ಹೆಚ್ಚು ವಯಸ್ಸಾದವರನ್ನು ಇಮಾಮ್ ಆಗಿ ನಿಶ್ಚಯಿಸಬೇಕು.

ಇಮಮ್ ನಮಾಝನ್ನು ದೀರ್ಘಗೊಳಿಸಬಾರದು. ಏಕೆಂದರೆ ಇಮಾಮರ ಹಿಂದೆ ನಿಂತ ಮಕ್ಕಳಿಗೂ ವೃದ್ಧರಿಗೂ ರೋಗಿಗಳಿಗೂ ಬಲಹೀನರಿಗೂ ಬೇಗನೆ ಹೋಗಲಿರುವವರಿಗೂ ಇದು ಅಸೌಕರ್ಯವನ್ನುಂಟುಮಾಡುವುದು.

ಪುರುಷರಿಗೆ ಸ್ತ್ರೀಯರು ಇಮಾಮ್ ಆಗಬಾರದು. ಆದರೆ ಸ್ತ್ರೀಯರಿಗೆ ಸ್ತ್ರೀಯರು ಇಮಾಮ್ ಆಗಬಹುದು. ಒಬ್ಬ ಇಮಾಮರನ್ನು ಜನರು ಇಷ್ಟಪಡುವುದಿಲ್ಲವಾದರೆ ಆ ವ್ಯಕ್ತಿ ಇಮಾಮ್ ಆಗಿ ನಿಲ್ಲಬಾರದು.

## ನಮಾಝಿನ ಮಕ್‌ರೂಹಾತ್ (ಅತೃಪ್ತಿಕರವಾದ ಕಾರ್ಯಗಳು)

ತಲೆಯನ್ನು ಮುಚ್ಚದೆ ನಮಾಝ್ ಮಾಡುವುದು, ಎಡ ಬಲ ಅಥವಾ ಆಕಾಶದ ಕಡೆಗೆ ನೋಡುವುದು, ಅನಾವಶ್ಯಕವಾಗಿ ಕೆಮ್ಮುವುದು, ಮಲಮೂತ್ರ ವಿಸರ್ಜನೆ ಮಾಡುವ ಆವಶ್ಯಕತೆ ಇದ್ದರೂ ಅದನ್ನು ತಡೆದಿಟ್ಟುಕೊಂಡು ಅಶ್ರದ್ಧೆಯಿಂದ ನಮಾಝ್ ಮಾಡುವುದು, ಆಕಳಿಸುವುದು, ಹಣೆಗೆ ಮಣ್ಣು ತಗಲಿದರೆ ಅದನ್ನು ನಮಾಝ್ ಮಧ್ಯೆ ಉಜ್ಜುವುದು, ಬಟ್ಟೆಗಳಿಗೆ ಮಣ್ಣು ತಗಲದಂತೆ ಅವುಗಳನ್ನು ಮಡಚುವುದು ಅಥವಾ ಎತ್ತಿ ಹಿಡಿಯುವುದು, ಹಣೆ ತಾಗುವಲ್ಲಿಂದ ಮಣ್ಣು ಅಥವಾ ಕಲ್ಲುಗಳನ್ನು ದೂರ ಸರಿಸುವುದು, ನಮಾಝ್ ಮಾಡುವಾಗ ಬೆರಳಿನ ನೆಟಿಕೆ ತೆಗೆಯುವುದು, ಸುಜೂದ್ ಮಾಡುವಾಗ ಎರಡು ಮೊಣಕೈಗಳನ್ನು ನೆಲಕ್ಕೆ ಸೇರಿಸಿ ಇಡುವುದು, ತೊಡೆಗಳನ್ನು ಹೊಟ್ಟೆಗೆ ತಗಲಿಸಿಡುವುದು ಇವುಗಳೆಲ್ಲ ನಮಾಝ್ ಮಾಡುವಾಗ ಮಾಡಬಾರದ ಸಂಗತಿಗಳಾಗಿವೆ. ರುಕೂಅ್ ಮತ್ತು ಸುಜೂದ್

ಇಮಾಮ್‌ರವರಿಗಿಂತ ಮುಂಚಿತವಾಗಿ ಮಾಡುವುದು ಸಹ ವಿರೋಧಿಸಲ್ಪಟ್ಟಿದೆ.

## ವಿತ್‌ರ್ ನಮಾಝ್

ವಿತ್‌ರ್ ನಮಾಝ್ ಬಹಳ ಪ್ರಧಾನವಾದ ನಮಾಝ್ ಆಗಿದೆ. ಯಾತ್ರೆಯಲ್ಲೂ ಹಝ್‌ರತ್ ಪೈಗಂಬರ್[ಸ] ಈ ನಮಾಝ್ ತಪ್ಪದೆ ಮಾಡುತ್ತಿದ್ದರು. ಅದಕ್ಕೆ ಮೂರು ರಕ್‌ಅತ್‌ಗಳಿವೆ. ಮೂರು ರಕ್‌ಅತ್ ಒಟ್ಟಿಗೆ ಅಥವಾ ಎರಡು ರಕ್‌ಅತ್‌ಗಳು ಪ್ರಾರ್ಥಿಸಿದ ನಂತರ ಸಲಾಮ್ ಹೇಳಿ ಮೂರನೆಯ ರಕ್‌ಅತ್ ಬೇರೆಯಾಗಿ ಪ್ರಾರ್ಥಿಸಬಹುದು. ವಿತ್‌ರ್ ನಮಾಝಿನ ಮೂರನೆಯ ರಕ್‌ಅತ್‌ನಲ್ಲಿ ರುಕೂಗೆ ಮೊದಲು ಅಥವಾ ರುಕೂ ಮಾಡಿದ ನಂತರ ಖುನೂತ್ ಪ್ರಾರ್ಥನೆ ಮಾಡಬೇಕು. ಅದು ಹೀಗೆ:

اَللّٰهُمَّ إِنَّا نَسْتَعِيْنُكَ وَنَسْتَغْفِرُكَ وَنُؤْمِنُ بِكَ وَنَتَوَكَّلُ عَلَيْكَ وَنُثْنِيْ عَلَيْكَ الْخَيْرَ وَنَشْكُرُكَ وَلَا نَكْفُرُكَ وَنَخْلَعُ وَنَتْرُكُ مَنْ يَّفْجُرُكَ. اَللّٰهُمَّ إِيَّاكَ نَعْبُدُ وَلَكَ نُصَلِّيْ وَنَسْجُدُ وَإِلَيْكَ نَسْعٰى وَنَحْفِدُ وَنَرْجُوْا رَحْمَتَكَ وَنَخْشٰى عَذَابَكَ إِنَّ عَذَابَكَ بِالْكُفَّارِ مُلْحِقٌ.

ಅಲ್ಲಾಹುಮ್ಮ ಇನ್ನಾ ನಸ್ತಈನುಕ ವ ನಸ್ತಗ್ ಫಿರುಕ ವ ನೂಮಿನು ಬಿಕ ವ ನತವಕ್ಕಲು ಅಲೈಕ ವ ನುಸ್‌ನೀ ಅಲೈಕಲ್ ಖೈರ ವ ನಶ್‌ಕುರುಕ ವಲಾ ನಕ್‌ಫುರುಕ ವ ನಖ್‌ಲಉ ವ ನತ್‌ರುಕು ಮನ್ ಯಫ್‌ಜುರುಕ. ಅಲ್ಲಾಹುಮ್ಮ ಇಯ್ಯಾಕ ನಅ್‌ಬುದು ವ ಲಕ ನುಸಲ್ಲೀ ವ ನಸ್‌ಜುದು ವ ಇಲೈಕ ನಸ್‌ಆ ವ ನಹ್‌ಫಿದು ವ ನರ್‌ಜೂ ರಹ್ಮತಕ ವ ನಖ್‌ಶಾ ಅಧಾಬಕ ಇನ್ನ ಅಧಾಬಕ ಬಿಲ್‌ಕುಫ್ಫಾರಿ ಮುಲ್‌ಹಿಖಿನ್

ಅರ್ಥ : ಓ ಅಲ್ಲಾಹ್, ನಾವು ನಿನ್ನಿಂದ ಸಹಾಯ ಯಾಚನೆ ಮಾಡುತ್ತೇವೆ ಮತ್ತು ನಿನ್ನಿಂದ ಕ್ಷಮಾಪಣೆ ಕೋರುತ್ತೇವೆ. ನಾವು ನಿನ್ನನ್ನು ನಂಬುತ್ತೇವೆ ಮತ್ತು ನಿನ್ನ ಮೇಲೆ ಭರವಸೆ ಇಟ್ಟಿದ್ದೇವೆ. ನಾವು ನಿನ್ನ ಒಳಿತುಗಳನ್ನು ಕೊಂಡಾಡುತ್ತೇವೆ. ನಾವು ನಿನಗೆ ಕೃತಜ್ಞತೆ ಅರ್ಪಿಸುತ್ತೇವೆ. ನಾವು ನಿನಗೆ ಕೃತಘ್ನರಾಗಲಾರೆವು. ನಿನ್ನ ಆಜ್ಞೆಗಳನ್ನು ಪಾಲಿಸದವರಿಂದ ನಾವು ಬೇರೆಯಾಗಿ ಅವರನ್ನು ಬಿಟ್ಟು ಬಿಡುತ್ತೇವೆ. ಓ ಅಲ್ಲಾಹ್, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ, ನಿನಗೆ ಮಾತ್ರ ನಾವು ನಮಾಝ್ ಮಾಡುತ್ತೇವೆ ಮತ್ತು ನಿನ್ನನ್ನು ಮಾತ್ರ ಸಂಪೂರ್ಣವಾಗಿ ಅನುಸರಿಸುತ್ತೇವೆ. ನಿನ್ನ ಬಳಿಗೆ ನಾವು ಓಡಿ ಬರುತ್ತೇವೆ ಮತ್ತು ನಿನ್ನ ಸನ್ನಿಧಿಯಲ್ಲಿಯೇ ನಿಲ್ಲುತ್ತೇವೆ. ನಾವು ನಿನ್ನ ಕಾರುಣ್ಯವನ್ನು ಆಶಿಸುತ್ತೇವೆ. ನಾವು ನಿನ್ನ ಶಿಕ್ಷೆಯ ಬಗ್ಗೆ ಭಯಭೀತರಾಗಿದ್ದೇವೆ. ನಿಶ್ಚಯವಾಗಿಯೂ ನಿನ್ನ ಶಿಕ್ಷೆ ಅವಿಶ್ವಾಸಿಗಳಿಗೆ ಬಂದೆರಗಲಿದೆ.

ಇನ್ನೊಂದು ಖುನೂತ್ ದುಆ ಸಹ ಇದೆ. ಅದು ಹೀಗೆ:

اَللّٰهُمَّ اهْدِنِيْ فِيْمَنْ هَدَيْتَ وَعَافِنِيْ فِيْمَنْ عَافَيْتَ وَتَوَلَّنِيْ فِيْمَنْ تَوَلَّيْتَ وَبَارِكْ لِيْ فِيْمَا أَعْطَيْتَ وَقِنِيْ شَرَّ مَا قَضَيْتَ فَإِنَّكَ تَقْضِيْ وَلَا يُقْضٰى عَلَيْكَ إِنَّهُ لَا يَذِلُّ مَنْ وَّالَيْتَ وَإِنَّهُ لَا يَعِزُّ مَنْ عَادَيْتَ. تَبَارَكْتَ رَبَّنَا وَتَعَالَيْتَ وَصَلَّى اللّٰهُ عَلٰى خَيْرِ خَلْقِهِ مُحَمَّدٍ وَّآلِهِ وَأَصْحَابِهِ أَجْمَعِيْنَ.

ಅಲ್ಲಾಹುಮ್ಮಹ್‌ದಿನೀ ಫೀಮನ್ ಹದೈತ ವ ಆಫಿನೀ ಫೀಮನ್ ಅಫೈತ ವತವಲ್ಲನೀ ಫೀಮನ್ ತವಲ್ಲೈತ ವ ಬಾರಿಕ್ ಲೀ ಫೀಮಾ ಅಅ್‌ತೈತ ವಖಿನೀ ಶರ್ರ ಮಾ ಖಝ್ಯೈತ ಫ ಇನ್ನಕ ತಖ್‌ಝೀ ವಲಾ ಯಖ್‌ಝಾ ಅಲೈಕ ಇನ್ನಹೂ ಲಾ ಯಧಿಲ್ಲು ಮನ್‌ವಾಲೈತ ವ ಇನ್ನಹೂ ಲಾ ಯಇಝ್ಝು ಮನ್ ಆದೈತ ತಬಾರಕ್ತ ರಬ್ಬನಾ ವ ತಆಲೈತ ವ ಸಲ್ಲಲ್ಲಾಹು ಅಲಾ ಖೈರಿ ಖಲ್‌ಖಿಹೀ ಮುಹಮ್ಮದಿನ್ ವ ಆಲಿಹೀ ವ ಅಸ್‌ಹಾಬಿಹೀ ಅಜ್‌ಮಈನ್

ಅರ್ಥ: ಓ ಅಲ್ಲಾಹ್, ನೀನು ನೇರವಾದ ಮಾರ್ಗ ನೀಡಿದವರೊಂದಿಗೆ ನನಗೂ ನೇರವಾದ ಮಾರ್ಗವನ್ನು ದಯಪಾಲಿಸು. ನೀನು ಆರೋಗ್ಯ ನೀಡಿದವರೊಂದಿಗೆ ನನಗೂ ಆರೋಗ್ಯ ನೀಡು. ನೀನು ಮಿತ್ರರನ್ನಾಗಿ ಮಾಡಿಕೊಂಡವರ ಜೊತೆಗೆ ನನ್ನನ್ನೂ ಮಿತ್ರನನ್ನಾಗಿ ಮಾಡು. ನೀನು ಕೊಟ್ಟ ವಸ್ತುಗಳಲ್ಲಿ ನನಗೆ ಬರಕತ್ತು ನೀಡು. ನೀನು ನಿರ್ಧರಿಸಿದ ಸಂಗತಿಗಳ ಕೆಟ್ಟ ಪರಿಣಾಮಗಳಿಂದ ನನ್ನನ್ನು ರಕ್ಷಿಸು. ನೀನೇ ನಿಶ್ಚಯವಾಗಿಯೂ ಎಲ್ಲಾ ಸಂಗತಿಗಳ ಬಗ್ಗೆ ನಿರ್ಧರಿಸುವೆ. ನಿನ್ನ ನಿರ್ಧಾರದ ವಿರುದ್ಧ ನಿರ್ಧರಿಸುವವರು ಯಾರೂ ಇಲ್ಲ. ನೀನು ಯಾರನ್ನು ಮಿತ್ರನನ್ನಾಗಿ ಮಾಡಿರುವೆಯೋ ಅವನು ಹೀನೈಸಲ್ಪಡಲಾರನು. ನೀನು ನಿನ್ನ ಶತ್ರುವೆಂದು ಹೊರತಳ್ಳಿದವನು ಗೌರವಿಸಲ್ಪಡಲಾರನು. ನಮ್ಮ ಪ್ರಭೂ, ನೀನು ಎಣಿಸಲಾಗದ ಅನುಗ್ರಹಗಳ ಒಡೆಯನೂ ಅತ್ಯುನ್ನತನೂ ಆಗಿರುವೆ. ಸೃಷ್ಟಿಗಳಲ್ಲಿ ಅತ್ಯುತ್ತಮನಾದ ಮುಹಮ್ಮದ್ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆಯೂ ಅವರ ಕುಟುಂಬದ ಮೇಲೆಯೂ ಅವರ ಶಿಷ್ಯರ ಮೇಲೆಯೂ ಎಲ್ಲರ ಮೇಲೆಯೂ ಅಲ್ಲಾಹನು ತನ್ನ ಶುಭಾಶೀರ್ವಾದಗಳನ್ನು ಸುರಿಸಲಿ.

ವಿತ್‌ರ್ ನಮಾಝ್ ಇಶಾ ನಮಾಝ್ ಮಾಡಿದ ನಂತರ ಮುಂಬೆಳಗಿನ ತನಕ ಮಾಡಬಹುದು. ರಾತ್ರಿಯ ಕೊನೆಯ ಭಾಗದಲ್ಲಿ ಎದ್ದು ತಹಜ್ಜುದು ನಮಾಝ್ ಮಾಡುವವರು ತಹಜ್ಜುದ್ ನಮಾಝಿನ ನಂತರ ವಿತ್‌ರ್ ನಮಾಝ್ ಮಾಡಬೇಕು. ತಹಜ್ಜುದ್ ನಮಾಝ್ ಮಾಡದವರು ಇಶಾ ನಮಾಝಿನ ನಂತರ ಸುನ್ನತ್ ನಮಾಝ್ ಮಾಡಿದ ಮೇಲೆ ವಿತ್‌ರ್ ನಮಾಝ್ ಮಾಡಬೇಕು.

## ಮರೆತುಹೋದುದಕ್ಕಾಗಿ ಸುಜೂದ್ (ಸುಜೂದುಸ್ಸಹ್‌ವ್)


ನಮಾಝ್ ಮಾಡುವಾಗ ಯಾವುದಾದರೂ ಕ್ರಿಯೆಯನ್ನು ಮರೆತರೆ ಅದನ್ನು ಮೊದಲು ಮಾಡಿ ಅನಂತರ ಸಲಾಮ್ ಮಾಡುವ ಮೊದಲು ಎರಡು ಸುಜೂದ್‌ಗಳನ್ನು ಮಾಡಬೇಕು.

ನಮಾಝ್ ಮಧ್ಯೆ ರಕ್‌ಅತ್‌ಗಳ ಬಗ್ಗೆ ಸಂಶಯ ಉಂಟಾದರೆ ಸಂಶಯಾತೀತವಾದ ಸಂಖ್ಯೆಯನ್ನು ಸ್ವೀಕರಿಸಿ ನಮಾಝ್ ಪೂರ್ಣಗೊಳಿಸಬೇಕು ಮತ್ತು ಸುಜೂದುಸ್ಸಹ್‌ವ್ ಮಾಡಬೇಕು. ನಿಶ್ಚಿತ ರಕ್‌ಅತ್‌ಗಳಿಗಿಂತ ಹೆಚ್ಚು ರಕ್‌ಅತ್ ಆಗಿದ್ದರೂ ಈ ಸುಜೂದ್ ಮಾಡಬೇಕು.

## ಪ್ರತಿಕ್ರಿಯೆ

# 73 ಪಾರ್ಟಿಗಳು ಮತ್ತು ಸ್ವರ್ಗ

ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 2006ರಲ್ಲಿ ಆಸ್ಟ್ರೇಲಿಯಾದ ಬ್ರಿಸ್‌ಬೇನ್‌ನಲ್ಲಿ ಜರಗಿದ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದಾಗ ತೆಗೆದ ಈ ಫೋಟೋ ಸಹಿತ ಮೇಲಿನ ಶೀರ್ಷಿಕೆಯಲ್ಲಿ 'ಸನ್ಮಾರ್ಗ'ವಾರ ಪತ್ರಿಕೆ 2010 ಎಪ್ರಿಲ್ 18-24 ಸಂಚಿಕೆಯಲ್ಲಿ ಲೇಖನ ಪ್ರಕಟಿಸಿದೆ.



ಮುಸ್ಲಿಮರ 73 ಪಂಗಡಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಮೊದಲೇ ಸೂಚಿಸಿದ ಲಕ್ಷಣವುಳ್ಳ ಏಕೈಕ ಪಂಗಡ, ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಂ ಜಮಾಅತ್ ಮಾತ್ರವಾಗಿದೆ. ಆ ಜಮಾಅತಿನ ಲೋಕೈಕ ನಾಯಕ ಖಲೀಫರ ಫೋಟೋ "ಸನ್ಮಾರ್ಗ"ದಲ್ಲಿ ಯಾದೃಚ್ಛಿಕವಾಗಿ ಪ್ರಕಟವಾಗಿದ್ದರೂ ಅದು ಸಮಂಜಸವೇ ಆಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ನುಡಿದಿದ್ದರು:

"ಇಸ್ರಾಯೀಲ್ಯರು 72 ಪಂಗಡಗಳಾಗಿ ವಿಭಜಿಸಲ್ಪಟ್ಟಿದ್ದರು. ಆದರೆ ನನ್ನ ಸಮುದಾಯದವರು 73 ಪಂಗಡಗಳಾಗಿ ವಿಭಜಿಸಲ್ಪಡುವರು. ಒಂದು ಪಂಗಡದ ಹೊರತು ಎಲ್ಲರೂ ನರಕಕ್ಕೆ ಹೋಗುವರು. ಆಗ ಶಿಷ್ಯರು, ಅವರು ಯಾರೆಂದು ಕೇಳಿದರು. ಪೈಗಂಬರ್[ಸ] ಮರುನುಡಿದರು: ನಾನು ಮತ್ತು ನನ್ನ ಸಹಾಬ ಇರುವಂತೆ ಅವರು ಇರುವರು". (ಜಾಮಿಅ ತಿರ್ಮಿದಿ – ಕಿತಾಬುಲ್ ಈಮಾನ್, ಭಾಗ 18, ಸಂಪುಟ 5, ಪುಟ 26)

ನಾನು ಮತ್ತು ನನ್ನ ಸಹಾಬ ಇರುವ ರೀತಿಯಲ್ಲಿ ಆ ಸ್ವರ್ಗಾರ್ಹ ಪಂಗಡದವರು ಇರುವರೆಂದು ಪೈಗಂಬರರು[ಸ] ಹೇಳಿದ್ದು ಗಮನಾರ್ಹವಾಗಿದೆ. ಪೈಗಂಬರರ[ಸ] ಕಾಲದಲ್ಲಿ, ಅವರು ಮುಸ್ಲಿಂ ಸಮುದಾಯದ ನಾಯಕರಾಗಿದ್ದರು. ಅವರ ಆದೇಶ ನಿರ್ದೇಶಗಳಂತೆ ಆ ಸಮುದಾಯದವರು ನಡೆಯುತ್ತಿದ್ದರು. ಇಂದು ಆ ಲಕ್ಷಣವಿರುವ ಏಕಮಾತ್ರ ಪಂಗಡ ಅಹ್ಮದಿಯಾ ಮುಸ್ಲಿಂ ಜಮಾಅತ್ ಆಗಿದೆ. ಪವಿತ್ರ ಖುರ್‌ಆನಿನ ಪಾಠಗಳಿಗನುಸಾರವಾಗಿ ತಮ್ಮ ಲೋಕೈಕ ನಾಯಕರಾದ ಖಲೀಫ ನೀಡುವ ಉಪದೇಶ, ನಿರ್ದೇಶಾನುಸಾರ ಲೋಕದಲ್ಲೆಡೆ ಇರುವ ಅಹ್ಮದೀ ಮುಸ್ಲಿಮರು ವರ್ತಿಸುತ್ತಾರೆ. "ನೀವೆಲ್ಲರೂ ಒಟ್ಟು ಸೇರಿಕೊಂಡು ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ; ಭಿನ್ನ ಭಿನ್ನರಾಗದಿರಿ" ಎಂಬ ಖುರ್‌ಆನ್ ಆಜ್ಞೆಯನ್ನು (3:104) ಅವರು ಅಕ್ಷರಶಃ ಪಾಲಿಸುತ್ತಾರೆ. ಲೋಕವು ಮರೆತು ಹೊದ ಖುರ್‌ಆನಿನ ಅಧ್ಯಾಪನಗಳನ್ನು ಪುನಃ ಜಾರಿಗೊಳಿಸಲು ಬಂದ ಇಮಾಮ್ ಮಹ್‌ದಿಯನ್ನು ಅವರು ಸ್ವೀಕರಿಸಿದವರಾಗಿದ್ದಾರೆ.

ಮುಸ್ಲಿಂ ಸಮುದಾಯದ ಇತರ ಪಂಗಡಗಳು ಖುರ್‌ಆನಿನ ಪಾಠಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಬೋಧಿಸಿದ ರೀತಿಯಲ್ಲಿ ಅನುಸರಿಸದ ಕಾರಣ ಅವರಲ್ಲಿ ಒಗ್ಗಟ್ಟು ಇಲ್ಲ. ಪಂಗಡಗಳು ಪರಸ್ಪರ ಕಾಫಿರ್ ಎಂದು ಘೋಷಿಸುತ್ತವೆ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ನುಡಿದಿದ್ದರು: "ಮುಂದೊಂದು ಕಾಲ ಬರುವುದು. ಆಗ ಇಸ್ಲಾಮಿನ ನಾಮ ಮಾತ್ರ ಬಾಕಿಯಗುವುದು. ಖುರ್‌ಆನಿನ ಲಿಪಿ ಮಾತ್ರ ಬಾಕಿಯುಳಿಯುವುದು. ಅವರ ಮಸೀದಿಗಳು ಜನರಿಂದ ತುಂಬಿರುವುವು; ಆದರೆ ದೇವಭಕ್ತಿ ಇರಲಾರದು. ಅವರ ಉಲಮಾ (ಧರ್ಮ ಪಂಡಿತರು) ಆಕಾಶದ ಕೆಳಗೆ ಅತ್ಯಂತ ನಿಕೃಷ್ಟ ಜೀವಿಗಳಾಗಿರುವರು. ಪಿತೂರಿಗಳು ಅವರಿಂದ ನಿರ್ಗಮಿಸುವುವು ಮತ್ತು ಅವರೆಡೆಗೆಯೇ ಮರಳುವುವು." (ಮಿಶ್ಕಾತುಲ್ ಮಸಾಬಿಹ್–ಸಂಪುಟ 1, ಪುಟ 91)

ಮುಂದೊಂದು ಕಾಲದಲ್ಲಿ ಇಸ್ಲಾಮಿನ ಅವನತಿಯಾಗುವುದರ ಬಗ್ಗೆ ಹಝ್ರತ್ ಪೈಗಂಬರ್[ಸ] ಮಾತನಾಡುತ್ತಿದ್ದಾಗ, ಹಝ್ರತ್ ಹುಝೈಫ ಬಿನ್ ಯಮಾನ್ ಕೇಳಿದರು: ನಾನು ಆ ಕಾಲದ ವರೆಗೆ ಬದುಕಿದ್ದರೆ ಏನು ಮಾಡಬೇಕು? ಆಗ ಪೈಗಂಬರ್,[ಸ] ನೀನು ಆಗ ಮುಸ್ಲಿಮರ ಜಮಾಅತ್ ಮತ್ತು ಅದರ ಇಮಾಮ್ ಜೊತೆ ಸೇರಿಕೊಳ್ಳಬೇಕೆಂದು ಹೇಳಿದರು. ಆಗ ಹಝ್ರತ್ ಹುಝೈಫ ಕೇಳಿದರು: ಆ ಜಮಾಅತ್ ಮತ್ತು ಇಮಾಮ್ ನನಗೆ ಕಾಣದಿದ್ದರೆ ನಾನೇನು ಮಾಡಬೇಕು? ಆಗ ಪೈಗಂಬರ್[ಸ] ಹೇಳಿದರು: ನೀನು ಎಲ್ಲ ಪಂಗಡಗಳನ್ನು

ತೊರೆದು ಕಾಡಿಗೆ ಹೋಗು. ಅಲ್ಲಿ ನಿನಗೆ ಆಹಾರವೇನಾದರೂ ಸಿಗದಿದ್ದರೆ, ನೀನು ಮರಣಿಸುವ ತನಕ ಮರಗಳ ಬೇರುಗಳನ್ನು ತಿಂದು ಬದುಕು." (ಬುಖಾರಿ – ಸಂಪುಟ 3, ಪುಟ 1112)

ತನ್ನ ಶಿಷ್ಯರಾದ ಹಝ್ರತ್ ಸಲ್ಮಾನುಲ್ ಫಾರಿಸಿಯವರ(ರ) ಮೇಲೆ ಕೈಯಿಟ್ಟುಕೊಂಡು ಹಝ್ರತ್ ಪೈಗಂಬರ್(ಸ) ನುಡಿದರು: "ಈಮಾನ್ ಸುರಯ್ಯಾ (ಕೃತಿಕೆ) ನಕ್ಷತ್ರಕ್ಕೆ ಏರಿ ಹೋಗಿ (ಭೂಮಿಯಲ್ಲಿ ನಾಸ್ತಿಯಾಗಿದ್ದರೂ) ಇವರ ಜನತೆಯಿಂದ ಕೆಲವರು ಅಥವಾ ಓರ್ವ ವ್ಯಕ್ತಿ ಅದನ್ನು ಭೂಮಿಗೆ ಮರಳಿ ತರುವರು." (ಬುಖಾರಿ, ತಫ್ಸೀರುಲ್ ಖುರ್‌ಆನ್ – ಸಂಪುಟ 3, ಪುಟ 1560)

ಪೈಗಂಬರ್(ಸ) ಹೀಗೆಯೂ ಹೇಳಿದ್ದರು: "ಕಾಲದ ಇಮಾಮನ್ನು ಗುರುತಿಸದೆ ಇರುವವನು ಜಾಹಿಲಿಯ್ಯತ್‌ನ ಮರಣವನ್ನು ಪಡೆಯುವನು." (ಮುಸ್ನದ್ ಅಹ್ಮದ್ ಬಿನ್ ಹಂಬಲ್ – ಸಂಪುಟ 4. ಪುಟ 96)

ಮುಸ್ಲಿಂ ಪಂಗಡಗಳ ಸಂಕಟ ಪರಿಹಾರಕ್ಕೂ ಐಕ್ಯಕ್ಕೂ ಇರುವ ಏಕಮಾತ್ರ ಮಾರ್ಗ, ಅಲ್ಲಾಹನಿಂದ ನಿಯುಕ್ತರಾದ ಇಮಾಮ್ ಮಹ್‌ದಿಯನ್ನು ಅಂಗೀಕರಿಸಿ ಒಗ್ಗಟ್ಟಾಗಿ ಜೀವಿಸುವುದಾಗಿದೆ. ಅಲ್ಲಾಹನು ಆ ಸೌಭಾಗ್ಯವನ್ನು ಬೇಗನೇ ಮುಸ್ಲಿಂ ಪಂಗಡಗಳಿಗೆ ದಯಪಾಲಿಸಲಿ, ಆಮೀನ್.

– ಅಬೂ ಇನಾಮುಲ್ಲಾಹ್

## ನಕಲಿ ನೀತಿ ಕಥೆ

ಪದೇ ಪದೇ ಬಣ ಮತ್ತು ಅಭಿಪ್ರಾಯ ಬದಲಾಯಿಸುತ್ತಿರುವ ಓರ್ವ ಕುಖ್ಯಾತ ಮೌಲವಿ, ನೀತಿ ಕಥೆಗಳು ಎಂಬ ತಲೆಬರಹದಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ ಒಂದು ನಕಲಿ ಕಥೆ ಇದೆ. ಸತ್ಯ ವಿರೋಧಿಗಳಾದ ಇಂತಹ ಮೌಲವಿಗಳು ಅಹ್ಮದಿಯಾ ಜಮಾಅತಿನ ವಿರುದ್ಧ ಎಂತಹ ಸುಳ್ಳು ಹೆಣೆಯಲೂ ಹಿಂಜರಿಯುವುದಿಲ್ಲ.

"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಎಂದು ಅಹ್ಮದೀ ಮುಸ್ಲಿಮರು ಹೇಳಿದರೂ ಅವರು ಮುಸ್ಲಿಂ ಆಗುವುದಿಲ್ಲವೆಂದು ಇ. ಕೆ. ಅಬೂಬಕರ್ ಮುಸ್ಲಿಯಾರ್ ಕೇರಳದ ಕೋಟ್ಟೋಂದರಲ್ಲಿ "ಅದ್ಭುತ ಬುದ್ಧಿ ಶಕ್ತಿ" ಪ್ರಯೋಗಿಸಿದ್ದು ಕಥಾ ವಸ್ತು.

ಇ. ಕೆ. ಅಬೂಬಕರ್ ಮುಸ್ಲಿಯಾರ್ ಸಹ ಮೇಲಿನ ಪುಸ್ತಕ ಬರೆದ ಮೌಲವಿಯಂತೆಯೇ ವಹ್ಹಾಬಿ (ಈಗಿನ ಸಲಫಿ) ಬಣದಿಂದ ಸುನ್ನಿ ಬಣಕ್ಕೆ ಪರಿವರ್ತನೆಗೊಂಡವರು. (ಪುಸ್ತಕ ಬರೆದ ಮೌಲವಿ ಮೊದಲು ಸುನ್ನಿಯಾಗಿದ್ದು, ಒಮ್ಮೆ ಸಲಫಿ ಬಣಕ್ಕೆ ಹಾರಿ ವಾಪಾಸು ಬಂದವರು.) 1949 - 50ರಲ್ಲಿ ಇ. ಕೆ. ಅವರು ಪಯಂಗಾಡಿ ಪ್ರದೇಶದಲ್ಲಿ ಮಾಡಿದ ಒಂದು ಭಾಷಣದಲ್ಲಿ ಈಸಾನಬಿ(ಅ) ಓರ್ವ ಅರ್ಧ ಮಲಕ್ ಎಂದು ಹೇಳಿದಾಗ, ಅಹ್ಮದಿಯರೊಂದಿಗೆ ವಾಕ್ ಸಮರಕ್ಕೆ ಸಂದರ್ಭ ಒದಗಿತ್ತು.

ಅನಂತರ ಅವರು ಪದಿ ಮುಸ್ಲಿಯಾರ್‌ರೊಂದಿಗೆ ಸೇರಿಕೊಂಡು ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತಿನ ಹಝ್ರತ್ ಮೌಲಾನಾ ಅಬ್ದುಲ್ಲಾ ಸಾಹೇಬ್ ಎಚ್. ಎ. ರೊಂದಿಗೆ ವಾದ ಪ್ರತಿವಾದ ನಡೆಸಿದರು. ಮಡಿಕೇರಿಯ ಗಣ್ಯ ವ್ಯಕ್ತಿಯೂ ಕರ್ನಾಟಕ ಕಾಂಗ್ರೆಸ್ ಮುಂದಾಳು ಎಫ್. ಎಂ. ಖಾನರ ಪಿತರೂ ಆಗಿದ್ದ ಖಾನ್ ಬಹಾದೂರ್ ಅಬ್ದುರ್ರಹ್ಮಾನ್ ಖಾನರ ವಸತಿಯಲ್ಲಿ 1951 ಮೇ 27ರಂದು ನಿಬಂಧನೆಗಳನ್ನು ರೂಪಿಸಿದ ಬಳಿಕ ಮಡಿಕೇರಿ ಜುಮಾ ಮಸೀದಿಯಲ್ಲಿ ಎರಡು ದಿನಗಳ ಕಾಲ ವಾದ ಪ್ರತಿವಾದ ನಡೆಯಿತು.

ವಾದ ಪ್ರತಿವಾದದಲ್ಲಿ ತಮಗೆ ಸೋಲು ಕಂಡ ಇ.ಕೆ. ಮತ್ತು ಪದಿ ಮುಸ್ಲಿಯಾರ್‌ದ್ವಯರು ಮಸೀದಿಯ ಹೊರಗೆ ಬಂದು ಗೂಂಡಾಗಳನ್ನು ಛೂಬಿಟ್ಟರು. ಆ ಬಳಿಕ ಸತ್ಯವನ್ನು ಅರಿತುಕೊಂಡು ಮಡಿಕೇರಿಯ ಜನರು ಅಹ್ಮದಿಯಾ ಜಮಾಅತಿಗೆ ಸೇರಲು ತೊಡಗಿ, ಅಲ್ಲಿ ಅಲ್ಲಾಹನ ಅನುಗ್ರಹದಿಂದ ಸುಶಕ್ತವಾದ ಜಮಾಅತ್ ಸ್ಥಾಪನೆಗೊಂಡಿದೆ. ಒಂದು ಮನೋಹರವಾದ ಮಸೀದಿಯೂ ಅಲ್ಲಿ ಅವರಿಗಿದೆ.

ಕತ್ತೆ ಹೊರುವಷ್ಟು ಕಿತಾಬುಗಳನ್ನು ಜೀಪಿನಲ್ಲಿ ಹೇರಿಕೊಂಡು ಬಂದ ಮೌಲವಿಗಳು, ಕೈಯಲ್ಲಿ ಒಂದು ಸಣ್ಣ ಖುರ್‌ಆನ್ ಪ್ರತಿಯನ್ನು ಮಾತ್ರ ಇಟ್ಟುಕೊಂಡಿದ್ದ ಮೌಲಾನಾ ಅಬ್ದುಲ್ಲಾ ಸಾಹೇಬರ ಮುಂದೆ ಸೋತು ಸುಣ್ಣವಾದುದನ್ನು ಕಂಡ ಜೀಪ್ ಡ್ರೈವರ್ ಅಬ್ದುಲ್‌ಖಾದರ್ ಸಹ ಅಹ್ಮದಿಯಾ ಜಮಾಅತಿಗೆ ಸೇರಿದರು.

ಇ.ಕೆ. ಮುಸ್ಲಿಯಾರ್ ಕಲ್ಲಿಕೋಟೆಯಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧವಾಗಿ ಮಾಡಿದ ಭಾಷಣದಿಂದಲೂ ಅಹ್ಮದಿಯಾ ಜಮಾಅತಿಗೆ ಬಹಳ ಜಯ ಲಭಿಸಿದೆ. ಕೇರಳದಲ್ಲಿ ಅತಿ ಹೆಚ್ಚು ಅಹ್ಮದೀ ಮುಸ್ಲಿಮರ ಜನಸಂಖ್ಯೆ ಇರುವ ಸ್ಥಳ ಕಲ್ಲಿಕೋಟೆಯಾಗಿದೆ. ಅಲ್ಲಿ ಅವರಿಗೆ ಒಂದು ದೊಡ್ಡ ಮಸೀದಿಯೂ ಕೆಲವು ಸಣ್ಣ ಮಸೀದಿಗಳೂ ಇವೆ. ಕೇರಳದಲ್ಲಿ ಅತಿ ಹೆಚ್ಚು ಅಹ್ಮದಿಯಾ ಚಟುವಟಿಕೆಗಳು ನಡೆಯುವುದು ಸಹ ಕಲ್ಲಿಕೋಟೆಯಲ್ಲಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇ.ಕೆ. ಅಬೂಬಕರ್ ಮುಸ್ಲಿಯಾರರ "ಅದ್ಭುತ ಬುದ್ಧಿಶಕ್ತಿ"ಯಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಸೋಲಲ್ಲ, ಎಲ್ಲೆಲ್ಲೂ ಜಯ ಸಿದ್ಧಿಸಿದೆ.

– ಅಬೂ ಲುಕ್ಮಾನ್

## ಯು. ಕೆ. ವಾರ್ಷಿಕ ಸಮ್ಮೇಳನ



ಜಲ್ಸಾಗಾಹ್‌ನಲ್ಲಿ ಜುಮುಅ ನಮಾಝ್

ಲಂಡನ್ : ಯುನೈಟೆಡ್ ಕಿಂಗ್‌ಡಂ ಅಹ್ಮದಿಯಾ ಮುಸ್ಲಿಂ ಜಮಾಅತಿನ 44ನೇ ವಾರ್ಷಿಕ ಸಮ್ಮೇಳನವನ್ನು ಲಂಡನ್‌ನಲ್ಲಿ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಜುಲೈ 30ರಂದು ಖುತುಬ ಪ್ರವಚನದೊಂದಿಗೆ ಉದ್ಘಾಟಿಸಿದರು.

ಪಾಕಿಸ್ತಾನದಲ್ಲಿ ಹುತಾತ್ಮರಾದ 86 ಮಂದಿಯನ್ನು ಸ್ಮರಿಸುತ್ತಾ ಖಲೀಫ ಖುತುಬ ಆರಂಭಿಸಿದರು. ಮಾಧ್ಯಮಗಳಿಂದ ತಪ್ಪುಭಾವನೆಗಳಿಗೆ ತುತ್ತಾಗುವ ಇಸ್ಲಾಂ ಪರಸ್ಪರ ಸ್ನೇಹ, ಸಹಿಷ್ಣುತೆ ಮತ್ತು ಶಾಂತಿಯ ಧರ್ಮವೆಂದು ಖಲೀಫ ಹೇಳಿದರು.

ಸಾಯಂಕಾಲ ಜರುಗಿದ ಸಮಾವೇಶದಲ್ಲಿ ಖಲೀಫರು ಪಾಕಿಸ್ತಾನದಲ್ಲಿ ಅಹ್ಮದಿಯರು ಅನುಭವಿಸುವ ದೌರ್ಜನ್ಯಗಳನ್ನು ಪರಾಮರ್ಶಿಸಿದರು. ನೈಜ ವಿಶ್ವಾಸಿಗಳು ಎಂದಿಗೂ ಭೀರುತ್ವದೊಂದಿಗೆ ರಾಜಿ ಮಾಡಲಾರರು. ಜಗತ್ತಿನಲ್ಲೆಲ್ಲೂ ಉಗ್ರಗಾಮಿಗಳು ಅಹ್ಮದಿಯರ ವಿರುದ್ಧ ಬೆದರಿಕೆಯೊಡ್ಡುತ್ತಿದ್ದಾರೆ. ಇದರಿಂದೇನೂ ಅಹ್ಮದಿಯಾ ಜಮಾಅತ್ ನಿರ್ಬಲಗೊಳ್ಳದು. ಪವಿತ್ರ ಇಸ್ಲಾಂ ಧರ್ಮವನ್ನು ಉಗ್ರವಾದಿಗಳು ಅವರ ಸ್ವಾರ್ಥಕ್ಕಾಗಿ ಬಳಸುತ್ತಿದ್ದಾರೆ. ಲಾಹೋರ್ ಧಾಳಿಯ ನಂತರ ಅಹ್ಮದಿಯರು ಭಯಪಡುವರೆಂದು ಉಗ್ರಗಾಮಿಗಳು ಭಾವಿಸಿದ್ದರು. ಆದರೆ, ಈ ದುರಂತದ ಬಳಿಕ ನಮ್ಮ ಚೈತನ್ಯ ಹೆಚ್ಚಾಗಿದೆ. ನಾವು ಯಾರಿಗೂ ಹೆದರುವುದಿಲ್ಲವೆಂದು ತೀವ್ರಗಾಮಿಗಳು ತಿಳಿದುಕೊಳ್ಳಬೇಕೆಂದು ಖಲೀಫ ಹೇಳಿದರು.

ಸಮಾರೂಪ ಭಾಷಣದಲ್ಲಿ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ವಾಗ್ದತ್ತ ಮಸೀಹರ(ಅ) ಅನೇಕ ವಚನಗಳನ್ನು ಉದ್ಧರಿಸುತ್ತಾ, ಸಹನೆ ಮತ್ತು ತ್ಯಾಗದ ಮಹತ್ವದ ಅಧ್ಯಾಪನೆಗಳನ್ನು ಖಲೀಫರು ವಿವರಿಸಿದರು. ಅಂತಹ ತ್ಯಾಗಶೀಲ ಸಮುದಾಯಗಳನ್ನು ಬೆಳೆಸುವುದು ಇಸ್ಲಾಮಿನ ಲಕ್ಷ್ಯವಾಗಿದೆ. ಅಹ್ಮದಿಯಾ ಮುಸ್ಲಿಂ ಜಮಾಅತ್ ಅಂತಹ ಒಂದು ಸಮುದಾಯವಾಗಿದೆ. ಸಮ್ಮೇಳನದಲ್ಲಿ "ಜಾಗತಿಕ ಬೈಅತ್" ನಡೆಯಿತು. ಹಝ್ರತ್ ಖಲೀಫತುಲ್ ಮಸೀಹರ ನೇತೃತ್ವದಲ್ಲಿ ಪ್ರಾರ್ಥನೆಯೊಂದಿಗೆ ಆಗಸ್ಟ್ 1ರಂದು ತ್ರಿದಿನ ಸಮ್ಮೇಳನ ಸಮಾರೋಪಗೊಂಡಿತು.

## ಮೌದೂದಿಯ ಪುಸ್ತಕಗಳಿಗೆ ಬಾಂಗ್ಲಾದೇಶದಲ್ಲಿ ನಿಷೇಧ

ಢಾಕ: ಜಮಾಅತೆ ಇಸ್ಲಾಮಿ ಸ್ಥಾಪಕ ಅಬುಲ್ ಆಲಾ ಮೌದೂದಿಯ ಪುಸ್ತಕಗಳನ್ನು ಮಸೀದಿಗಳಲ್ಲೂ ಲೈಬ್ರರಿಗಳಲ್ಲೂ ಇಡುವುದನ್ನು ಬಾಂಗ್ಲಾದೇಶ ಸರಕಾರ ನಿಷೇಧಿಸಿದೆ. ಧರ್ಮಾಧಾರಿತ ರಾಷ್ಟ್ರವಾದಕ್ಕೆ ಮೂಗುದಾರ ಹಾಕಿ ಧರ್ಮಾನಿರಪೇಕ್ಷತೆಯೆಡೆಗೆ ಹಿಂತೆರಳು ಶೈಖ್ ಹಸೀನ ಸರಕಾರ ನಡೆಸುವ ಪ್ರಯತ್ನಗಳ ಅಂಗವಾಗಿದೆ ಈ ಉಪಕ್ರಮ. ಧರ್ಮಾಧಾರಿತ ರಾಷ್ಟ್ರ ಸ್ಥಾಪನೆಗೋಸ್ಕರ ಮಾಡುವ ಧರ್ಮಯುದ್ಧಕ್ಕೆ ಪ್ರೋತ್ಸಾಹ ನೀಡುವ ಮೌದೂದಿಯ ಕೃತಿಗಳು ಶಾಂತಿ ಸಮಾಧಾನ ಬಯಸುವ ಇಸ್ಲಾಮಿಕ ಆಶಯಗಳಿಗೆ ವಿರುದ್ಧವಾಗಿ ಕಂಡು ನಿಷೇಧ ಹೇರಲಾಗಿದೆಯೆಂದು ಸರಕಾರದ ಅಧೀನದಲ್ಲಿರುವ ಇಸ್ಲಾಮಿಕ ಫೌಂಡೇಶನಿನ ಮುಖ್ಯಾಧಿಕಾರಿ ಹೇಳಿದರು. ಮೌದೂದಿಯ ಪುಸ್ತಕಗಳು ಧರ್ಮಾಧಾರಿತ ರಾಷ್ಟ್ರವಾದವನ್ನೂ ಭಯೋತ್ಪಾದಕ ಚಟುವಟಿಕೆಗಳನ್ನೂ ಬೆಳೆಸುವುದೆಂದು ಅವರು ಹೇಳಿದರು. ಸರಕಾರದ ಆಜ್ಞೆಯ ಪ್ರಕಾರ ಮಸೀದಿಗಳಿಂದ ಮತ್ತು ಗ್ರಂಥಾಲಯಗಳಿಂದ ಮೌದೂದಿಯ ಎಲ್ಲ ಪುಸ್ತಕಗಳನ್ನು ನೀಗಿಸಲು ಆರಂಭಿಸಲಾಗಿದೆ.

ಪಾಕಿಸ್ತಾನವನ್ನು ಕೇಂದ್ರೀಕರಿಸಿ ಮೌದೂದಿಯ ಚಟುವಟಿಕೆ ಇದ್ದರೂ ಅವರು ಸ್ಥಾಪಿಸಿದ ಜಮಾಅತೆ ಇಸ್ಲಾಮಿ ಬಾಂಗ್ಲಾದೇಶದ ಅತಿ ದೊಡ್ಡ ಧಾರ್ಮಿಕ ಪಕ್ಷ. ಪ್ರತಿಪಕ್ಷ ಬಾಂಗ್ಲಾದೇಶ ನೇಶನಲಿಸ್ಟ್ ಪಾರ್ಟಿ ಮತ್ತು ಜಮಾಅತೆ ಇಸ್ಲಾಮಿ ಪಕ್ಷ ಶೇಖ್ ಹಸೀನರ ಧರ್ಮ ನಿರಪೇಕ್ಷ ಸುಧಾರಣೆಗಳಿಗೆ ವಿರುದ್ಧವಾಗಿ ಬಾಂಗ್ಲಾದೇಶದಲ್ಲಿ ಯುದ್ಧ ನಡೆಸುತ್ತವೆ. ಬಾಂಗ್ಲಾದೇಶದ ಸಂವಿಧಾನದಿಂದ ಧರ್ಮ ನಿರಪೇಕ್ಷ ಎಂಬ ಪದವನ್ನು ನೀಗಿಸುವ ಸಾಂವಿಧಾನಿಕ ತಿದ್ದುಪಡಿಯನ್ನು ಸುಪ್ರೀಂ ಕೋರ್ಟು ಕೆಲವು ತಿಂಗಳುಗಳ ಮುಂಚೆ ರದ್ದುಮಾಡಿದೆ. ಈ ಮೂಲಕ ಸಾಂಕೇತಿಕವಾಗಿ ಬಾಂಗ್ಲಾದೇಶ ಪುನಃ ಧರ್ಮನಿರಪೇಕ್ಷ ರಾಷ್ಟ್ರವಾಗಿದೆ. ಧರ್ಮದ ಆಧಾರದಲ್ಲಿ ಚಟುವಟಿಕೆ ನಿರತ ಪಾರ್ಟಿಗಳನ್ನು ನಿಷೇಧಿಸಲಿಕ್ಕೂ ಸರಕಾರ ಕ್ರಮ ಆರಂಭಿಸಿದೆ.

**("ಮಾತೃಭೂಮಿ", ಮಲಯಾಳಂ ದಿನಪತ್ರಿಕೆ 31 ಜುಲೈ 2010)**

## ಗುಪ್ತ ತೀವ್ರವಾದವನ್ನು ಗುರುತಿಸಬೇಕು- ಎಸ್.ಕೆ.ಎಸ್.ಎಸ್.ಎಫ್.

ಕೋಝಿಕ್ಕೋಡ್: ರಾಜಕೀಯ ಮುಖವಾಡ ಧರಿಸಿ ರಹಸ್ಯವಾಗಿ ತೀವ್ರವಾದ ಚಟುವಟಿಕೆ ನಡೆಸುವ ಕೆಲವರು ಧರ್ಮ ನಿರಪೇಕ್ಷ ಸಮೂಹವನ್ನು ತಪ್ಪುಭಾವನೆಗೆ ಗುರಿಪಡಿಸಲು ಪ್ರಯತ್ನಿಸುತ್ತಿದ್ದಾರೆಂದು ಎಸ್.ಕೆ.ಎಸ್.ಎಸ್.ಎಫ್. 'ಮಜ್ಲಿಸ್ ಇಂತಿಸಾಬ್' ದೇಶೀಯ ಪ್ರತಿನಿಧಿ ಸಮ್ಮೇಳನ ಠರಾವಿನಲ್ಲಿ ಆರೋಪಿಸಿತು.

ಇಸ್ಲಾಮಿಕ ತತ್ವಗಳಿಗೆ ಅತೀತವಾದ ರಾಜಕೀಯ ವ್ಯಾಖ್ಯಾನ ನೀಡಿದ ಮೌದೂದಿಯ ಆಶಯ ಕೇರಳದಲ್ಲಿ ಮುಸ್ಲಿಂ ಪಕ್ಷ ತೀವ್ರವಾದಕ್ಕೆ ತಳಪಾಯ ಹಾಕಿತು. ಇದಕ್ಕೆ ವಿರುದ್ಧವಾಗಿ ಸಮುದಾಯ ಒಗ್ಗೂಡಿ ಪ್ರತಿಭಟಿಸುವಾಗ ರಾಜಕೀಯ ಮುಖವಾಡ ಧರಿಸಿ ಅವರು ನೆಲೆನಿಲ್ಲುವಿಕೆಗೆ ಹೊಸ ದಾರಿ ಹುಡುಕುತ್ತಾರೆ. ಇಂತಹವರನ್ನು ಪ್ರಜಾಪ್ರಭುತ್ವ ಪಕ್ಷಗಳು ಗುರುತಿಸಬೇಕೆಂದು ಠರಾವಿನಲ್ಲಿ ಅಗತ್ಯಪಡಿಸಲಾಯಿತು.

ಸಮಸ್ತ ಜನರಲ್ ಸೆಕ್ರಟರಿ ಝೈನುಲ್ ಉಲಮ ಚೆರುಶ್ಶೇರಿ ಝೈನುದ್ದೀನ್ ಮುಸ್ಲಿಯಾರರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನವನ್ನು ಎಸ್.ವೈ.ಎಫ್. ಪ್ರೆಸಿಡೆಂಟ್ ಪಾಣಕ್ಕಾಡ್ ಸಯ್ಯಿದ್ ಹೈದರಲಿ ಶಿಹಾಬ್ ತಙ್ಙಳ್ ಉದ್ಘಾಟಿಸಿದರು. ಧರ್ಮ ಬೋಧನೆ ಪಾಲಿಸಿಕೊಂಡು ರಾಷ್ಟ್ರನಿರ್ಮಾಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಯುವ ಜನರನ್ನು ಸರಿಯಾದ ಮಾರ್ಗದಲ್ಲಿ ನಡೆಸಬೇಕೆಂದು ಅವರು ಹೇಳಿದರು.

("ಮಾತೃಭೂಮಿ" 26 ಎಪ್ರಿಲ್ 2010)

## ಜಮಾಅತೆ ಇಸ್ಲಾಮಿ ರಾಜಕೀಯಕ್ಕೆ ಬರುವುದು ಅಪಾಯ: ಪಿಣರಾಯಿ

ಕಲ್ಯಾಶೇರಿ: ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದೆ ದೇವರಾಜ್ಯಕ್ಕೋಸ್ಕರ ಪ್ರಯತ್ನಿಸುವ ಜಮಾಅತೆ ಇಸ್ಲಾಮಿ ರಾಜಕೀಯಕ್ಕೆ ಬರುವುದು ಪ್ರಜಾಪ್ರಭುತ್ವಕ್ಕೂ ರಾಷ್ಟ್ರಕ್ಕೂ ಅಪಾಯಕರವೆಂದು ಸಿ.ಪಿ.ಎಂ. ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಹೇಳಿದರು.

ಪ್ರಜಾಪ್ರಭುತ್ವವನ್ನು ಅಂಗೀಕರಿಸುವ ಸಂಘಟನೆಯನ್ನು ಉತ್ಪಾಟನೆ ಮಾಡಲು ಜಮಾಅತೆ ಇಸ್ಲಾಮಿ ಯತ್ನಿಸುತ್ತಿದೆಯೆಂದೂ ಪಿಣರಾಯಿ ಆರೋಪಿಸಿದರು.

ಮುಸ್ಲಿಂ ಲೀಗ್‌ನೊಂದಿಗೆ ಚರ್ಚೆ ಮಾಡಿ ಸೋಲಿಡಾರಿಟಿ ಎಂಬ ಸಂಘಟನೆ ಮೂಲಕ ರಾಜಕೀಯಕ್ಕೆ ಪ್ರವೇಶಿಸಲು ಜಮಾಅತೆ ಇಸ್ಲಾಮಿ ಮುಖವನ್ನು ಸುಂದರಗೊಳಿಸುತ್ತಿದೆ. ಆದರೆ ಎಷ್ಟೇ ಸುಂದರಗೊಳಿಸಿದರೂ ಇವರ ಹಳೆಯ ಮುಖವನ್ನು ಜನರು ಸ್ಮರಿಸುವರು.

ಅವರ ಅಜಂಡವನ್ನು ಕೇರಳದಲ್ಲಿ ಜಾರಿಗೊಳಿಸಲು ಪ್ರಯತ್ನ ನಡೆಯುತ್ತಿದೆ. ಇವರನ್ನು ಗುರುತಿಸಲು ಎಲ್ಲ ಪಕ್ಷದವರು ಸಿದ್ಧರಾಗಬೇಕು. ಧರ್ಮ ನಿರಪೇಕ್ಷವನ್ನು ಮಾತ್ರವಲ್ಲ ಎಲ್ಲ ಒಳಿತುಗಳನ್ನೂ ನಿರ್ನಾಮ ಮಾಡಬೇಕೆಂಬ ಲಕ್ಷ್ಯವಿಟ್ಟಿರುವ ಇವರೊಂದಿಗೆ ಲೀಗ್ ಸಹಕರಿಸುತ್ತಿರುವುದು ಯಾರಿಗಾದರೂ ಅಂಗೀಕರಿಸಲು ಸಾಧ್ಯವೇ?

("ಮಲಯಾಳ ಮನೋರಮ" ದಿನಪತ್ರಿಕೆ 20-5-2010)

## 17 ಉಗ್ರ ಸಂಘಟನೆ ವಿರುದ್ಧ ಕಠಿಣ ಕ್ರಮ

ಇಸ್ಲಾಮಾಬಾದ್: ಪಾಕಿಸ್ಥಾನದಲ್ಲಿ ದತ್ತಾ ದರ್ಬಾರ್ ಮಂದಿರದ ಮೇಲೆ ಇತ್ತೀಚೆಗೆ ಭಯೋತ್ಪಾದಕ ದಾಳಿ ನಡೆದ ಹಿನ್ನೆಲೆಯಲ್ಲಿ ಪಾಕಿಸ್ಥಾನ ಸರಕಾರವು ಉಗ್ರವಾದಿ ಸಂಘಟನೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ. ಒಟ್ಟು 17 ಉಗ್ರವಾದಿ ಸಂಘಟನೆಗಳನ್ನು ದಮನಿಸಲಿಕ್ಕಾಗಿ ವಿಶೇಷ ಕಾರ್ಯಪಡೆಯೊಂದನ್ನು ನೇಮಿಸಿದೆ.

ಪಂಜಾಬ್ ಪ್ರಾಂತ ಸರಕಾರವು ಅಪರಾಧ ಪತ್ತೆದಳ, ವಿಶೇಷ ಪಡೆ ಮತ್ತು ಭಯೋತ್ಪಾದಕ ವಿರೋಧಿ ಪಡೆಗಳ ಸಮನ್ವಯದೊಂದಿಗೆ ಈ ಕಾರ್ಯಪಡೆಯನ್ನು ನೇಮಿಸಿದೆ.

ಈ ಕಾರ್ಯಪಡೆಯು ಜಮಾತ್-ಉಲ್-ದಾವಾ, ಲಷ್ಕರ್ ಇ ತೊಯ್ಬಾ, ಜೈಶೆ ಇ ಮೊಹಮ್ಮದ್, ಲಷ್ಕರ್ ಇ ಝಾಂಗ್ವಿ ಮುಂತಾದ ಕುಖ್ಯಾತ ಉಗ್ರಗಾಮಿ ಸಂಘಟನೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಿದೆ.

ಇವುಗಳಲ್ಲಿ 9 ದೇವಬಂದ್ ಪಂಥಕ್ಕೆ ಸೇರಿದ ಸಂಘಟನೆಗಳಾದರೆ, 3 ಶಿಯಾ ಸಂಘಟನೆಗಳು. ಇನ್ನು ಮೂರು ಅಹ್ಲ್ ಇ ಹದಿತ್ ಪಂಥದವು. ಒಂದು ಬಲೂಚಿಸ್ಥಾನದ ಉಗ್ರಗಾಮಿ ಸಂಘಟನೆಯಾದರೆ ಇನ್ನೊಂದು ಉಗ್ರಗಾಮಿ ವಿದ್ಯಾರ್ಥಿ ಸಂಘಟನೆ. ಆದರೆ ಪಾಕಿಸ್ಥಾನಿ ತಾಲಿಬಾನ್ ಈ ಪಟ್ಟಿಯಿಂದ ಹೊರಗುಳಿದಿದೆ.

("ಹೊಸ ದಿಗಂತ" ದೈನಿಕ 06 ಜುಲೈ 2010)

## ಬುರ್ಖಾ ನಿಷೇಧ ಇಲ್ಲ : ಬ್ರಿಟನ್

ಲಂಡನ್, ಜು.18: ತಾನು ಫ್ರಾನ್ಸ್‌ನಂತೆ ಮುಸ್ಲಿಮ್ ಮಹಿಳೆಯರು ಸಾರ್ವಜನಿಕವಾಗಿ ಬುರ್ಖಾ ಧರಿಸುವುದನ್ನು ನಿಷೇಧಿಸುವುದಿಲ್ಲ. ಏಕೆಂದರೆ ಇಂಥ ಕ್ರಮ 'ಸಹಿಷ್ಣು ಹಾಗೂ ಗೌರವಯುತ ಸಮಾಜ'ದ ಶಿಷ್ಟಾಚಾರಗಳಿಗೆ ವಿರುದ್ಧವಾಗಿದೆ ಎಂದು ಬ್ರಿಟನ್ ಹೇಳಿದೆ.

ಬುರ್ಖಾ ನಿಷೇಧಕ್ಕೆ ವ್ಯಾಪಕ ಬೆಂಬಲವಿರುವುದು ಈಚಿನ ಸಮೀಕ್ಷೆಯೊಂದರಲ್ಲಿ ವ್ಯಕ್ತವಾಗಿತ್ತಾದರೂ ವಲಸೆ ಸಚಿವ ಡೇಮಿಯನ್ ಗ್ರೀನ್ ಅವರು ಬುರ್ಖಾ ನಿಷೇಧ ಬ್ರಿಟಿಷ್ ಶಿಷ್ಟಾಚಾರಕ್ಕೆ ವಿರುದ್ಧವಾದುದು; ನಮ್ಮದು ಪರಸ್ಪರ ಗೌರವ ನೀಡುವ ಸಮಾಜವಾಗಿದೆ ಎಂದು 'ದ ಸಂಡೇ ಟೆಲಿಗ್ರಾಫ್'ಗೆ ಹೇಳಿದರು.

**("ಉದಯವಾಣಿ" ದೈನಿಕ 19-7-2010)**

## ನಾಯಿಕ್ ಬ್ರಿಟನ್ ಪ್ರವೇಶಕ್ಕೆ ನಿಷೇಧ

ಲಂಡನ್, ಜೂ.18: ಭಾರತೀಯ ಇಸ್ಲಾಮಿಕ 'ಟಿವಿ' ಮತ ಪ್ರಚಾರಕ ಝಕೀರ್ ನಾಯಿಕ್ ಅವರ 'ನಡವಳಿಕೆ ಸ್ವೀಕಾರಾರ್ಹವಲ್ಲ' ಎಂಬ ಕಾರಣಕ್ಕೆ ಅವರು ದೇಶ ಪ್ರವೇಶಿಸುವುದನ್ನು ಬ್ರಿಟನ್ ಸರಕಾರ ನಿಷೇಧಿಸಿದೆ. 'ಪ್ರತಿಯೋರ್ವ ಮುಸ್ಲಿಂ ವ್ಯಕ್ತಿ ಭಯೋತ್ಪಾದಕನಾಗಬೇಕು' ಎಂದು ಈ ಹಿಂದೆ ಕರೆ ನೀಡುವ ಮೂಲಕ ನಾಯಿಕ್ ಭಾರೀ ಸುದ್ದಿ ಮಾಡಿದ್ದರು.

ಟಿವಿ ಮೂಲಕ ಇಸ್ಲಾಂ ಮತಪ್ರಚಾರ ನಡೆಸುವ ನಾಯಿಕ್ ಅವರು ವೆಂಬ್ಲಿ ಮತ್ತು ಶೆಫೀಲ್ಡ್‌ನ ವೇದಿಕೆಗಳಲ್ಲಿ ಸರಣಿ ಉಪನ್ಯಾಸಗಳನ್ನು ನೀಡಲಿದ್ದರು.

**("ಉದಯವಾಣಿ" 19-6-2010)**

## ಮುಸ್ಲಿಮರ ದೊಡ್ಡ ಶತ್ರು ಬಿಕ್ಕಟ್ಟು: ಸೌದಿ ರಾಜ

ಮಕ್ಕ: ಮುಸ್ಲಿಮರ ಅತಿ ದೊಡ್ಡ ಶತ್ರು ಬಿಕ್ಕಟ್ಟೆಂದೂ ಧರ್ಮ ಪಂಡಿತರು ಒಗ್ಗಟ್ಟಿಗೋಸ್ಕರ ಕಾರ್ಯಶೀಲರಾಗಬೇಕೆಂದೂ ಸೌದಿ ಆಡಳಿತಾಧಿಕಾರಿ ಅಬ್ದುಲ್ಲ ರಾಜ ಹೇಳಿದರು. ಮುಸ್ಲಿಂ ವರ್ಲ್ಡ್ ಲೀಗ್‌ನ (ರಾಬಿತ) ಸುವರ್ಣ ಜೂಬಿಲಿ ಅಂಗವಾಗಿ ನಡೆದ ಅಂತರ್‍ರಾಷ್ಟ್ರೀಯ ಇಸ್ಲಾಮಿಕ ಸಮ್ಮೇಳನವನ್ನು ಅವರು ಉದ್ಘಾಟಿಸುತ್ತಿದ್ದರು. ಬಿಕ್ಕಟ್ಟು ಅಧಃಪತನದ ಆರಂಭವಾಗಿದೆ. ಮುಸ್ಲಿಮರು ಭಿನ್ನತೆಯ ಬಗ್ಗೆ ಪ್ರಜ್ಞಾವಂತರಾಗಿ ಪರಸ್ಪರ ಸ್ನೇಹವನ್ನು ಸುಧಾರಿಸಬೇಕೆಂದು ಅವರು ಹೇಳಿದರು.

**("ಚಂದ್ರಿಕ" ಮಲಯಾಳಂ ದೈನಿಕ 3 ಆಗಸ್ಟ್ 2010)**

## ಪಾಕ್ ಪ್ರವಾಹ: ನೆರವಿಗೆ ಬಾನ್ ಮನವಿ

ಕರಾಚಿ, ಅ.15: ಪಾಕಿಸ್ತಾನದ ಸಿಂಧ್ ಹಾಗೂ ಬಲೂಚಿಸ್ಥಾನ ಪ್ರಾಂತಗಳಲ್ಲಿ ಸುರಿಯುತ್ತಿರುವ ಭಾರೀ ಮಳೆ ಹಾಗೂ ದಿಢೀರ್ ಪ್ರವಾಹದಿಂದಾಗಿ **2 ಕೋಟಿಗೂ** ಅಧಿಕ ಮಂದಿ ಸಂತ್ರಸ್ತರಾಗಿದ್ದು ಸಾವಿರಾರು ಮಂದಿ ಮನೆಮಠಗಳನ್ನು ಕಳೆದುಕೊಂಡಿದ್ದಾರೆ.

ಪ್ರವಾಹ ಸಂತ್ರಸ್ತರಿಗೆ ನೆರವಾಗುವ ಸಲುವಾಗಿ ಅಂತಾರಾಷ್ಟ್ರೀಯ ಸಮುದಾಯ ಹೆಚ್ಚಿನ ಆರ್ಥಿಕ ನೆರವನ್ನು ಪಾಕಿಸ್ಥಾನಕ್ಕೆ ಒದಗಿಸಬೇಕು ಎಂದು ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಬಾನ್ ಕಿ ಮೂನ್ ಮನವಿ ಮಾಡಿದ್ದಾರೆ.

ಕಳೆದ ವಾರ ಸುರಿದ ಭಾರೀ ಮಳೆ ಹಾಗೂ ಪ್ರವಾಹದಿಂದ ಖೈಬರ್ ಪಕ್ತುಂಖ್ವಾ ಹಾಗೂ ಪಂಜಾಬ್ ಪ್ರಾಂತದಲ್ಲಿ ಭಾರೀ ಪ್ರಮಾಣದ ನಷ್ಟ ಉಂಟಾಗಿದ್ದು, ಸಿಂಧ್ ಹಾಗೂ ಬಲೂಚಿಸ್ಥಾನ ಪ್ರಾಂತದಲ್ಲಿಯೂ ಪ್ರವಾಹ ಗಂಭೀರ ಸ್ವರೂಪ ತಾಳಿದೆ. ಇದುವರೆಗೆ ಪ್ರವಾಹದಿಂದಾಗಿ **40ಲಕ್ಷ** ಜನರು ನೆಲೆ ಕಳೆದುಕೊಂಡಿದ್ದು ಎರಡು **ಸಾವಿರಕ್ಕೂ** ಅಧಿಕ ಮಂದಿ ಮೃತಪಟ್ಟಿದ್ದಾರೆ. ಅಪಾರ ನಷ್ಟ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಹದಿಂದ ಬೆಳೆದು ನಿಂತ ಫಸಲುಗಳು ನೀರು ಪಾಲಾಗಿದ್ದು ಕೃಷಿ ಭೂಮಿ ಹಾಗೂ ಆಹಾರ ದಾಸ್ತಾನುಮಳಿಗೆಗಳಿಗೆ ನೀರು ನುಗ್ಗಿದ ಪರಿಣಾಮ ದೇಶದ ಅರ್ಥ ವ್ಯವಸ್ಥೆಗೆ **ಸಾವಿರಾರು ಕೋಟಿ ಡಾಲರ್** ನಷ್ಟ ಸಂಭವಿಸಿದೆ.

ಪ್ರವಾಹ ಪೀಡಿತ ಸ್ಥಳಗಳಿಗೆ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಬಾನ್ ಅವರು ಭೇಟಿ ನೀಡಿದ್ದು ಪ್ರವಾಹ ಸಂತ್ರಸ್ತರಿಗೆ ನೆರವಾಗುವ ನಿಟ್ಟಿನಲ್ಲಿ ಇಡೀ ವಿಶ್ವವೇ ಪಾಕಿಸ್ಥಾನದ ಜೊತೆಗಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

**("ಉದಯವಾಣಿ" 16-8-2010)**

* ಮಳೆ ಹಾಗೂ ಪ್ರವಾಹದಿಂದ ಕಳೆದ **80 ವರ್ಷಗಳಲ್ಲೇ** ಅತಿ ಭೀಕರ ವಿನಾಶ ಉಂಟಾಗಿದ್ದು ಇದರಿಂದ ಚೇತರಿಸಿಕೊಳ್ಳಲು ಪಾಕಿಸ್ಥಾನಕ್ಕೆ ಅನೇಕ ಕೋಟಿ ಡಾಲರ್‌ಗಳ ನೆರವು ಬೇಕಾಗಬಹುದೆಂದು ವಿಶ್ವಸಂಸ್ಥೆ ಹೇಳಿದೆ.

**("ಉದಯವಾಣಿ" 17-8-2010)**

# ನಿಧನ ವಾರ್ತೆಗಳು

## ಬಿ. ಅಹ್ಮದ್ ಸಾಹೇಬ್



ಪಯಂಗಾಡಿ ಅಹ್ಮದಿಯಾ ಜಮಾಅತಿನ ಓರ್ವ ಗಣ್ಯ ಸದಸ್ಯರೂ ಹಿಂದಿನ ಕಾಲದಲ್ಲಿ ಕೇರಳದಾದ್ಯಂತ ಚಿರಪರಿಚಿತ ಅಹ್ಮದಿಯೂ ಆಗಿದ್ದ ಜನಾಬ್ ಬಿ. ಅಹ್ಮದ್ ಸಾಹೇಬ್ ತನ್ನ 91ನೇ ವಯಸ್ಸಿನಲ್ಲಿ 30-01-2010ರಂದು ನಿಧನರಾದರು. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

1919ರಲ್ಲಿ ಪಯಂಗಾಡಿಯಲ್ಲಿ ಜನಿಸಿದ ಅಹ್ಮದ್ ಸಾಹೇಬರು 1939ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದ್ದರು. ಕೇವಲ 20 ವರ್ಷ ಪ್ರಾಯದಲ್ಲೇ ತನ್ನ ಕುಟುಂಬದ ಎಲ್ಲ ವಿಧ ವಿರೋಧಗಳನ್ನು ಎದುರಿಸುತ್ತಾ ಏಕಾಂಗಿಯಾಗಿ ಜಮಾಅತಿನಲ್ಲಿ ಸೇರಿದ ಅವರು ವಿಶ್ವಾಸ ದಾರ್ಢ್ಯತೆಯನ್ನು ಪ್ರದರ್ಶಿಸಿದ್ದರು. ಜಮಾಅತಿಗೆ ತನ್ನ ಅಮೋಘ ಸೇವೆ ಸಲ್ಲಿಸುತ್ತಾ ಅವರು ಖ್ಯಾತಿ ಪಡೆದರು.

ಪಯಂಗಾಡಿ ಮಜ್ಲಿಸ್‌ನ ಖಾಯಿದ್ ಸ್ಥಾನವನ್ನು ವಹಿಸಿದ್ದ ಕಾಲದಲ್ಲಿ 1950ರಲ್ಲಿ ಕಲ್ಲಿಕೋಟೆಯಲ್ಲಿ ಜರಗಿದ ಪ್ರಥಮ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸಮ್ಮೇಳನದ ಸಂಘಟಕರಲ್ಲಿ ಅವರು ಒಬ್ಬರಾಗಿದ್ದರು. ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನಕ್ಕೆ ಈ ಸಮ್ಮೇಳನ ನಾಂದಿಯಾಯಿತು.

1947ರಿಂದ ಸುದೀರ್ಘ 40 ವರ್ಷಗಳ ಕಾಲ ಪಯಂಗಾಡಿ ಜಮಾಅತಿನ ಮಾಲ್ ಸೆಕ್ರೆಟರಿಯಾಗಿ ಅವರು ಶ್ಲಾಘನೀಯ ಸೇವೆ ಸಲ್ಲಿಸಿದ್ದರು. ಅವರು ದೀರ್ಘ ಕಾಲ ಮಲಯಾಳಮ್ ಅಹ್ಮದಿಯಾ ಮುಖವಾಣಿ "ಸತ್ಯದೂತನ್" ಮಾಸಪತ್ರಿಕೆಯ ಸಮಿತಿ ಸದಸ್ಯರಾಗಿದ್ದರು.

ಅವರಿಗೆ ಖಾದಿಯಾನ್, ರಬ್‌ವ, ಲಂಡನ್ ಎಂಬೆಡೆಗಳಲ್ಲಿ ಹೋಗಿ ಆಯಾ ಕಾಲದ ಖಲೀಫರುಗಳನ್ನು ಸಂದರ್ಶಿಸುವ ಸೌಭಾಗ್ಯ ಲಭಿಸಿತ್ತು. ಅವರು ಮೂವರು ಪುತ್ರಿಯರನ್ನೂ ಅನೇಕ ಮೊಮ್ಮಕ್ಕಳನ್ನೂ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.

ದಿವಂಗತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ. ಆಮೀನ್.

## ಮೌಲವಿ ಯು. ಅಬೂಬಕರ್ ಸಾಹೇಬ್



ಮಂಜೇಶ್ವರ : ಜನಾಬ್ ಮೌಲವಿ ಯು. ಅಬೂಬಕರ್ ಸಾಹೇಬ್ ತನ್ನ 78ನೇ ವಯಸ್ಸಿನಲ್ಲಿ 3-6-2010ರಂದು ಮಂಜೇಶ್ವರದಲ್ಲಿ ನಿಧನರಾದರು. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಮೂಲತಃ ಕೇರಳದ ಬಡಗರ ನಿವಾಸಿಯಾಗಿದ್ದ ಮೌಲವಿ ಸಾಹೇಬರು ಯುವಕನಾಗಿದ್ದಾಗಲೇ ಅಹ್ಮದಿಯತ್ ಸ್ವೀಕರಿಸಿದ್ದರು. ಆಗ ಅವರ ತಂದೆ ಎನ್. ಅಬ್ದುಲ್ಲಾ ಹಾಜಿ ಸಾಹೇಬರು ಅವರನ್ನು ಮಧ್ಯರಾತ್ರಿ ಮನೆಯಿಂದ ಹೊರಗೆ ಹಾಕಿದರು. ಆದರೆ ಕೆಲವು ವರ್ಷಗಳ ನಂತರ ಅಲ್ಲಾಹನ ಅನುಗ್ರಹದಿಂದ ಮೌಲವಿ ಸಾಹೇಬರ ತಂದೆ, ತಾಯಿ, ಸಹೋದರ, ಸಹೋದರಿಯರು ಅಹ್ಮದಿಯಾ ಜಮಾಅತಿಗೆ ಸೇರಿದರು.

ಮೌಲವಿ ಸಾಹೇಬರು ಖಾದಿಯಾನ್‌ನಲ್ಲಿ ಕಲಿತು ಮುಅಲ್ಲಿಂ ಆಗಿ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಪ್ರಾಂತ್ಯಗಳ ಹಲವೆಡೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ಪರಿಶ್ರಮದ ಫಲವಾಗಿ ಅನೇಕ ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ. "ಯುಗರಶ್ಮಿ" ಪತ್ರಿಕೆ ಆರಂಭಿಸಲು ಕಾರಣಕರ್ತರಲ್ಲಿ ಒಬ್ಬರು ಮೌಲವಿ ಸಾಹೇಬ್ ಆಗಿದ್ದರು. ಅವರ ಪತ್ನಿ ಝುಲೇಖ ಯುಗರಶ್ಮಿ ಸಂಪಾದಕರ ಹಿರಿಯ ಸಹೋದರಿ. ತಯ್ಯಿಬ್ ಅಹ್ಮದ್, ಬಶೀರ್ ಅಹ್ಮದ್, ರಫೀಕ್ ಅಹ್ಮದ್, ನಾಸಿರ್ ಅಹ್ಮದ್, ಮುಬಾರಕ ಮತ್ತು ಶಮೀಮ ಅವರ ಪ್ರಥಮ ಪತ್ನಿಯ ಮಕ್ಕಳು. ಮುಅಲ್ಲಿಂ ಮೌಲವಿ ಅನ್ವರ್ ಅಹ್ಮದ್ ಸಾಹೇಬ್ ಅವರ ದ್ವಿತೀಯ ಪತ್ನಿ ಮರ್ಹೂಮ ಜಮೀಲ (ಅಲನಲ್ಲೂರ್) ಅವರ ಏಕ ಪುತ್ರ ಆಗಿದ್ದಾರೆ.

ದಿವಂಗತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಆಮೀನ್.

*.....ಧಾರ್ಮಿಕ ಭೀಕರ ಕೃತ್ಯಗಳು* ***(21ನೇ ಪುಟದಿಂದ)***

ಆಳವಾದ ಕಂದಕದಲ್ಲಿ ಮುಳುಗುತ್ತಾ ಹೋಗುತ್ತಿದೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಸಹ ಹೇಳಿದರು:

"ಒಂದು ಧರ್ಮವನ್ನು ಸತ್ಯ ಮತ್ತು ನ್ಯಾಯದಿಂದ ಆಕ್ಷೇಪಿಸಲು ಸಾಧ್ಯವಾಗದೆ ಇರುವಾಗ ಅನೇಕ ಜನರು ನ್ಯಾಯೀಕರಿಸಲು ಅಸಾಧ್ಯವಾದ ಆಕ್ಷೇಪಗಳನ್ನು ಮಾಡಲು ಪ್ರಾರಂಭಿಸುತ್ತಾರೆ." (ಚಶ್ಮಯೆ ಮಸೀಹ್ - ರೂಹಾನಿ ಖಿಝಾಯಿನ್, ಸಂಪುಟ 20, ಪುಟ 337)

ಇಸ್ಲಾಮಿನ ಶತ್ರುಗಳು ಮುಸ್ಲಿಮರನ್ನು ಇಸ್ಲಾಮಿನಿಂದ ದೂರಸರಿಸುವುದಕ್ಕಾಗಿ ಪವಿತ್ರ ಖುರ್‌ಆನಿನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾರೆ. ಇಸ್ಲಾಮ್ ಮತ್ತು ಹಝ್ರತ್ ಪ್ರವಾದಿಯವರನ್ನು ನಿಂದಿಸುತ್ತಾರೆ. ಆದರೆ ಶತ್ರುಗಳ ಈ ಕಾರಸ್ಥಾನ ಹೀಗೆಯೇ ದೀರ್ಘಕಾಲ ಮುಂದುವರಿಯದು.

ಈ ಕಾಲಘಟ್ಟದ ಧರ್ಮ ಸುಧಾರಕರಾದ ವಾಗ್ದತ್ತ ಮಸೀಹರ ಆಗಮನದ ನಂತರ ಜನರು ಸುಳ್ಳು ನಂಬಿಕೆಗಳನ್ನು ತ್ಯಜಿಸಲು ತೊಡಗಿರುವರು. ಹಝ್ರತ್ ವಾಗ್ದತ್ತ ಮಸೀಹರ ನಿಧನದ ನಂತರ ಈಗ ಇಸ್ಲಾಮಿನ ಸತ್ಯ ಸಂದೇಶವನ್ನು ಲೋಕಾದಾದ್ಯಂತ ತಲಪಿಸುವ ಕೆಲಸ ಅಹ್ಮದಿಯಾ ಜಮಾಅತಿನ ಖಿಲಾಫತಿನ ನೇತೃತ್ವದಲ್ಲಿ ಜಾರಿಗೊಳ್ಳುತ್ತಾ ಇದೆ.

★

**(The Review of Religions - March 2010 ಸಂಚಿಕೆಯಿಂದ.**

**ಭಾಷಾಂತರ: ಎಂ. ಉಬೈದುಲ್ಲಾ)**

ಅಹ್ಮದಿಯರಿಗೆ ಸುತ್ತೋಲೆ

# ತಹ್‌ರೀಕ್ ಜದೀದ್ ಮತ್ತು ಪವಿತ್ರ ರಮಝಾನ್ ತಿಂಗಳು

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ದ್ವಿತೀಯ ಖಲೀಫ) ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದ್ ಮತ್ತು ರಮಝಾನ್ ತಿಂಗಳ ನಾಲ್ಕು ಮುಖ್ಯ ಸಮಾನ ವಿಷಯಗಳಾದ ಸರಳ ಜೀವಿತ, ಕಷ್ಟಪಟ್ಟು ಕೆಲಸಮಾಡುವುದರ ಅಭ್ಯಾಸ, ಸ್ಥಿರಚಿತ್ತತೆ ಮತ್ತು ಪ್ರಾರ್ಥನೆ ಇವುಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದ ನಂತರ ಹೀಗೆ ಹೇಳಿದರು:

"ನೀವು ರಮಝಾನ್ ತಿಂಗಳಲ್ಲಿ ಅದರ ಲಾಭ ಪಡೆಯಲು ಇಚ್ಛಿಸುವುದಾದರೆ, ತಹ್‌ರೀಕ್ ಜದೀದ್ ಅಭಿಯಾನದಲ್ಲಿ ಭಾಗವಹಿಸಿರಿ. ನೀವು ತಹ್‌ರೀಕ್ ಜದೀದ್‌ಗೆ ಲಾಭ ಉಂಟು ಮಾಡಲು ಬಯಸುವುದಾದರೆ, ಉಪವಾಸದಿಂದ ಸರಿಯಾದ ರೀತಿಯಲ್ಲಿ ಲಾಭ ಪಡೆಯಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವಿತ ಕೈಗೊಳ್ಳುವುದು, ಕಷ್ಟಪಟ್ಟು ಕೆಲಸಮಾಡುವ ಮತ್ತು ಬಲಿದಾನಗಳನ್ನು ಮಾಡುವ ಅಭ್ಯಾಸ ಮಾಡಿಕೊಳ್ಳುವುದು ಆಗಿದೆ. ರಮಝಾನ್ ತಿಂಗಳು ಇದೇ ಪಾಠವನ್ನು ನಿಮಗೆ ಕಲಿಸಲಿಕ್ಕೋಸ್ಕರ ಆಗಮಿಸುತ್ತದೆ. ಯಾವ ಉದ್ದೇಶಕ್ಕಾಗಿ ರಮಝಾನ್ ತಿಂಗಳು ಆಗಮಿಸಿದೆಯೋ ಆ ಉದ್ದೇಶ ಲಕ್ಷ್ಯಗಳನ್ನು ತಲುಪಲು ನೀವು ಕಠಿಣ ಪರಿಶ್ರಮ ನಡೆಸಿರಿ.... ಪ್ರತಿಯೊಬ್ಬನು ತನ್ನ ರಮಝಾನ್ ಉಪವಾಸ ತಹ್‌ರೀಕ್ ಜದೀದಿನ ಸಂಯಮನ ನಿಯಮ ಪ್ರಕಾರ ಅನುಷ್ಠಿಸಲು ಪ್ರಯತ್ನಿಸಬೇಕು. ತಹ್‌ರೀಕ್ ಜದೀದ್ ಅನುಷ್ಠಾನವು ರಮಝಾನಿನ ಉಪವಾಸದ ಅನುಷ್ಠಾನದ ಪ್ರಕಾರವಾಗಿರಬೇಕು. ರಮಝಾನ್ ನಮ್ಮ ಶಾರೀರಿಕ ಆಶಾಭಿಲಾಷೆಗಳನ್ನು ಹತೋಟಿಯಲ್ಲಿಡುವುದಾಗಬೇಕು. ತಹ್‌ರೀಕ್ ಜದೀದ್ ನಮ್ಮ ಆತ್ಮಕ್ಕೆ ನವಚೈತನ್ಯ ತುಂಬುವಂತಹದ್ದಾಗಬೇಕು. ರಮಝಾನಿನಿಂದ ನೀವು ಲಾಭ ಪಡೆಯಿರಿ ಎಂದು ನಾನು ಹೇಳಿದುದರ ಅರ್ಥ ನೀವು ತಹ್‌ರೀಕ್ ಜದೀದಿನ ಉದ್ದೇಶ ಲಕ್ಷ್ಯಗಳನ್ನು ರಮಝಾನಿನ ಬೆಳಕಿನಲ್ಲಿ ಮನವರಿಕೆ ಮಾಡಿಕೊಳ್ಳಬೇಕು ಎಂದಾಗಿದೆ. ನೀವು ತಹ್‌ರೀಕ್ ಜದೀದ್ ಕಡೆಗೆ ಲಕ್ಷ್ಯ ನೀಡಿರಿ ಎಂದು ನಾನು ಹೇಳಿದುದರ ಅರ್ಥ ಪ್ರತಿಯೊಂದು ಅವಸ್ಥೆಯಲ್ಲಿಯೂ ರಮಝಾನಿನ ಭಾವನೆ ನಿಮ್ಮ ಮೇಲೆ ಅಧಿಕಾರ ಚಲಾಯಿಸುವಂತಾಗಬೇಕು ಎಂದಾಗಿದೆ. ನಿಜವಾದ ತ್ಯಾಗ ಮತ್ತು ನಿರಂತರ ತ್ಯಾಗ ಮಾಡುವ ಅಭ್ಯಾಸ ನಿಮ್ಮಲ್ಲಿ ಉಂಟುಮಾಡಬೇಕು. ನಿಜವಾದ ತ್ಯಾಗದಿಲ್ಲದೆ ದಾಟಿ ಹೋಗುವ ರಮಝಾನ್ ಸರಿಯಾದ ರಮಝಾನ್ ಅಲ್ಲ. ಆತ್ಮಕ್ಕೆ ನವಚೈತನ್ಯ ನೀಡದೆ ದಾಟಿ ಹೋಗುವ ತಹ್‌ರೀಕ್ ಜದೀದ್ ಸರಿಯಾದ ತಹ್‌ರೀಕ್ ಅನುಷ್ಠಾನವಲ್ಲ." (ಖುತುಬ ಜುಮುಅ 4-11-1938)

ಇದೇ ವಿಷಯವನ್ನು ಮುಂದುವರಿಸುತ್ತಾ 1938 ನವೆಂಬರ್ ದಿನಾಂಕ 11ರಂದು ಶುಕ್ರವಾರದ ಖುತುಬದಲ್ಲಿ ತಹ್‌ರೀಕ್ ಜದೀದ್ ಚಂದಾ ನೀಡುವವರಿಗೋಸ್ಕರ ವಿಶೇಷ ಪ್ರಾರ್ಥನೆ ನಡೆಸಬೇಕೆಂದು ಅಗ್ರಾಹಪಡಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು:–

"ರಮಝಾನ್ ತಿಂಗಳ ಕೊನೆಯ ಹತ್ತು ದಿವಸ ಪ್ರಾರಂಭವಾಗಲಿದೆ. ಈ ತಹ್‌ರೀಕ್ ಜದೀದ್‌ಗೋಸ್ಕರ ಹಿಂದೆ ಮಾಡಿದ ತ್ಯಾಗಗಳ ಬಗ್ಗೆ ಕೃತಜ್ಞತೆ ಅರ್ಪಿಸಲು ಮತ್ತು ಮುಂದೆ ತ್ಯಾಗಗಳನ್ನು ಮಾಡಲು ಶಕ್ತಿಯನ್ನು ಗಳಿಸಲು ಪ್ರಾರ್ಥನೆ ಮಾಡುತ್ತಾ ಈ ದಿನಗಳನ್ನು ವಿನಿಯೋಗಿಸಿರಿ. ಹಿಂದಿನ ವರ್ಷಗಳಲ್ಲಿ ತ್ಯಾಗಗಳನ್ನು ಮಾಡಲು ಯಾರಿಗೆ ಭಾಗ್ಯ ಲಭಿಸಿದೆಯೋ ಅವರು ಅದಕ್ಕೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲಿ. ತ್ಯಾಗಗಳನ್ನು ಮಾಡುವ ಪ್ರತಿಯೊಬ್ಬನಿಗೋಸ್ಕರ ಪ್ರಾರ್ಥನೆ ಮಾಡುವ ಪ್ರತಿಯೊಬ್ಬನು ಪ್ರಾರ್ಥಿಸಲಿ – ಧರ್ಮದ ಪ್ರಗತಿಗೋಸ್ಕರ ಮತ್ತು ಜಮಾಅತನ್ನು ಬಲಪಡಿಸಲು ಮಾಡಿದ ತ್ಯಾಗಗಳ ಫಲಸ್ವರೂಪವಾಗಿ ಅಲ್ಲಾಹನು ಅನುಗ್ರಹಗಳನ್ನು ತ್ಯಾಗಮಾಡುವ ಜನರಿಗೆ ಸುರಿಸಲಿ. ಅಂತಹ ಜನರಿಗೆ ಅಲ್ಲಾಹನು ತನ್ನ ಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗಗಳನ್ನು ಎಷ್ಟು ಪ್ರೀತಿ ಮತ್ತು ನಿಷ್ಠೆಯಿಂದ ಮಾಡಲಾಗಿದೆಯೋ ಅದಕ್ಕೆ ಅನುಸಾರವಾಗಿ ಅಲ್ಲಾಹನು ಅನುಗ್ರಹ ನೀಡಲಿ." (ಅಲ್‌ಫಝ್ಲ್ 15-11-1938)

ಅಲ್‌ಫಝ್ಲ್ ಪತ್ರಿಕೆಯ 1938 ನವೆಂಬರ್ ದಿನಾಂಕ 29ರ ಸಂಚಿಕೆಯಲ್ಲಿ ಮುದ್ರಿಸಲಾದ ಪ್ರಕಟಣೆಗೆ ಅನುಸಾರವಾಗಿ ನಮ್ಮ ಜಮಾಅತಿನ ನಿಷ್ಠಾವಂತರು ಪ್ರತಿವರ್ಷ ರಮಝಾನ್ ತಿಂಗಳು ಮಧ್ಯಕಾಲದೊಳಗೆ ತಮ್ಮ ತಹ್‌ರೀಕ್ ಜದೀದ್ ಚಂದಾದ ವಾಗ್ದಾನಗಳನ್ನು ಶೇಕಡಾ ನೂರರಷ್ಟು ಪಾವತಿ ಮಾಡಿ ಅಲ್ಲಾಹನ ಅನುಗ್ರಹಗಳನ್ನೂ ಪ್ರಕಾಶಗಳನ್ನೂ ಪಡೆಯಲು ಪ್ರತಿ ವರ್ಷ ಪ್ರಯತ್ನಿಸುತ್ತಾ ಇರುತ್ತಾರೆ. ಗಣಿಸಲಾಗದಷ್ಟು ಅನುಗ್ರಹಗಳನ್ನು ಪ್ರದಾನ ಮಾಡುವ ರಮಝಾನ್ ತಿಂಗಳಿಗೆ ಅಲ್ಲಾಹನು ನೀಡಿದ ಸೌಭಾಗ್ಯದ ಮೂಲಕ ನಾವು ಪ್ರವೇಶಿಸಲಿದ್ದೇವೆ. ಆದುದರಿಂದ ತಹ್‌ರೀಕ್ ಜದೀದ್ ಚಂದಾ ನೀಡುವ ಮಹಾನುಭಾವರೊಂದಿಗೆ ಅಪೇಕ್ಷಿಸುತ್ತೇವೆ – ಅವರು ತಮ್ಮ ವೈಭವಶಾಲಿ ಪರಂಪರೆಯನ್ನು ಕಾಪಾಡಿಕೊಂಡು ಈಗಿನಿಂದಲೇ ತ್ಯಾಗಗಳನ್ನು ಮಾಡಲು ಸನ್ನದ್ಧರಾಗಬೇಕು. ರಮಝಾನ್ ದಿನಾಂಕ 15 ರೊಳಗೆ ತಮ್ಮ ವಾಗ್ದಾನಗಳನ್ನು ಪೂರ್ಣವಾಗಿ ಈಡೇರಿಸಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಪ್ರಾರ್ಥನೆಯ ಲಾಭ ಪಡೆಯಲು ಭಾಗ್ಯಗಳಿಸಿರಿ. ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸುವವನಾಗಲಿ, ಆಮೀನ್.

ಎಲ್ಲ ಜಮಾಅತ್‌ಗಳಲ್ಲಿ ಶೇಕಡಾ ನೂರರಷ್ಟು ತಹ್‌ರಿಕ್ ಜದೀದ್ ಚಂದಾ ಪಾವತಿ ಮಾಡಿದವರ ಪಟ್ಟಿಯನ್ನು ರಮಝಾನ್ ದಿನಾಂಕ 29ರಂದು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು ನಡೆಸುವ ಸಾಮೂಹಿಕ ದುಆದ ಸಂದರ್ಭದಲ್ಲಿ ಹುಝೂರ್‌ರವರಿಗೆ ಸಲ್ಲಿಸಲಾಗುವುದು.

ಜಝಾಕುಮುಲ್ಲಾಹು ತಆಲಾ ಖೈರ, ಅಲ್ಲಾಹನು ನಿಮಗೆ ಉತ್ತಮ ಪ್ರತಿಫಲ ನೀಡಲಿ, ಆಮೀನ್.

ವಿನೀತ

ಖುರ್‌ಶೀದ್ ಅಹ್ಮದ್ ಅನ್‌ವರ್

ವಕೀಲುಲ್ ಮಾಲ್ ತಹ್‌ರಿಕ್ ಜದೀದ್, ಖಾದಿಯಾನ್.

# ಮಹ್‌ದಿ ಇಮಾಮರ ಚಿಹ್ನೆ

- ಕೆ. ಎಂ. ಉಮರ್, ಮಡಿಕೇರಿ

ಪ್ರಪಂಚ ಸೃಷ್ಟಿಗೆ ಕಾರಣಕರ್ತರು
ಪ್ರವಾದಿ ಗಣ್ಯರ ನುಡಿಮುತ್ತು
ಪ್ರವಾದನಗೈದರು ಮಹ್‌ದಿಯ ಕಾಲದಿ
ಪ್ರಳಯವು ಭಯಂಕರ ಆಪತ್ತು

ಏಕನಯನದಾ ದಜ್ಜಾಲನು ತಾ
ಭುವಿಯಲಿ ಅಕ್ರಮ ತೊಡಗುವನು
ಎಡಗೈಲಿ ಸ್ವರ್ಗವ ಬಲಗೈಲಿ ನರಕವಾ
ತೋರುತ ಜನರನು ವಂಚಿಪನು

ಯಲ್‌ಜೂಜ್ ಮಲ್‌ಜೂಜರಾಗಲೆ ಬರುವರು
ಜನರೆಡೆ ಕಲಹವ ಬಿತ್ತುವರು
ಯಾತನೆ ತರುವಂಥ ರೋಗವು ಬರುವುದು
ದಾಬತುಲ್ ಅರ್‌ಲಿನ ಸ್ಫೋಟನವು

ಒಂಟೆ ಸವಾರಿಯ ತ್ಯಜಿಸುವ ಕಾಲದಿ
ಬರುವರು ಲೋಕಕೆ ಮಹ್‌ದಿಯರು
ಒಟ್ಟಿಗೆ ಕೂಡಿಸಿ ಜನರಿಗೆ ದೀನಿನ
ಸುಂದರ ರೂಪವ ತೋರುವರು

ಎಪ್ಪತ್ತ ಮೂರು ಪಂಗಡವಾದಿತು
ಮುಸ್ಲಿಮರೆಡೆ ಆ ಕಾಲದಲಿ
ಎಪ್ಪತ್ತೆರಡೂ ಹೋಗುತ ನರಕಕೆ
ಹೋಗುವುದೊಂದೇ ಸ್ವರ್ಗದಲಿ

ರಮಝಾನ್ ತಿಂಗಳ ಒಂದರಲೆರಡು
ಗ್ರಹಣಗಳು ರವಿಚಂದ್ರರಿಗೆ
ರಂಗಕ್ಕಿಳಿಯುತ ನಾರಿಯರಾಗ
ಪುರುಷರ ವೇಷವ ಧರಿಸುವರು

ಖುರ್‌ಆನಿನ ಲಿಪಿ ಇಸ್ಲಾಮಿನ ಹೆಸರಲ್ಲದೆ
ಉಳಿಯದು ಇನ್ನೇನೂ
ಕಳ್ಳರು ಕಟುಕರು ಸುಳ್ಳರು ವಂಚಕ
ರಾಗುವರತಿ ಆ ಕಾಲದಲಿ

ಹೆಜ್ಜೆ ಹೆಜ್ಜೆಗೂ ನಾಶ ನಷ್ಟಗಳು
ಅತಿಯಾಗುವುವು ಆ ಕಾಲದಲಿ
ಎಲ್ಲಿ ನೋಡಿದರೂ ಘೋರ ನೋಟಗಳ
ದೃಶ್ಯವೇ ಎದುರಿಗೆ ಕಾಣುವುದು

ಗಗನ ಚುಂಬಿಸೋ ಪ್ರಾರ್ಥನಾಲಯ
ಭೀಮಾಕಾರದಿ ಹೆಚ್ಚುವುದು
ಆದರೂ ದೇವರ ಭಕ್ತಿಯು ಜನರಲಿ
ಮಾಯವಾಗುತಾ ಹೋಗುವುದು

ಉಲಮಾಗಳು ಅತಿ ನಿಕೃಷ್ಟರಾಗುತ
ಹರಡುವರು ತಾ ಲೋಕದಲಿ
ಮಾನ ಮಾರ್ಯದೆಗಳನ್ನು ತೊರೆದು
ಬಾಳುವರು ನಿರ್ಲಜ್ಜೆಯಲಿ

ವಾನರ ವರ್ಗಕೆ ಹೋಲಿಸಿದರು ನಬಿ
ಮಹ್‌ದಿಯ ಕಾಲದ ಪಂಡಿತರ
ವಾಗ್ದತ್ತ ಮಹ್‌ದಿಯ ಆಗಮನದಲಿ
ನೆರವೇರಿತು ನಬಿ ವಚನಗಳು

ದಜ್ಜಾಲನ ಜೊತೆ ಯುದ್ಧವು ನಡೆಯಿತು
ಗದ್ದಲವಾಯಿತು ಜಗವೆಲ್ಲ
ಶಿಲುಬೆಯ ಒಡೆದರು ಹಂದಿಯ ಕೊಂದರು
ರಕ್ಷಣೆ ನೀಡಿದರು ಜನಕೆಲ್ಲ

ದೇವರು ನೀಡಿದ ಅಮೃತ ಪಾನವ
ತಳ್ಳಿದರು ಜನ ದೂರಕ್ಕೆ
ಚಾಚಿದರು ಕರ ಬುದ್ಧಿ ಹೀನರು
ಪಾಷಾಣದ ಕಹಿ ಡಬ್ಬಕ್ಕೆ

ಇಲ್ಯಾಸ್ ಇರುವರು ಗಗನದಲೆಂದು
ಜೂದರು ಕಾಯುತ ಕುಳಿತಿರಲು
ಈಸ ಗಗನದಿಂದಿಳಿಯುವರೆಂದು
ಮುಸ್ಲಿಮರೂ ತಾ ಕಾಯುವರು

ಸೂರ್ಯಚಂದ್ರರು ಧರೆ ಆಕಾಶವು
ಮಹ್‌ದಿಯಾ ಸತ್ಯಕೆ ಸಾಕ್ಷಿಗಳು
ಸೂರ್ಯ ಮೂಡಿತು ಕೋಟಿಗಳಾತ್ಮದಿ
ಇಸ್ಲಾಮಿನ ಹೊಂಗಿರಣಗಳು

ನಾಶವಾದರು ನಾನಾ ರೂಪದಿ
ಭುಟ್ಟೊ ಫೈಝುಲರೂ ಝಿಯಾ
ಸಾಕಿ ಸಲಹಿದನು ಸರ್ವಾಧಿನಾಥನು
ಅಹ್ಮದಿಯತಿನ ನಿತ್ಯ ಜಯ

ಕಬ್ಬಿಣ ಹಾರಿತು ಯಂತ್ರವು ಹಾಡಿತು
ಬಾಣವು ಜಿಗಿಯಿತು ಗಗನಕೆ
ಕಂಪನ ಪ್ರಳಯವು ಕಠೋರ ಪ್ಲೇಗೂ
ಲೋಕ ಮಹಾಯುದ್ಧಗಳೆರಡಾಯಿತು

ಅಗ್ನಿಯ ನುಂಗುತ ಅಗ್ನಿಯ ಕಾರುತ
ಬಂದಿತು ದಜ್ಜಾಲನ ಕತ್ತೆ
ಗರ್ಭವ ಧರಿಸುತ ಗರ್ಭವ ಹಡೆಯುತ
ಓಡಿತು ರಭಸದಿ ಅದು ಮತ್ತೆ

ಮೃಗಗಳ ಸಂಗ್ರಹ ದೂರವಾಣಿ ಕರೆ
ದೂರದರ್ಶನಗಳು ಬಂದೋಯ್ತು
ದಾನ ಧರ್ಮಗಳು ಮಾಯವಾಗುತಲಿ
ನಾಸ್ತಿಕವಾದವೆ ಅತಿಯಾಯ್ತು


ಪ್ರವಚನವೆಲ್ಲವೂ ಪೂರ್ತಿಯಾಗಿದೆ
ಮಹ್‌ದಿ ಇಮಾಮರ ಸತ್ಯತೆಗೆ
ಪ್ರಪಂಚದೆಲ್ಲೆಡೆ ಸಾರಿ ಹೇಳುವ
ಮಹ್‌ದಿ ಇಮಾಮರ ಸತ್ಯತೆಯ

ಮಹ್‌ದಿ ಮಸೀಹರ ಅಮೃತ ಹಸ್ತದಿ
ನಾಟಿಗೈದಿರೋ ಸತ್ಯವಿದು
ಮನದಲಿ ಹಗೆತನ ಮರೆತರೆ ಉತ್ತಮ
ನಾಶಗಳಿಸುವ ದಾರಿಯದು


ಪ್ರಪಂಚ ಸೃಷ್ಟಿಗೆ ಕಾರಣಕರ್ತರು
ಪ್ರವಾದಿ ಗಣ್ಯರ ನುಡಿಮುತ್ತು
ಪ್ರವಾದನಗೈದರು ಮಹ್‌ದಿಯ ಕಾಲದಿ
ಪ್ರಳಯವು ಭಯಂಕರ ಆಪತ್ತು

★

# ಅಹ್ಮದಿಯಾ ವಾರ್ಷಿಕ ಸಮ್ಮೇಳನಗಳು – 2010



ಜರ್ಮನಿ : ಜೂನ್ 26, 27 – ಜರ್ಮನ್ ಅಹ್ಮದಿಯಾ ವಾರ್ಷಿಕ ಸಮ್ಮೇಳನವನ್ನು
ಅಹ್ಮದಿಯಾ ಖಲೀಫ ಉದ್ಘಾಟಿಸಿದರು.



ಕೆನಡ : ಜುಲೈ 2, 3, 4 ದಿನಾಂಕಗಳಂದು ಜರಗಿದ ಕೆನಡ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ದೃಶ್ಯ




ಅಮೇರಿಕ : ಜುಲೈ 16, 17, 18 ದಿನಾಂಕಗಳಂದು ಸೇರಿದ
ಅಮೇರಿಕನ್ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಮೌಲಾನ ನಸೀಂ ಮಹ್‌ದಿ ಭಾಷಣ ಮಾಡುತ್ತಿದ್ದಾರೆ.
ಅಧ್ಯಕ್ಷತೆ : ಡಾ॥ ಅಹ್ಸನುಲ್ ಝಫರ್ ಸಾಹೇಬ್

Registered with the Registrar of Newspapers for India No. R.N. 27354/75
Yugarashmi Kannada Quarterly, September - 2010. Price : Rs. 10/-

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನೇಶನಲ್

Muslim TV AHMADIYYA International

## THE FIRST ISLAMIC SATELLITE CHANNEL

**Broadcasting Round the clock**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.50 EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-MAIL : INFO@ALISLAM.ORG WEBSITE : HTTP:WWW.ALISLAM.ORG/MTA.TV




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

## ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001